BUDGET ESTIMATES FOR 1975 76

Debate No. 37, 24 and 30 Demands for Grants.

SRI S. M. KRISHNA (Minister for Industries and Parliamentary Affairs) :—Madam Speaker, on behalf of the Minister for Co-operation and on the recommendation of the Governor, I beg to move:

"That a sum not exceeding Rs. 13,88,42,000 be granted to the Government to defray the charges which will come in course of payment during the financial year ending 31st day of March 1976 in respect of Demand No. 37, 'Co-operation, etc.''

MADAM SPEAKER :—Motion moved.

"That a sum not exceeding Rs. 13,88,42,000 be granted to the Government to defray the charges which will come in course of payment during the financial year ending 31st day of March 1976 in respect of Demand No. 37, 'Co-operation, etc.''

SRI R. GUNDU RAO (Minister of State for Information and Youth Services) :—On the recommendation of the Governor, I beg to move:

"That a sum not exceeding Rs. 2,02,17,000 be granted to the Government to defray the charges which will come in course of payment during the financial year ending 31st day of March 1976 in respect of Demand No. 24, 'Youth Services and Flying School'."

"That a sum not exceeding Rs. 1,33,90,000 be granted to the Government to defray the charges which will come in course of payment during the financial year ending 31st day of March 1976 in respect of Demand No. 30 'Information and Publicity'."

MADAM SPEAKER.—Motion moved

"That a sum not exceeding Rs. 2,02,17,000 be granted to the Government to defray the charges which will come in course of payment during the financial year ending 31st day of March 1976 in respect of 'Youth Services and Flying School'."

Demand No. 30 is also deemed to have been moved. All the demands are before the House for discussion.

‡ಶ್ರೀ ಟಿ. ಎಂ ಮಂಜುನಾಥ್ (ತಿಪಟೂರು) :-- ಮಾನ್ಯ ಅಧ್ಯಕ್ಷರೇ ಸರ್ಕಾರದವರು ಇಟ್ಟಿರತಕ್ಕ ಈ ಮೂರು ಬೇಡಿಕೆಗಳ ಮೇಲೆ ಮಾತನಾಡುತ್ತಾ ಕೆಲವು ವಿಚಾರಗಳನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ದುರಾದೃಷ್ಟವಶಾತ್ ಈ ಸಹಕಾರ ಇಲಾಖೆಯನ್ನು ಹೊತ್ತಿರತಕ್ಕ ಮಂತ್ರಿಗಳು ಅಕಸ್ಮಿಕವಾಗಿ ಕಾಲನ್ನು ಮುರಿದುಕೊಂಡು ಆಸ್ಪತ್ರೆಯಲ್ಲಿ ಇದ್ದಾರೆ. ಆದರೆ ಇದರ ಜವಾಬ್ದಾರಿಯನ್ನು ಹೊತ್ತಿರತಕ್ಕ ಸಹಕಾರ ಇಲಾಖೆ ಏನು ಇದೆ, ಇದು ಜನತೆಯ ಹಿತವನ್ನು ಕೋರುವುದರಲ್ಲಿ ತನ್ನ ಕರ್ತವ್ಯವನ್ನು ಅಷ್ಟೊಂದು ಸರಿಯಾಗಿ ಮಾಡಿಲ್ಲ ಎನ್ನುವುದನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ಇದರ ಮೂಲತತ್ವ ಏನು ಎಂದರೆ ಎಲ್ಲರೂ ಕೂಡಿ ಬಾಳಬೇಕು, ಕೂಡಿ ತಿನ್ನಬೇಕು, ಸರ್ವರಿಗೂ ಸಮಪಾಲು ಎನ್ನತಕ್ಕದ್ದು ಇದೆ. ಈ ಒಂದು ಸಹಕಾರ ತತ್ವದ ಮುಖಾಂತರ ಇಡೀ ಮಾನವನ ಸಮಾಜದ ಮೇಲೆ ಎಷ್ಟು ಮಟ್ಟಿಗೆ ಪರಿಣಾಮವಾಗಬೇಕಾಗಿತ್ತೋ ಅಷ್ಟು ಮಟ್ಟಿಗೆ ಆಗಿಲ್ಲ ಎನ್ನತಕ್ಕದ್ದು ನಿರ್ವಿವಾದ. ಅದಕ್ಕೆ ಅನೇಕ ಕಾರಣಗಳನ್ನು ನಾನು ಕೊಡಬಯಸುತ್ತೇನೆ

(MR. DEPUTY SPEAKER IN THE CHAIR)

ಇದಕ್ಕೆ ನಾನು ಅನೇಕ ಕಾರಣಗಳನ್ನು ಕೊಡಬಯಸುತ್ತೇನೆ, ಈ ಸಹಕಾರ ಇಲಾಖೆ ಕೊಟ್ಟಿರತಕ್ಕಂಥ ವರದಿಯನ್ನು ನೋಡಿದಾಗ ಸಂಬಂಧಪಟ್ಟಂತಹ ಸಂಘಗಳ ಪ್ರಗತಿ ಅಷ್ಟಾಗಿ ಆಗಿಲ್ಲ ಎನುವುದನ್ನು ಘಂಟಾಘೋಷವಾಗಿ ಹೇಳಬಯಸುತೇನೆ ಈ ಒಂದು ಇಲಾಖೆಯ ಜವಾಬ್ದಾರಿ ಹೊತ್ತಿರತಕ್ಕಂಥ ರಿಜಿಸ್ಟ್ರಾರ್ ಬಹಳ ದಕ್ಷರಿದ್ದಾರೆ, ಪ್ರಾಮಾಣಿಕರಿದ್ದಾರೆ, ಆದರೆ ಅವರ ಕೈಕೆಳಗೆ ಇರತಕ್ಕಂಥ ಭ್ರಷ್ಟಾ ಅಧಿಕಾರಿಗಳು ಮತ್ತು ನೀತಿಗೆಟ್ಟ ರಾಜಕಾರಣಗಳಿಂದ ಈ ಸಹಕಾರ ಇಲಾಖೆ ಅವ್ಯವಸ್ಥೆಯನ್ನು ಹೊಂದಿ ಸದಸ್ಯರಿಗೆ ಸಿಗಬೇಕಾದಂತಹ ಸೌಲಭ್ಯಗಳು ಸರಿಯಾದ ರೀತಿ ಸಿಕ್ಕದೆ ಇದು ಒಂದು ದೊಡ್ಡ ಅವ್ಯವಹಾರದಲ್ಲಿ ತೊಡಗಿರತಕ್ಕದ್ದಾಗಿದೆ. ನಾನು ಸಹಕಾರದ ಈ ಸಹಕಾರಿ ತತ್ವವನ್ನು

(ಶ್ರೀ ಟಿ. ಎಂ. ಮಂಜುನಾಥ)

ಪರಿಪೂರ್ಣವಾಗಿ ಒಪ್ಪಿಕೊಂಡಂತಹ ವ್ಯಕ್ತಿ. ಆದರೆ ಈ ತತ್ವದ ಅಡಿಯಲ್ಲಿ ಸರ್ಕಾರ ಹಾಕಿಕೊಂಡಿರತಕ್ಕಂಥ ಯೋಜನೆಗಳು ಎಷ್ಟರಮಟ್ಟಿಗೆ ಕಾರ್ಯಗತವಾಗಿವೆ ಎನ್ನುವ ದೆಶೆಯಲ್ಲಿ ನೋಡಿದಾಗ ಈ ಮೂರು ವರ್ಷಗಳಲ್ಲಿ ತಾವು ಈ ಒಂದು ಇಲಾಖೆಯನ್ನು ಕೇವಲ ರಾಜಕೀಯಕ್ಕೋಸ್ಕರವಾಗಿ ಉಪಯೋಗಿಸಿಕೊಂಡು ಇದರ ಸರ್ವ ಸುಖವನ್ನು ಜನತೆಗೆ ಕೊಡುವುದರಲ್ಲಿ ವಿಫಲರಾಗಿರತಕ್ಕ ಸರ್ಕಾರಕ್ಕೆ ಏನು ಹೇಳಬೇಕೋ ಗೊತ್ತಾಗುತ್ತಿಲ್ಲ ತಮ್ಮ ಹೇಳಿಕೆಯಲ್ಲಿ ತಾವು ಕೊಟ್ಟಿರುವಂತೆ ನಮ್ಮ ರಾಜ್ಯದಲ್ಲಿ ಸುಮಾರು ಈಗ 21 ಸಾವಿರಕ್ಕೂ ಮಿಗಿಲಾಗಿ ಸಹಕಾರ ಸಂಸ್ಥೆಗಳನ್ನು ಮಾಡಿದ್ದೀರಿ ಮತ್ತು 49 ಲಕ್ಷ ಜನ ಸದಸ್ಯರೂ ಈ ಸಹಕಾರ ಸಂಸ್ಥೆಗಳಲ್ಲಿ ಇದ್ದಾರೆ. ಗ್ರಾಮಾಂತರ ಪ್ರದೇಶಗಳನ್ನು ಟಾರ್ಗೆಟ್ ಏನು ಇದೆ ಅದರಲ್ಲಿ 99 ಭಾಗ ಈಗಾಗಲೇ ಕವರ್ ಮಾಡಿದ್ದೀರಿ ಎನ್ನುವ ವಿವರಣೆಯನ್ನು ತಾವು ಕೊಟ್ಟಿದ್ದೀರಿ. ಸನ್ಮಾನ್ಯ ಅಧ್ಯಕ್ಷರೇ, ಈ ಸಹಕಾರ ತತ್ವದ ಅಡಿಯಲ್ಲಿ ಇದರ ಉಪಯೋಗವನ್ನು ಕೇವಲ ಕೆಲವೇ ಜನ ಪಡೆಯುತ್ತಿದ್ದಾರೆ. ಸದಸ್ಯರು ನಾಮಕಾವಸ್ಥೆ ಸದಸ್ಯರಾಗಿದ್ದರೂ ಸಹ ಇದರ ಪರಿಪೂರ್ಣ ಉಪಯೋಗವನ್ನು ಗ್ರಾಮಾಂತರ ಪ್ರದೇಶಗಳಲ್ಲಾಗಲೀ ಅಥವಾ ಪಟ್ಟಣ ಪ್ರದೇಶದಲ್ಲಾಗಲಿ ಪ್ರತಿಭಾವಂತ ವ್ಯಕ್ತಿಗಳು ಪಡೆಯುತ್ತಿದ್ದಾರೆ ಆದರೆ ರೈತ ಅಷ್ಟರಮಟ್ಟಿಗೆ ಈ ಸಹಕಾರ ಸಂಘಗಳ ಉಪಯೋಗವನ್ನು ಪಡೆಯದೆ ಇರತಕ್ಕದ್ದು ಬಹಳ ಶೋಚನೀಯ ಸಂಗತಿ. ತಾವು ಒಂದು ಮಾತನ್ನು ಹೇಳಿದ್ದೀರಿ ನಮ್ಮ ದೇಶದಲ್ಲಿ ಹಸಿರು ಕ್ರಾಂತಿಯಾಗಬೇಕಾದರೆ ಸಮಾಜ ಸುಧಾರಣೆ ಆಗಬೇಕಾದರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ರೈತರ ಪ್ರಗತಿಯಾಗಬೇಕಾದರೆ ಅದು ಸಹಕಾರ ತತ್ವದ ಮೇಲೆ ಆಗಬೇಕಾಗಿದೆ ಆ ಒಂದು ಸಹಕಾರ ಇಲಾಖೆ ದಕ್ಷತೆ ಮತ್ತು ಪ್ರಾಮಾಣಿಕತೆಯಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ಮಾಡದೆ ಹೋದ ಪಕ್ಷದಲ್ಲಿ ನಮ್ಮ ದೇಶ ಇನ್ನೂ ಅನೇಕ ಕಷ್ಟ ಪರಂಪರೆಗಳಿಗೆ ಈಡಾಗಬೇಕಾಗುತ್ತದೆಂದು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ತಾವು ಷಾರ್ಟ್ ಟರ್ಮ್ ಲೋನ್, ಮೀಡಿಯಮ್ ಟರ್ಮ್ ಲೋನ್, ಲಾಂಗ್ ಟರ್ಮ್ ಲೋನ್‌ಗಳನ್ನು ರೈತರಿಗೆ ಕೊಡುತ್ತಿದ್ದೀರಿ ಈ ಮೂರು ಬಾಬಿನ ಸಾಲಗಳೂ ಸಹಿತ ನನಗೆ ಕಾಣುವ ಹಾಗೆ ಸರಿಯಾದ ಕಾಲದಲ್ಲಿ ರೈತರಿಗೆ ಕೊಡಿಸಬೇಕಾದಂಥದ್ದು ಮತ್ತು ಅವರಿಗೆ ತಲುಪಬೇಕಾದಂಥದ್ದು ಈ ಇಲಾಖೆಯ ಮತ್ತು ಸರ್ಕಾರದ ಜವಾಬ್ದಾರಿ. ತಾವು ಕೋಟಿ ಕೋಟಿ ರೂಪಾಯಿಗಳನ್ನು ಅಗ್ರಿಕಲ್ಚರಲ್ ಕ್ರೆಡಿಟ್ ಆಗಿ ಕೊಡಿಸುತ್ತಿದ್ದೀರಿ, ಅಷ್ಟು ಹಣವನ್ನು ರೈತರು ಸದ್ವಿನಿಯೋಗ ಮಾಡಿದ್ದರೆ ಆಹಾರದಲ್ಲಿ ಸ್ವಪರಿಪೂರ್ಣತೆ ಆಗುತ್ತಿತ್ತು. ಆರ್ಥಿಕ ರಂಗದಲ್ಲೂ ರೈತರಲ್ಲಿ ಸಮಾನತೆ ಕಂಡುಬರುತ್ತಿತ್ತು. ಆದರೆ ಇವತ್ತು ನೋಡಿದರೆ ಕೇವಲ ಸಾಲವನ್ನು ಪಡೆದಂಥ 100ಕ್ಕೆ 75 ಜನ ಸದಸ್ಯರು ಯಾವ

ಸಾಲವನ್ನೂ ಸದ್ವಿನಿಯೋಗ ಮಾಡಿಕೊಂಡಿಲ್ಲ. ಯಾವ ಒಂದು ಆಹಾರ ಪದಾರ್ಥಗಳನ್ನು ಪ್ರಗತಿಶೀಲವಾಗಿ ಬೆಳೆಸುವುದಕ್ಕೋಸ್ಕರ ರೈತನಿಗೆ ಸಾಲವನ್ನು ಕೊಟ್ಟಿದ್ದೀರೋ ಆ ಒಂದು ಸಾಲ ರೈತರಿಗೆ ಸರಿಯಾದ ರೀತಿಯಲ್ಲಿ ತಲುಪದೆ ಇರುವುದರಿಂದ ಇಷ್ಟೊಂದು ಹಣ ಕೊಟ್ಟರು ಅದು ಅವ್ಯವಹಾರವಾಗಿದೆ ಮತ್ತು ದೇಶಕ್ಕೆ ಹಾನಿಯಾಗಿದೆ ಎಂದು ಹೇಳತಕ್ಕಂಥದ್ದು ನನ್ನ ಒಂದು ವಾದ. ತಾವು ಹೇಳಿರುವ ಹಾಗೆ ಸುಮಾರು 5ನೇ ಪಂಚವಾರ್ಷಿಕ ಯೋಜನೆಯ ಕೊನೆಯೊಳಗೆ 75 ಕೋಟಿ ರೂಪಾಯಿ ಷಾರ್ಟ್ ಟರ್ಮ್ ಲೋನ್, 15 ಕೋಟಿ ರೂಪಾಯಿ ಮೀಡಿಯಮ್ ಟರ್ಮ್ ಲೋನನ್ನು ಕೊಡಬೇಕು ಇಷ್ಟೊಂದು ಕೋಟಿ ರೂಪಾಯಿ ಹಣವನ್ನು ಕೊಡಬೇಕಾದರೆ ಯಾರು ಇದಕ್ಕೆ ಅರ್ಹರು ಎಂದು ಕಂಡು ಹಿಡಿದು ಇಲಾಖೆಯ ಮುಖಾಂತರ ಕೊಡಿಸಬೇಕಾದದು ಅತ್ಯಂತ ಗಮನೀಯ ವಾದುದು ಅದೂ ಅಲ್ಲದೆ ತಾವು ಒಂದು ಹೇಳಿಕೆ ಕೊಟ್ಟಿದ್ದೀರಿ. ರಾಷ್ಟ್ರೀಕೃತ ಬ್ಯಾಂಕುಗಳಿಂದ ಹಣವನ್ನು ರೈತರಿಗೆ ಮುಟ್ಟಿಸುವ ಏರ್ಪಾಡನ್ನು ಮಾಡಿದ್ದೇವೆ ಎಂದು ತಮ್ಮ ಅಂಕಿ ಅಂಶಗಳ ಪ್ರಕಾರ 1973-74 ರಲ್ಲಿ 486 ಲಕ್ಷ ರೂಪಾಯಿ ಗಳನ್ನು ಕೊಟ್ಟಿದ್ದೀರಿ ಈ ಅಂಕಿ ಅಂಶಗಳನ್ನು ನೋಡಿದರೆ ಯಾವ ರಾಷ್ಟ್ರೀ ಕೃತ ಬ್ಯಾಂಕುಗಳೂ ಸಹ ರೈತನಿಗೆ ಸಾಲವನ್ನು ಕೊಡುವುದರಲ್ಲಿ ಮುಂದೆ ಬರು ತ್ತಿಲ್ಲ. ಕೇವಲ ವ್ಯಾಪಾರಸ್ಥರ ಮನೋಭಾವ ಮಾರ್ವಾಡಿ ಬ್ಯಾಂಕುಗಳ ಮನೋ ಭಾವವನ್ನು ಈ ರಾಷ್ಟ್ರೀಕೃತ ಬ್ಯಾಂಕುಗಳು ಬಿಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಈ ಸಹಕಾರ ಇಲಾಖೆಯ ಬೇಡಿಕೆಗೆ ಯಾರು ಧಾತರು ಎಂದು ಗೊತ್ತಾಗುವುದಿಲ್ಲ.

MR. DEPUTY SPEAKER.—Why should it be the Hon. Member's concern so much ? Some times we see the demands were moved by some Minister and the reply was given by some other Minister.

SRI KAGODU THIMMAPPA.—We would like to know who exactly is the Minister.

MR. DEPUTY SPEAKER.—When it had happened please give me the facts and figures.

SRI KAGODU THIMMAPPA.—There demands were in the name of the Co-operative Minister.

MR. DEPUTY SPEAKER.—Who had moved them ?

ಶ್ರೀ ಕಾಗೋಡು ತಿಮ್ಮಪ್ಪ.—ಕೈಗಾರಿಕಾ ಸಚಿವರು ಈ ಬೇಡಿಕೆಯನ್ನು ಸಭೆಯ ಮುಂದೆ ಇಡುವುದಕ್ಕೆ ಮಾತ್ರ ನನ್ನ ಹೊಣೆ ಎಂದು ಹೇಳುತ್ತಾರೆ.

SRI S. M. KRISHNA.—Even if Sri Kagodu Thimmappa wants me to be so irresponsible as that, I am not prepared for it.

ಶ್ರೀ ಟಿ. ಎಂ. ಮಂಜುನಾಥ.—ಬಹಳ ಸಂತೋಷ, ಮಂತ್ರಿಗಳು ಹೇಳ ತಕ್ಕಂಥ ಮಾತು ಒಪ್ಪಬೇಕಾದುದು. ಸ್ಕೀಮ್ಸ್ ಫಾರ್ ಸ್ಮಾಲ್ ಫಾರ್ಮರ್ಸ್ ಡೆವಲಪ್‌ಮೆಂಟ್ ಬಗ್ಗೆ ತಾವು ಒಂದು ಯೋಜನೆಯನ್ನು 4—5 ಡಿಸ್ಟ್ರಿಕ್ಟ್‌ಗಳಿಗೆ ಹಾಕಿಕೊಂಡಿದ್ದೀರಿ ಅದರ ಕೆಳಗೆ ಸುಮಾರು 30 ಲಕ್ಷ ಚಿಲ್ಲರೆ ಜನಗಳನ್ನು ತಾವು ಐಡೆಂಟಿಫೈ ಮಾಡುತ್ತಿದ್ದೀರಿ, ಸ್ಮಾಲ್ ಫಾರ್ಮರ್ಸ್ ಮಾರ್ಜಿನಲ್ ಫಾರ್ಮರ್ಸ್ ಮತ್ತು ಲ್ಯಾಂಡ್ ಲೇಬರರ್ಸ್ ಇವರ ಬಗ್ಗೆ ಈ ಒಂದು ಕಾರ್ಯಕ್ರಮ ಶೇಕಡ 50 ಆಗಿದೆ ಈ ಒಂದು ದೆಸೆಯಲ್ಲಿ ಅವರಿಗೆ ಆರ್ಥಿಕ ನೆರವು ಸಿಗುವಂತೆ ಮಾಡ ಬೇಕಾದುದು ಬಹಳ ಮುಖ್ಯವಾದುದು, ಅದನ್ನು ಕೂಡಲೇ ಮಾಡಬೇಕು ಎನ್ನತಕ್ಕ ಮಾತನ್ನು ನಾನು ಹೇಳಬಯಸುತ್ತೇನೆ. ಇದರ ಬಗ್ಗೆ ಒಂದು ಮಾತನ್ನು ನಾನು ಹೇಳಿದರೆ ತಪ್ಪಾಗಲಾರದು. ನಮ್ಮ ನಿಮ್ಮ ಧ್ಯೇಯ ಎಲ್ಲಾ ಒಂದೆ, ಸ್ವಾತಂತ್ರ್ಯ ಪೂರ್ವದಲ್ಲಿ ನಾನು ಕಂಡ ಹಾಗೆ ಗ್ರಾಮಾಂತರ ಪ್ರದೇಶಗಳಲ್ಲಿ ವ್ಯವಸಾಯ ಉದ್ಯಮವನ್ನು ಮಾಡತಕ್ಕ ರೈತರು ಶ್ರೀಮಂತ ವರ್ತಕರು ಶೋಷಣೆಗೆ ಒಳ ಗಾಗಿದ್ದರೂ ತನ್ನ ದುಡಿಮೆಯನ್ನು ತನಗಾಗಿ ಅಲ್ಲವೆ ಕೇವಲ ಶ್ರೀಮಂತ ವರ್ಗ ಗಳಿಗೆ ಮೀಸಲಿಟ್ಟ ಕಾಲ ಅದು ಆ ರೀತಿ ರೈತರ ಶೋಷಣೆ ನಡೆಯುತ್ತಿತ್ತು. ಈ ಶೋಷಣೆ ಹೋಗಬೇಕು. ರೈತನಿಗೆ ಸರಿಯಾದ ಫಲ ಸಿಗಬೇಕಾದರೆ ಅದು ಸಹಕಾರ ತತ್ವದ ಮೂಲಕ ಈ ಒಂದು ಶೋಷಣೆಯನ್ನು ಹೋಗಲಾಡಿಸು ಸುವುದಕ್ಕೋಸ್ಕರ ಈ ಒಂದು ಸಹಕಾರ ಸಹಕಾರ ಇಲಾಖೆ ಸರಿಯಾಗಿ ಕೆಲಸ ಮಾಡದಿದ್ದರೆ ಈ ಯೋಜನೆಗಳಿಗೆ ಪರಿಪೂರ್ಣವಾದ ಯಶಸ್ಸು ದೊರೆಯುವುದಿಲ್ಲ. ಇವತ್ತು ಸಹಿತ ಶ್ರೀ ಕೃಷ್ಣರವರಲ್ಲಿ ಪ್ರಾರ್ಥನೆ ಏನೆಂದರೆ ಗ್ರಾಮಾಂತರ ಪ್ರದೇಶ ಗಳಲ್ಲಿರತಕ್ಕ ಬಡ ರೈತನ ಸರ್ವ ಕಲ್ಯಾಣ ಆಗಬೇಕಾದರೆ ಅವನ ಹಿತರಕ್ಷಣೆ ಆಗ ಬೇಕಾದರೆ ಯಾರು ಪಟ್ಟಭದ್ರ ಹಿತಾಸಕ್ತಿಗಳ ಕೈಯಲ್ಲಿ ಮತ್ತು ಬಂಡವಾಳಗಾರರ ಕೈಯಲ್ಲಿ ಸಿಕ್ಕಿಬಿದ್ದಿದ್ದಾರೋ ಅವರನ್ನು ಇವರ ಕೈಯಿಂದ ಬಿಡಿಸಬೇಕಾದುದು ಬಹಳ ಮುಖ್ಯವಾದುದು. ಆ ಒಂದು ದೆಸೆಯಲ್ಲಿ ಸರ್ಕಾರ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸು ತ್ತೇನೆ. ಮತ್ತು ಈ ಒಂದು Rehabilitation of weaker District Co-operative Bank ಎಂದು ಹೇಳಿ, ಯಾವುದು ದುರ್ಬಲವಾಗಿರತಕ್ಕ ಜಿಲ್ಲಾ ಬ್ಯಾಂಕಿದೆಯೋ ಅದಕ್ಕೆ ಆರ್ಥಿಕ ನೆರವನ್ನು ಕೊಟ್ಟಿದ್ದೀರಿ. ಆ ರೀತಿ ನಾಲ್ಕು

ಬ್ಯಾಂಕುಗಳಿಗೆ ಕೊಟ್ಟಿದ್ದೀರಿ. ನಾಲ್ಕು ಬ್ಯಾಂಕುಗಳು ದುರ್ಬಲವಾಗುವುದಕ್ಕೆ ಕಾರಣ ಏನು? ಬಹುಶಃ ಅಲ್ಲಿ ಆಡಳಿತ ಕ್ರಮ ಸರಿಯಾಗಿ ಮಾಡಲಿಲ್ಲವೇ ಇದಕ್ಕೆ ಯಾರು ಜವಾಬ್ದಾರರು ಎನ್ನುವುದನ್ನು ತಾವು ಕಂಡುಹಿಡಿಯಬೇಕು. ಇವತ್ತು ತುಮಕೂರು ಜಿಲ್ಲೆಯಲ್ಲಿ ತಾವು ವೀಕರ್ ಬ್ಯಾಂಕ್ ಎಂದು ಹೇಳಿ ಹಿಂದೆ ಹಣ ವನ್ನು ಕೊಟ್ಟಿದ್ದೀರಿ. ಆದರೆ ಈ ಒಂದು ಬ್ಯಾಂಕು ಮತ್ತು ಇತರೆ ಮೂರು ಬ್ಯಾಂಕುಗಳು ಯಾತಕ್ಕೆ ತನ್ನ ಕಾರ್ಯಕ್ರಮದಲ್ಲಿ ವಿಫಲವಾಗಿದೆ, ಯಾತಕ್ಕೆ ಸರಿಯಾದ ರೀತಿಯಲ್ಲಿ ಕಾರ್ಯಕ್ರಮವನ್ನು ಮಾಡಿಲ್ಲ ಎನ್ನುವುದನ್ನು ಕಂಡುಹಿಡಿದು ಅದಕ್ಕೆ ಹೊಣೆಗಾರರು ಯಾರು ಇದ್ದಾರೆ, ತಪ್ಪಿತಸ್ಥರು ಯಾರು ಇದ್ದಾರೆ ಅವರ ಮೇಲೆ ಕೂಡಲೆ ಸರಿಯಾದ ಕ್ರಮ ತೆಗೆದುಕೊಳ್ಳತಕ್ಕ ಕಾರ್ಯಕ್ರಮವನ್ನು ಮಾಡಬೇಕು. ಒಂದು ವಿಚಾರವನ್ನು ನಾನು ಹೇಳಬಯಸುತ್ತೇನೆ. ಅಧ್ಯಕ್ಷರೆ, ಈ ಒಂದು ಸಹಕಾರ ಸಂಘಗಳಲ್ಲಾಗಲೀ ಅಥವಾ ಬ್ಯಾಂಕುಗಳಲ್ಲಾಗಲೀ ಸರ್ಕಾರದ ಯಾವ ಹಸ್ತಕ್ಷೇಪವೂ ಇರಬಾರದು. ಈಗ ಏನಾಗುತ್ತಿದೆಯೆಂದರೆ ಸಹ ಕಾರ ಸಂಘಗಳ ಮತ್ತು ಲ್ಯಾಂಡ್ ಇಂಪ್ರೂವ್‌ಮೆಂಟ್ ಬ್ಯಾಂಕಿನ ಚುನಾವಣೆಗಳು, ಡಿಸ್ಟ್ರಿಕ್ಟ್ ಬೋರ್ಡಿನ ಚನಾವಣೆಗಳು ನಡೆದು ಹೋಗುತ್ತವೆ ಸರ್ಕಾರಕ್ಕೆ ಎಕ್ಸ್ ಅಫಿಷಿಯೋ ಮೆಂಬರ್ಸ್ ಹಾಕತಕ್ಕ ಅಧಿಕಾರ ಇದೆ. ಹೀಗೆ ಹಾಕತಕ್ಕ ಪ್ರಸಂಗ ದಲ್ಲಿ ಏನಾಗುತ್ತದೆ ಎಂದರೆ ಸರ್ವ ಸದಸ್ಯರು ಯಾರನ್ನು ತಿರಸ್ಕರಿಸಿದ್ದಾರೆ ಅಂತಹವರನ್ನು ಸರಕಾರದವರು ನೇಮಿಸುವ ಸಂದರ್ಭಗಳು ಇವೆ. ಈಗ ಮಂಡ್ಯ ಜಿಲ್ಲೆಯಲ್ಲಿ ತೆಗೆದುಕೊಳ್ಳಿ. ಯಾರು ಅನರ್ಹರು ಸೇವೆ ಮಾಡುವುದಕ್ಕೆ ಅರ್ಹತೆ ಇಲ್ಲ ಎಂದು ಹೇಳಿ ಚುನಾವಣೆಯಲ್ಲಿ ಸೋತಿದ್ದಾರೋ ಅಂತಹ ವ್ಯಕ್ತಿಗ ಳನ್ನು ಮತ್ತೆ ಕಮಿಟಿಗೆ ಹಾಕ ವಂತಹ ವ್ಯವಹಾರಗಳು ನಡೆದಿದೆ. ಯಾತಕ್ಕೆ ಈ ಮಾತನ್ನು ಹೇಳಬಯಸುತ್ತೇನೆ ಎಂದರೆ ಯಾವುದೇ ಸಹಕಾರ ಇಲಾಖೆ ತನ್ನ ಕಾರ್ಯಕ್ರಮನ್ನು ರೂಪಿಸಬೇಕಾದರೆ ಅದಕ್ಕೆ ಯಾವ ತರಹದ ಒಂದು ಭಯ ಇರಬಾರದು, ಹಿಡಿತ ಇರಬಾರದು, ಸರ್ವಸ್ವತಂತ್ರ್ಯವಾದ ಅಧಿಕಾರ ವ್ಯಾಪ್ತಿಗೆ ಒಳಪಟ್ಟು ತನ್ನ ಕೆಲಸವನ್ನು ಮಾಡತಕ್ಕಂಥ ಅವಕಾಶ ಕಲ್ಪಿಸಿಕೊಡಬೇಕು. ಈಚೆಗೆ ಎರಡು ಮೂರು ವರ್ಷಗಳಿಂದ ಏನಾಗಿದೆ ಎಂದು ನೋಡಿದರೆ ಚುನಾವಣೆ ಆದಾಗ ಯಾರೋ ಒಬ್ಬರಿಗೆ ಬೆಂಬಲ ಬರಲಿಲ್ಲ; ಒಂದು ಎರಡು ಓಟು ಕಡಿಮೆ ಬಂತು ಎಂದಕೂಡಲೇ ಅಧಿಕಾರಿಗಳು ಅಲ್ಲಿಗೆ ಧಾವಿಸಿ ಬರುವುದು, ಚುನಾವಣೆಗೆ ಮೂರ ದಿವಸ ಇದೆ ಎನ್ನುವಾಗ ಚುನಾವಣೆ ಮುಂದೂಡುವುದು, ಅಲ್ಲಿ ಅಫಿಷಿ ಯಲ್ಸ್ ನಾಮಿನೇಟ್ ಮಾಡಿ ಇಂತಹವರಿಗೆ ಓಟು ಕೊಡಿ ಎಂದು ಆದೇಶ ಕೊಡು ವುದು, ಇವೆಲ್ಲಾ ಸರ್ವೇಸಾಮಾನ್ಯವಾಗಿ ನಡೆದುಬರುವುದು ಜನಜ್ಞನಿತವಾಗಿದೆ. ಪ್ರಜಾಪ್ರಭುತ್ವ ಹಿತದೃಷ್ಟಿಯಿಂದ ಮಾಡತಕ್ಕ ಕೆಲಸದಲ್ಲಿ ಆಡಳಿತವನ್ನು ನಡೆಸತಕ್ಕ ವರು ಇಂತಹ ಅವ್ಯವಹಾರ ಮಾಡುತ್ತಾ ಹೋದರೆ ಸಹಕಾರ ಇಲಾಖೆ ಎಷ್ಟು ಮಟ್ಟಿಗೆ ಕೆಲಸ ಮಾಡುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಸರ್ವ ಸದಸ್ಯರ ಸಭೆಯಲ್ಲಿ ಚುನಾವಣೆಯಾಗಿರುವುದರಿಂದ ಬಹುಮತ ಬಂದರೆ ಅಧ್ಯಕ್ಷ

(ಶ್ರೀ ಟಿ. ಎಂ. ಮಂಜುನಾಥ)

ರಾಗಬಹುದು ಅಥವಾ ಇಲ್ಲವೇ ಇರಬಹುದು. ಅದರ ಮೇಲೆ ವ್ಯಾಮೋಹವನ್ನು ಯಾರೂ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಮತ್ತು ಅದರ ಮೇಲೆ ಪಕ್ಷವನ್ನು ಬೆಳೆಸುವ ಉದ್ದೇಶದಿಂದ ಅವ್ಯವಹಾರ ಮಾಡಲು ಸರ್ಕಾರ ಹೋಗತಕ್ಕಂಥಾದ್ದು ಉಚಿತವಲ್ಲ. ಇದು ನಾಚಿಕೆಗೇಡುತನ, ಮುಠ್ಠಾಳತನ. ತನಗೆ ಶಕ್ತಿ ಇದ್ದರೆ ಜನತೆಯಲ್ಲಿ ವಿಶ್ವಾಸವಿದ್ದರೆ ಸ್ಥಾನವನ್ನು ಗಳಿಸಿಕೊಳ್ಳಬೇಕು ಅದು ಬಿಟ್ಟು ಸರ್ಕಾರದ ನೀತಿ ಇಲ್ಲದಂತಹ ನೆರವನ್ನು ಪಡೆದುಕೊಂಡು ಮಾಡತಕ್ಕದ್ದನ್ನು ನಾನು ಟೀಕಿಸುತ್ತೇನೆ ಸರ್ಕಾರದ ಹಣ ದುರುಪಯೋಗವಾದರೆ, ಸಾರ್ವಜನಿಕ ಹಣ ದುರುಪಯೋಗವಾದರೆ ಆಗ ಮಾತ್ರ. ಆಗ ಸರ್ಕಾರ ನೇಮಿಸಿದಾಗ ಅಧಿಕಾರಿಗಳು ಮೀಟಿಂಗ್ ಅಟೆಂಡ್ ಮಾಡಿ ಎಲ್ಲಾ ಕಾರ್ಯಕ್ರಮಗಳಲ್ಲೂ ಭಾಗವಹಿಸುವುದಕ್ಕೆ ಅವಕಾಶ ಕೊಟ್ಟು ಅವರಿಗೆ ಓಟಿಂಗ್ ಪವರ್ ತೆಗೆದುಹಾಕಬೇಕು ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಕೋ-ಅಪರೇಟೀವ್ ಡಿಪಾರ್ಟ್‌ಮೆಂಟಿನಲ್ಲಿ ಪ್ರತ್ಯೇಕವಾದಂಥ ಒಂದು ವ್ಯವಸ್ಥೆಯನ್ನು ಮಾಡಿದ್ದೀರಿ. ಷೆಡ್ಯೂಲ್ ಕ್ಯಾಸ್ಟ್ ಷೆಡ್ಯೂಲ್ ಟ್ರೈಬ್ಸ್ ಇವರ ಅಭಿವೃದ್ಧಿಗೋಸ್ಕರ ತಾವು ಮಾಡಿಕೊಂಡಿರತಕ್ಕ ಯೋಜನೆ ಏನಿದೆ ಅದು ಸ್ವಾಗತಾರ್ಹ ಅದನ್ನು ಸರಿಯಾದ ರೀತಿಯಲ್ಲಿ ತಾವು ಕಾರ್ಯಕ್ರಮವನ್ನು ಮಾಡಬೇಕು ಎಂಬ ಮಾತನ್ನು ನಾನು ಹೇಳುತ್ತೇನೆ. ಸಹಕಾರ ತತ್ವದ ಮೂಲ ಜನತೆ ಮುಂದೆ ಬರಬೇಕಾದರೆ ಇದರ ಒಂದು ಪರಿಶ್ರಮ ಹಳ್ಳಿಗಾಡಿನಲ್ಲಿ ಆಗಬೇಕಾದರೆ ಭೂ ಅಭಿವೃದ್ಧಿ ಬ್ಯಾಂಕುಗಳು ತಾಲ್ಲೂಕು ಮಟ್ಟದಲ್ಲಿ ಅವರ ಕಾರ್ಯಕ್ರಮ ನಡೆಸಬೇಕಾಗುತ್ತೆ. ಯಾಕೆಂದರೆ ರೈತನಿಗೆ ಬೇಕಾಗುವಂತಹ ಸವಲತ್ತನ್ನು ಆರ್ಥಿಕ ಸಹಾಯವನ್ನು ಕೊಡತಕ್ಕ ಏಕೈಕ ಸಂಸ್ಥೆ ಅಂದರೆ ಈ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್. ಇದರ ಜವಾಬ್ದಾರಿಯನ್ನು ಹೊತ್ತಿರತಕ್ಕ ಅಧ್ಯಕ್ಷರಾದಂಥ ಸನ್ಮಾನ್ಯ ಬಿ.ಎಸ್. ವಿಶ್ವನಾಥ್ ಅವರು ಬಹಳ ವರ್ಷಗಳಿಂದ ಜವಾಬ್ದಾರಿ ಹೊತ್ತಿರುವುದು ಹೆಮ್ಮೆಯ ವಿಷಯ. ಕರ್ನಾಟಕ ಭೂ ಅಭಿವೃದ್ಧಿ ಬ್ಯಾಂಕ್ ಉತ್ತಮವಾದ ಕೆಲಸವನ್ನು ಮಾಡುತ್ತಿದೆ ಎನ್ನುವುದನ್ನು ನಾನು ನೋಡಿದ್ದೇನೆ, ಮತ್ತು ನಂಬಿದ್ದೇನೆ ಆದರೆ ತಾಲ್ಲೂಕು ಮಟ್ಟದಲ್ಲಿರತಕ್ಕ ಭೂ ಅಭಿವೃದ್ಧಿ ಬ್ಯಾಂಕುಗಳು ಕೆಲವು ಸರಿಯಾದ ರೀತಿಯಲ್ಲಿ ಕೆಲಸ ಮಾಡಿದರೂ ಇನ್ನು ಕೆಲವಾರು ಬ್ಯಾಂಕುಗಳು ಅಷ್ಟೊಂದು ಪ್ರಾಮಾಣಿಕತೆಯಿಂದ ಕೆಲಸ ಮಾಡತಕ್ಕಂಥಾದನ್ನು ನೋಡಿಲ್ಲ ಆದ್ದರಿಂದ ಸಂಬಂಧಪಟ್ಟಂಥ ಅಧಿಕಾರಿಗಳು ಇದರ ಬಗ್ಗೆ ಹೆಚ್ಚಿನ ಶ್ರಮವಹಿಸಿ ಪ್ರತಿಯೊಂದು ಬ್ಯಾಂಕುಗಳಿಂದ ಆಯಾಯ ತಾಲ್ಲೂಕುಗಳಲ್ಲಿರತಕ್ಕ ಸರ್ವಸದಸ್ಯರಿಗೂ ಸರಿಯಾದ ರೀತಿಯಲ್ಲಿ ಆರ್ಥಿಕ ನೆರವು ಸಿಕ್ಕಿ ಇದರ ಮುಖಾಂತರ ವ್ಯವಸಾಯ ಉತ್ತಮವಾದ ರೀತಿಯಲ್ಲಿ ನಡೆಯುವಂತೆ ಮಾಡಬೇಕು. ತಮಗೆ ಗೊತ್ತಿರುವ ಹಾಗೆ ರೈತನಿಗೆ ವ್ಯವಸಾಯ ಮುಖ್ಯ ಕಸುಬು. ಅವನಿಗೆ ವ್ಯವಸಾಯಕ್ಕೆ ಹಣ ಬೇಕಾಗಿದೆ ತಾವು ಬ್ಯಾಂಕಿನಿಂದ ಹಣ ಕೊಡತಕ್ಕ ಯೋಜನೆಯನ್ನು ಹಾಕಿಕೊಂಡಿದ್ದೀರಿ

ಬಹುಶಃ ನೂರು ಕೋಟಿ ರೂಪಾಯಿಗಳನ್ನು ಮೂರು ಲಕ್ಷ ಜನರಿಗೆ ಕೊಟ್ಟು ಸಹಾಯ ಮಾಡುವ ದೊಡ್ಡ ಯೋಜನೆ ಹಾಕಿಕೊಂಡಿದ್ದೀರಿ. ಬಾವಿಗಳನ್ನು ತೋಡಿಸುವುದು ಪಂಪ್‌ಸೆಟ್ಟುಗಳನ್ನು ಕೊಡಿಸುವುದು, ಇವುಗಳ ಬಗ್ಗೆ ಬರೀ ಅಂಕಿ ಅಂಶಗಳನ್ನು ತೋರಿಸದೆ ದಯವಿಟ್ಟು ಕಾರ್ಯಗತ ಮಾಡ ತಕ್ಕಂಥ ದಿಶೆಯಲ್ಲಿ ಹೊರಡಬೇಕು ಎನ್ನುವ ಮಾತನ್ನು ನಾನು ನಿಮಗೆ ಹೇಳಬಯಸು ತ್ತೇನೆ. ಮತ್ತೆ ಈ ಕೊ-ಆಪರೇಟೀವ್ ಫಾರಂ ಎನ್ನತಕ್ಕಂಥಾದ್ದನ್ನು ಮಾಡಿ ದ್ದೀರಿ. ಸುಮಾರು 604 ಜಾಯಿಂಟ್ ಕೊ-ಆಪರೇಟೀವ್ ಫಾರಂಗಳಿವೆ ಎಂದು ಹೇಳಿದ್ದೀರಿ. ಅದರ ವ್ಯಾಪ್ತಿ 69759 ಎಕರೆ. 1974–75ರಲ್ಲಿ ಈ ಭೂಮಿಯಲ್ಲಿ ಕಲ್ಟಿವೇಷನ್ ಆಗಿರತಕ್ಕದ್ದು 46018 ಎಕರೆ ಅಂದರೆ 62,24,350 ರೂಪಾಯಿಗಳ ಮೊತ್ತದ ಬೆಳೆಯನ್ನು ಬೆಳೆದಿದ್ದಾರೆ. ಇದು ನಾಚಿಕೆಗೇಡು. ಲೆಕ್ಕ ಹಾಕಿದರೆ 92 ಲಕ್ಷ ರೂಪಾಯಿ ಖರ್ಚು ಮಾಡಿದ್ದೀರಿ. ಅಂದರೆ ಸುಮಾರು ಒಂದು ಕೋಟಿ ರೂಪಾಯಿ ಖರ್ಚು ಮಾಡಿದ್ದೀರಿ. 46 ಸಾವಿರ ಎಕರೆ ಭೂಮಿಯನ್ನು ಕೊ-ಆಪ ರೇಟೀವ್ ಫಾರಂನಲ್ಲಿ ಒಪ್ಪಿಸಿದ್ದೀರಿ. ಅವರು ಬೆಳೆದಿರತಕ್ಕದ್ದು ಎಕರೆಗೆ 150 ರೂಪಾಯಿ. ಇಂತಹ ಅನ್ಯಾಯ ಮಾಡಿದ್ದಾರೆ ಸರ್ಕಾರದಲ್ಲಿ ಇರತಕ್ಕ ಹಣ ವನ್ನು ಬೇಜವಾಬ್ದಾರಿ ಆಗಿರತಕ್ಕ ಇವರಿಗೆ ಕೊಟ್ಟಿದ್ದೀರಿ. ಒಂದು ಉದಾಹರಣೆ ಹೇಳಬಯಸುತ್ತೇನೆ ನಮ್ಮ ಊರಿನಲ್ಲಿ ಒಂದು ಫಾರಂ ಇದೆ. ಅದು ಒಂದು ಎಕರೆಗೆ ಸಾವಿರ ರೂಪಾಯಿವರೆಗೆ ಬೆಲೆ ಬಾಳುತ್ತದೆ. 80 ಎಕರೆ ಭೂಮಿಯನ್ನು ತೆಗೆದುಕೊಂಡಿದ್ದಾರೆ. ತಾವು ಉಪಕರಣಗಳನ್ನು ಕೊಟ್ಟಿದ್ದೀರಿ. ಐದು ಸಾವಿರ ರೂಪಾಯಿ ಸಾಲ ಕೊಟ್ಟಿದ್ದಾರೆ ಅಲ್ಲಿ ವ್ಯವಸಾಯ ಯಾರು ಮಾಡುತ್ತಿದ್ದಾರೆ ಎಂದು ತಾವು ಅಲ್ಲಿ ಹೋಗಿ ನೋಡಬೇಕು. ಹರಿಜನರಿಗೆ ಭೂಮಿ ಕೊಡಲಿಲ್ಲ. ಯಾರೋ ನನ್ನಂಥ ಒಬ್ಬ ದೊಡ್ಡ ರೈತನ ಕೈಯಲ್ಲಿ ಜಮೀನನ್ನು ಕೊಟ್ಟು ಆತನು ಅದನ್ನು ಉಪಯೋಗಿಸಿದರೆ ತಮ್ಮಲ್ಲಿ ಪ್ರಜಾಪ್ರಭುತ್ವ, ಸಮತಾವಾದ, ಸಮಾಜ ವಾದ ಎಲ್ಲಿದೆ? ಇದರಲ್ಲಿ ಏನು ಗೊತ್ತಾಗುತ್ತದೆಂದರೆ ಯಾರು ನಿಮ್ಮನ್ನು ಇನ್‌ಫ್ಲ್ಯುಯೆನ್ಸ್ ಮಾಡುತ್ತಾರೆ, ಪ್ರಭಾವ ಬೀರುತ್ತಾರೆ ಅಂತಹವರಿಗೆ ಮಾರು ಹೋಗಿ ಇಂತಹ ಒಂದು ಕೆಲಸವನ್ನು ಮಾಡುತ್ತಿದ್ದೀರಿ I will make a specific charge. ಮಂತ್ರಿಗಳು ದಯವಿಟ್ಟು ಇದರ ಬಗ್ಗೆ ಗಮನ ಕೊಡ ಬೇಕು. ಕನವನಹಳ್ಳಿ ಫಾರ್ಮಿಂಗ್ ಸೊಸೈಟಿ ತಿಪಟೂರು ತಾಲ್ಲೂಕಿನ ಸರ್ವೆ ನಂಬರ್ 1 ರಲ್ಲಿ ಇದೆ. ಬಡವರು ಕೇಳಿದರೆ ಕೊಡುವುದಿಲ್ಲ. ಯಾರೋ ಒಬ್ಬ ದೊಡ್ಡ ರೈತರ ಕೈಗೆ ಕೊಟ್ಟು ಈ ಫಾರಂ ಸೊಸೈಟಿಯಲ್ಲಿ ಇಂತಹ ಅವ್ಯವಹಾರ ಮಾಡುವುದಕ್ಕೆ ಹೋಗಬಾರದು. ಒಂದು ಎಕರೆಯಲ್ಲಿ ಒಂದು ತಿಂಗಳಿಗೆ 150 ರೂಪಾಯಿ ತರಸಲಿಕ್ಕೆ ಒಂದು ಕೋಟಿ ರೂಪಾಯಿ ಖರ್ಚು ಮಾಡಿದೆ ಎಂದರೆ ನಗತಕ್ಕ ಮಾತು. ಇನ್ನು ಒಂದು ಮಾತನ್ನು ತಮಗೆ ಹೇಳಬಯಸುತ್ತೇನೆ ಈ ಸೊಸೈಟಿಗಳಲ್ಲಿ ಅವ್ಯವಹಾರ ಬಹಳ ಜಾಸ್ತಿ ಅನೇಕ ಡಿಫಂಕ್ಟ್ ಸೊಸೈಟಿಗಳ ಬಗ್ಗೆ ಡೆಪ್ಯುಟಿ ರಿಜಿಸ್ಟ್ರಾರ್ ಮತ್ತು ಅಸಿಸ್ಟೆಂಟ್ ರಿಜಿಸ್ಟ್ರಾರ್ ಲೆವಲ್‌ನಲ್ಲಿ ಏನು

(ಶ್ರೀ ಟಿ. ಎಂ. ಮಂಜುನಾಥ)

ಕ್ರಮ ತೆಗೆದುಕೊಂಡಿದ್ದಾರೆ ಎಂದರೆ ಏನೂ ಇಲ್ಲ. ಪ್ರಭಾವಿತ ವ್ಯಕ್ತಿ ಬಂದು ಹೇಳಿದರೆ ಯಾವುದು ಕಾರ್ಯಾಚರಣೆಯಲ್ಲಿ ಜನತೆಯ ಸೇವೆಯನ್ನು ಮಾಡುತ್ತಿವೆಯೋ ಅಂತಹ ಸೊಸೈಟಿಗಳನ್ನು ಸೂಪರ್‌ಸೀಡ್ ಮಾಡುವುದಕ್ಕೆ ನೋಟೀಸ್ ಕೊಡತಕ್ಕ ಕೆಲಸ ಮಾಡುತ್ತಾರೆ. ತಿಪಟೂರು ತಾಲ್ಲೂಕಿನಲ್ಲಿ ಸಹಕಾರ ಇಲಾಖೆಯಷ್ಟು ಹೊಲಸು ಇಲಾಖೆ ಬೇರೆ ಯಾವುದೂ ಇಲ್ಲ

3-30 P.M.

ಇಷ್ಟೊತ್ತು ತಾಲ್ಲೂಕು ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಅಧಿಕಾರಿಗಳು ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದಾರೆ. ಅವರ ವರ್ತನೆ ಬಹಳ ಅಸಹನೀಯವಾಗಿದೆ. ಮತ್ತು ಖಂಡನೀಯ. ಆದದ್ದು, ಅವರಿಗೆ ರೈತರ ಕಷ್ಟ ಗೊತ್ತಿಲ್ಲ. ಯಾರಾದರೂ ಅಧಿಕಾರಿಗಳು ತಪ್ಪು ಮಾಡಿದರೆ, ಕಾರ್ಯದರ್ಶಿಗಳು ಅಧ್ಯಕ್ಷರು ತಪ್ಪು ಮಾಡಿದರೆ ಅವರನ್ನು ಹಿಡಿದುಕೊಳ್ಳದೆ ಯಾರೋ ಒಬ್ಬ ಬಡ ಗುಮಾಸ್ತನನ್ನು ಹಿಡಿದುಕೊಂಡು ಅವನ ಮೇಲೆ ಕೇಸು ಹಾಕುತ್ತಾರೆ. ಈ ಇಲಾಖೆಯಲ್ಲಿ ಸಹಕಾರ ತತ್ವವನ್ನು ದುರುಪಯೋಗ ಪಡಿಸಿಕೊಂಡು ಸ್ವಜನ ಪಕ್ಷಪಾತ ಹೆಚ್ಚಾಗಿದೆ. ದುಡ್ಡು ಪೋಲಾಗುತ್ತಿದೆ, ಈ ಬಗ್ಗೆ ತಮಗೆ ಒಂದು ನಿದರ್ಶನವನ್ನು ಕೊಡುತ್ತೇನೆ. ಕಳೆದ ಸಾರಿ ಈ ಸದನದಲ್ಲಿ ತಿಪಟೂರು ತಾಲ್ಲೂಕಿನಲ್ಲಿರತಕ್ಕ ಅಗ್ರಿಕಲ್‌ಚರಲ್ ಪ್ರೊಡ್ಯೂಜ್ ಮಾರ್ಕೆಟಿಂಗ್ ಸೊಸೈಟಿಯ ಅವ್ಯವಹಾರವನ್ನು ಸುಮಾರು 10 ಅಂಶಗಳನ್ನು ಮಾನ್ಯ ಮಂತ್ರಿಗಳೇ ಒಂದು ಹೇಳಿಕೆ ಕೊಟ್ಟಿದ್ದಾರೆ. ಈ ಸೊಸೈಟಿಯ ಮಾಜಿ ಅಧ್ಯಕ್ಷರು ಸುಮಾರು 19 ಸಾವಿರ ರೂಪಾಯಿಗಳ ದುರ್ವ್ಯವಹಾರ ಮಾಡಿದ್ದಾರೆ. ಮನಸ್ಸು ಬಂದಂತೆ ಇರತಕ್ಕ ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ. ಅವರ ಮೇಲೆ ಇದುವರೆಗೂ ಯಾವ ಕ್ರಮವನ್ನು ಸರ್ಕಾರದವರು ತೆಗೆದುಕೊಂಡಿಲ್ಲ. ಇದು ಅಲ್ಲಿ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಸ್ವತ್ತಾಗಿದೆ ಈ ಸೊಸೈಟಿಯಲ್ಲಿ ಬೇರೆ ಯಾರಾದರೂ ಷೇರು ಹಾಕುತ್ತೇವೆ ಎಂದು ಕೇಳಿದರೆ ಅವಕಾಶವನ್ನು ಕೊಡುವುದಿಲ್ಲ ಎಂದು ಹೇಳುತ್ತಾರೆ. ಆದರೆ ಆ ಸೊಸೈಟಿಯ ಸೆಕ್ರೆಟರಿಯವರು ಜೀಪು ತೆಗೆದುಕೊಂಡು ಒಂದೊಂದು ಊರಿಗೆ ಹೋಗಿ ತಮಗೆ ಬೇಕಾದವರಿಂದ ಷೇರು ಹಣವನ್ನು ತೆಗೆದುಕೊಂಡಿದ್ದಾರೆ. ಒಂದು ಮನೆಯಲ್ಲಿ ಗಂಡ ಹೆಂಡತಿ, ಮಕ್ಕಳು ಎಲ್ಲರನ್ನೂ ಷೇರ್‌ಹೋಲ್ಡರ್ ಆಗಿ ತೆಗೆದುಕೊಂಡಿದ್ದಾರೆ. ಬೇರೆ ಯಾರಾದರೂ ಸಾರ್ವಜನಿಕರು ನಮಗೆ ಷೇರು ಕೊಡಿ ಎಂದು ಕೇಳಿದರೆ ನಿರಾಕರಿಸುತ್ತಾರೆ. ಈ ಸೊಸೈಟಿಯಲ್ಲಿ ಅನೇಕ ಅಕ್ರಮಗಳು ನಡೆಯುತ್ತಿವೆ. ಆ ಸೊಸೈಟಿಯ ಪದಾಧಿಕಾರಿಗಳು ಅಧಿಕಾರಿಗಳನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ. ಇಂಥಾ ಸೊಸೈಟಿಗಳ ಸರ್ಕಾರದವರು ಕ್ರಮ ತೆಗೆದುಕೊಳ್ಳದೇ ಹೋದರೆ ಯಾವ ಒಂದು ನ್ಯಾಯದಿಂದ ಸರ್ಕಾರದವರು ಆಡಳಿತವನ್ನು ಮಾಡುತ್ತಾರೆ ಎನ್ನುವ ಶಂಕೆ

ಜನಗಳಲ್ಲಿ ಮೂಡಿಬರುತ್ತದೆ. ಅಲ್ಲಿರತಕ್ಕ ಸೆಕ್ರೆಟರಿಯವರನ್ನು ಟ್ರಾನ್ಸ್‌ಫರ್ ಮಾಡುವುದಕ್ಕೆ ಬರುವುದಿಲ್ಲ. ಆ ಸೆಕ್ರೆಟರಿಗಳು ಬಿಲ್ಡಿಂಗ್ ಮೇಲೆ ಆಸ್ತಿಯ ಮೇಲೆ ಆಸ್ತಿ ಮಾಡುತ್ತಿದ್ದಾರೆ. ಆ ಹಣವೆಲ್ಲಾ ಅವರಿಗೆ ಎಲ್ಲಿಂದ ಬಂತು? ಒಂದು ಮಾತನ್ನು ಹೇಳುತ್ತೇನೆ, ಎಲ್ಲಾ ಸೊಸೈಟಿಗಳಲ್ಲಿಯೂ ಕೊನೆಗೆ ಏನಾದರೂ ಲಾಭ ಬಂದರೆ, ಅಥವಾ ಷಾರ್ಟೇಜ್ ಬಂದರೆ ಎಷ್ಟು ಬಂತು ಎಂದು ಹೇಳು ತ್ತಾರೆ. ರೈತರಿಗೆ ಮೋಸ ಮಾಡಿದರೆ ಹೆಚ್ಚಳ ಬರುತ್ತದೆ. ಆದರೆ ಈ ಸೊಸೈಟಿ ಯಲ್ಲಿ ಷಾರ್ಟೇಜ್ ಬಂದದ್ದನ್ನು ತೋರಿಸಿಲ್ಲ. ಹೆಚ್ಚಳ ಬಂದದ್ದನ್ನು ತೋರಿಸಿಲ್ಲ. ಹೆಚ್ಚಿಗೆ ಬಂದಂತಹ ಹಣ ಎಲ್ಲಿ ಹೋಯಿತು? ಈ ಕೂಡಲೇ ಅಲ್ಲಿ ಸಂಬಂಧ ಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಯಾವುದೋ ಒಂದು ರಾಜಕೀಯ ಗುಂಪಿಗೆ ಸೇರಿದ ಅಧ್ಯಕ್ಷರು ಅಲ್ಲಿ ಇರುತ್ತಾರೆ. ಅಲ್ಲಿ ಸಾರ್ವಜನಿಕ ಹಣಕ್ಕೆ ಭದ್ರತೆಯನ್ನು ಒದಗಿಸಿ ಅಲ್ಲಿ ಬರತಕ್ಕ ಲಾಭವನ್ನು ಸದ್ವಿನಿಯೋಗ ಮಾಡತಕ್ಕ ಕೆಲಸ ಮಾಡದೆ ಹೋದರೆ ಇದು ಸರ್ಕಾರವೇ? ಎನ್ನತಕ್ಕಂಥ ಪ್ರಶ್ನೆ ನಮ್ಮಲ್ಲಿ ಮೂಡಿಬರುತ್ತದೆ.

ಆ ಮೇಲೆ ಕುಣಿಗಲ್‌ನಲ್ಲಿ ಲ್ಯಾಂಡ್ ಇಂಪ್ರೂವ್‌ಮೆಂಟ್ ಬ್ಯಾಂಕ್‌ನಲ್ಲಿ ಶ್ರೀ ಮಾನ್ ರಾಜಶೇಖರಯ್ಯ ಎನ್ನುವವರು ಲ್ಯಾಂಡ್ ವ್ಯಾಲ್ಯೂಯೇಷನ್ ಆಫೀಸರ್ ಆಗಿದ್ದಾರೆ. ಅವರು ಮತ್ತು ಅಡ್ಮಿನಿಸ್ಟ್ರೇಟೀವ್ ಆಫೀಸರ್ ಮತ್ತು ಸೆಕ್ರೆಟರಿ ಯವರು ಅಲ್ಲಿ ಅನೇಕ ಅಕ್ರಮಗಳನ್ನು ಮಾಡುತ್ತಿದ್ದಾರೆ. ಅನೇಕರಿಗೆ ಅವರು ಬಾವಿಯನ್ನೇ ತೆಗೆದಿಲ್ಲ, ಸಾಲವನ್ನು ಕೊಟ್ಟಿದ್ದಾರೆ. ಡಿಮ್ಯಾಂಡ್ ತೋರಿಸು ವಾಗ ಲೋನು ಬರಬೇಕಾದ್ದನ್ನು ಕಡಿಮೆ ಪ್ರಮಾಣದಲ್ಲಿ ತೋರಿಸುತ್ತಾರೆ. ಸರ್ಕಾರಕ್ಕೆ ಮೋಸ ಮಾಡುತ್ತಾರೆ. ಇಂಥಾ ಅನ್ಯಾಯ ಅಕ್ರಮಗಳನ್ನು ಮಾಡಿರತಕ್ಕ ಸೆಕ್ರೆಟರಿಯವರ ಮೇಲೆ ಸರ್ಕಾರದವರು ಯಾವ ಕ್ರಮವನ್ನು ತೆಗೆದುಕೊಂಡಿದ್ದಾರೆ ಎನ್ನುವುದನ್ನು ನಾನು ಕೇಳಬಯಸುತ್ತೇನೆ.

ಈ ಸಂದರ್ಭದಲ್ಲಿ ಇನ್ನೊಂದು ವಿಚಾರವನ್ನು ನಾನು ಹೇಳಬಯಸುತ್ತೇನೆ. ಅದು ಉಚಿತ ಎಂದು ನಾನು ಹೇಳುತ್ತೇನೆ. ಕುಣಿಗಲ್ ತಾಲ್ಲೂಕಿನಲ್ಲಿ ಅದೇ ತಾಲ್ಲೂಕಿನ ಒಬ್ಬರು ಮಂತ್ರಿಗಳ ಮೇಲೆ ಅನೇಕ ಆರೋಪಣೆಗಳು ಇವೆ. ಅವ ರಿಂದ ಹಣವನ್ನು ವಸೂಲು ಮಾಡುವ ಬಗ್ಗೆ ಒಂದು ಕೇಸು ಟ್ರಿಬ್ಯೂನಲ್ ಮುಂದೆ ಹೋಗುವುದಕ್ಕೆ ಆಗಿಲ್ಲ. ಸಂಬಂಧಪಟ್ಟ ಫೈಲನ್ನು ಹೊರಗೆ ತೆಗೆಯುವುದಕ್ಕೆ ಅವಕಾಶ ಕೊಡುತ್ತಿಲ್ಲ. ಇದು ನಿಜವಾಗಿಯೂ ನಾಚಿಕೆಗೇಡು. ಈ ರೀತಿ ಆಗ ಬಾರದು. ಸಮಾಜದಲ್ಲಿ ದ್ರೋಹ ಮಾಡಬಾರದು. ಯಾರಾದರೂ ಒಬ್ಬ ನೌಕರ ತಪ್ಪು ಮಾಡಿದರೆ ಅವನನ್ನು ಸಸ್ಪೆಂಡ್ ಮಾಡುತ್ತಾರೆ. ಯಾರಾದರೂ ಒಬ್ಬ ಪ್ರಭಾವಿ ವ್ಯಕ್ತಿ ಸಮಾಜಘಾತುಕ ಕೆಲಸ ಮಾಡಿದರೆ ಅವನ ಮೇಲೆ ಕ್ರಮ ತೆಗೆದು ಕೊಳ್ಳುವುದಕ್ಕೆ ಹಿಂದೂ ಮುಂದೂ ನೋಡುತ್ತಾರೆ.

(ಶ್ರೀ ಟಿ. ಎಂ. ಮಂಜುನಾಥ)

ಮತ್ತೊಂದು ವಿಚಾರವನ್ನು ಹೇಳುತ್ತೇನೆ. ಡಿಸ್‌ಪ್ಯೂಟ್ ಫೈಲ್ ಮಾಡಿಲ್ಲ. 1961 ನೇ ಇಸವಿಯಿಂದ ಬಂದಿಗತಕ್ಕ ಡಿಸ್‌ಪ್ಯೂಟ್ ಫೈಲ್ ಮಾಡಿಲ್ಲ. ಅಂಥಾ ಒಂದು ಫೈಲನ್ನು ನಾಶಮಾಡತಕ್ಕ ಸ್ಥಿತಿಗೆ ಸರ್ಕಾರ ಹೋದರೆ ಸಾರ್ವಜನಿಕರ ಮನಸ್ಸಿನಲ್ಲಿ ಸಂಶಯ ಬರುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಇದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕು. ಕುಣಿಗಲ್ ಲ್ಯಾಂಡ್ ಇಂಪ್ರೂವ್‌ಮೆಂಟ್ ಬ್ಯಾಂಕಿನಲ್ಲಿರತಕ್ಕ ಕೆಳ ಮಟ್ಟದ ಸಿಬ್ಬಂದಿ ವರ್ಗದ ಬಗ್ಗೆ ಮೈಸೂರು ಸ್ಟೇಟ್ ಕೋಆಪರೇಟೀವ್ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀಮಾನ್ ವಿಶ್ವನಾಥ್ ಅವರು ಸ್ವಲ್ಪ ಟ್ಯೂನಪ್ ಮಾಡಬೇಕು. ಈ ಬ್ಯಾಂಕ್ ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿದೆ ಎಂಬುದನ್ನು ನೋಡಬೇಕು. ನಿಜವಾಗಿಯೂ ಅವರು ರೈತರ ಕಷ್ಟವನ್ನು ಅರಿತು ಸಾಲವನ್ನು ಕೊಡುತ್ತಾರೆಯೇ ಎಂಬುದನ್ನು ನೋಡಬೇಕು. ಒಬ್ಬ ಸೂಪರ್‌ವೇಜರ್ ಲಕ್ಷಾಂತರ ರೂಪಾಯಿಗಳನ್ನು ಮಾಡಿ ಕೊಂಡಿದ್ದಾರೆ. ಇಂಥವರ ಮೇಲೆ ಕ್ರಮ ತೆಗೆದುಕೊಳ್ಳದೆ ಇರತಕ್ಕ ಭಂಡ ಸರ್ಕಾರವನ್ನು ಏನೆಂದು ಹೇಳಬೇಕು? ಒಂದೊಂದು ಅಪ್ಲಿಕೇಷನ್‌ಗೆ ಸೂಪರ್ ವೈಜರ್ 30-40 ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆ.

ಶ್ರೀ ಬಿ. ಬೈರಪ್ಪಾಜಿ :— ನಿಮ್ಮ ಶಂಡರ ಸರ್ಕಾರ ಇದ್ದಾಗ ಏನೂ ಅನ್ಯಾಯ ನಡೆಯುತ್ತಾ ಇರಲಿಲ್ಲವೇ?

ಶ್ರೀ ಟಿ. ಎಂ. ಮಂಜುನಾಥ್ :—ಈ ಮುತ್ಠಾಳ ಸರ್ಕಾರದ ಬಗ್ಗೆ ಮುಂದಿನ ಚುನಾವಣೆಯಲ್ಲಿ ಜನತೆ ತೀರ್ಮಾನ ಮಾಡುತ್ತಾರೆ. ಕುಣಿಗಲ್ ಲ್ಯಾಂಡ್ ಇಂಪ್ರೂವ್‌ಮೆಂಟ್ ಬ್ಯಾಂಕಿನಲ್ಲಿ ನಡೆಯುತಕ್ಕ ಅಕ್ರಮ ಮತ್ತು ಅನ್ಯಾಯಗಳನ್ನು 6 ತಿಂಗಳ ಒಳಗೇ ಸರ್ಕಾರಕ್ಕೆ ತಿಳಿಸಿದರೂ ಕೂಡ ಅವರ ಬಗ್ಗೆ ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ? ತಿಪಟೂರು ಅಗ್ರಿಕಲ್‌ಚರಲ್ ಪ್ರೋಡ್ಯೂಜ್ ಮಾರ್ಕೆಟಿಂಗ್ ಸೊಸೈಟಿಯ ಬಗ್ಗೆ ಅಷ್ಟೊಂದು ಕಠೋರವಾಗಿ ಟೀಕೆಗಳನ್ನು ಬರೆದಿದ್ದರೂ ಕೂಡ ಅಲ್ಲಿ ಸಂಬಂಧಪಟ್ಟವರ ಮೇಲೆ ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ? ಆದ್ದರಿಂದ ಅಲ್ಲಿ ಸರ್ಕಾರದವರು ಪ್ರಾಮಾಣಿಕ ರೀತಿಯಲ್ಲಿ ಕ್ರಮವನ್ನು ತೆಗೆದುಕೊಳ್ಳಬೇಕು.

ಜನತಾಬಜಾರ್ ಕೆಲಸಕಾರ್ಯಗಳನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ನಾನು ನೋಡಿದ್ದೇನೆ. ಜನತಾ ಬಜಾರ್‌ನಲ್ಲಿ ಒಂದು ತಿಂಗಳಿಗೆ ಒಂದು ಕೋಟಿ ರೂಪಾಯಿಗಳ ವ್ಯವಹಾರ ನಡೆಯುತ್ತದೆ ಜನತಾ ಬಜಾರ್‌ಗಳಿಗೆ, ಕನ್‌ಸ್ಯೂಮರ್ ಸೊಸೈಟಿಗಳಿಗೆ ಬಳಕೆದಾರರು ಹೋಗುತ್ತಾರೆ. ಅವರು ಅಲ್ಲಿಗೆ ಏತಕ್ಕೆ ಹೋಗುತ್ತಾರೆ ಎಂದರೆ ಸ್ವಲ್ಪ ಕಡಿಮೆ ದರದಲ್ಲಿ ಅಲ್ಲಿ ಆಹಾರ ಪದಾರ್ಥ ಗಳು ಸಿಕ್ಕುತ್ತವೆ ಎಂಬ ದೃಢಮನಸ್ಸಿನಿಂದ ಅವರು ಅಲ್ಲಿಗೆ ಹೋಗುತ್ತಾರೆ. ಆದ್ದರಿಂದ ಈ ಜನತಾಬಜಾರ್‌ಗಳು ತಾಲ್ಲೂಕು ಮಟ್ಟದಲ್ಲಿಯೂ ಆಗಬೇಕು.

ಈಗ ಎಷ್ಟೋ ಕನ್‌ಸ್ಯೂಮರ್ಸ್ ಸೊಸೈಟಿಗಳಿವೆ ಯಾವ ರೀತಿ ಜನತಾ ಬಜಾರಿಗೆ ಹಣದ ಸಹಾಯವನ್ನು ಮಾಡುತ್ತೀರಿ ಎಂಬುದನ್ನು ತಿಳಿಸಬೇಕು ಈಗ ಎಲ್ಲಾ ಕನ್‌ಸ್ಯೂಮರ್ಸ್ ಕೋಅಪರೇಟಿವ ಸೊಸೈಟಿಗಳಿಗೆ ಹಣವನ್ನು ಹೆಚ್ಚು ಹೆಚ್ಚಾಗಿ ಕೊಡಬೇಕು. ಏಕೆಂದರೆ ತಾಲ್ಲೂಕು ಮಟ್ಟದಲ್ಲಿ ಇರತಕ್ಕ ಕನ್‌ಸೂಮರ್ಸ್ ಸೊಸೈಟಿಗಳಿಗೆ ಅಷ್ಟೊಂದು ಶಕ್ತಿ ಇರುವುದಿಲ್ಲ. ಬಂಡವಾಳವೂ ಸಹ ಇರುವುದಿಲ್ಲ ಅಲ್ಲಿ ಸರಿಯಾಗಿ ಪದಾರ್ಥಗಳು ಡಿಸ್ಟ್ರಿಬ್ಯೂಷನ ಆಗುತ್ತಾ ಇಲ್ಲ. ಯಾವ ರೀತಿಯಲ್ಲಿ ದೊಡ್ಡ ದೊಡ್ಡ ಜನತಾ ಬಜಾರ್‌ಗಳಿಗೆ ಬಂಡವಾಳಕ್ಕಾಗಿ ಹಣ ಕೊಡುತ್ತೀರೋ ಅದೇ ರೀತಿಯಲ್ಲಿ ಸಣ್ಣ ಸಣ್ಣ ಕೊ ಅಪರೇಟಿವ್ ಸೊಸೈಟಿಗಳಿಗೂ ಹೆಚ್ಚಿಗೆ ಬಂಡವಾಳವನ್ನು ಕೊಡತಕ್ಕ ಯೋಜನೆಯನ್ನು ತಾವು ಹಾಕಿಕೊಳ್ಳಬೇಕೆಂದು ನಾನು ಈ ದಿಸೆಯಲ್ಲಿ ಹೇಳಬಯಸುತ್ತೇನೆ ಇನ್ನೊಂದು ವಿಷಯ. ಇನ್ನು ಸೊಸೈಟಿಗಳಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡತಕ್ಕ ಸೆಕ್ರೆಟರಿಗಳಿಗೆ 100 ರೂಪಾಯಿಗಳಷ್ಟು ಸಂಬಳ ಕೊಡಬೇಕೆಂದು ಮಾಡಿದ್ದೀರಿ. ಇದು ಬಹಳ ಕಡಿಮೆ. ಇದರಿಂದ ಅಲ್ಲಿ ಬಹಳವಾಗಿ ಅವ್ಯವಹಾರಗಳು. ಹಾಗೂ ಅನ್ಯಾಯಗಳು ಆಗುತ್ತವೆ ಸಕ್ಕರೆ, ಮತ್ತು ಗೋಧಿ ಮೂಟೆಗಳು ಪೇಟೆಯಲ್ಲಿಯೇ ಮಾಯವಾಗುತ್ತವೆ ಹಳ್ಳಿಗಳಲ್ಲಿ ಆ ರೀತಿ ಆಗುವುದಕ್ಕೆ ಆಸ್ಪದವಿಲ್ಲ ಅಲ್ಲಿ ಅದನ್ನು ಯಾರೂ ಮುಟ್ಟುವುದಿಲ್ಲ. ಆದರೆ ಪೇಟೆಗಳಲ್ಲಿ ಅದರಲ್ಲಿಯೂ ಸೊಸೈಟಿಗಳಲ್ಲಿ ಇರತಕ್ಕ ಷೇರುದಾರರು ಯಾವುದೋ ರೀತಿಯಲ್ಲಿ ಅವನ್ನು ಮಾಯಮಾಡುವ ಹಾಗೆ ಮಾಡುತ್ತಾರೆ. ಅದನ್ನು ಸರಿಯಾಗಿ ನೋಡಿಕೊಳ್ಳಬೇಕು. ಅಂತಹ ಸೊಸೈಟಿಗಳು ನಮ್ಮಲ್ಲಿ ಅನೇಕವಿವೆ. ಅವುಗಳ ಬಗ್ಗೆ ಅಧಿಕಾರಿಗಳು ಆಗಿರುವವರು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು.

ಶ್ರೀ ಬಿ. ಬೈರಾಪ್ಪಾಜಿ :—ಅಂತಹ ಸಂಸ್ಥೆಗಳಲ್ಲಿ ಸುಮಾರು ಶೇಕಡ 75 ರಷ್ಟು ಸಂಸ್ಥಾ ಕಾಂಗ್ರೆಸ್‌ನವರೇ ಇದ್ದಾರೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ :—ಅದು ಸರಿಯಲ್ಲ. ಅಂತಹ ನಿದರ್ಶನಗಳು ಯಾವುದಾದರೂ ಇದ್ದರೆ ಮಾನ್ಯ ಸದಸ್ಯರು ಈ ಸಭೆಯಲ್ಲಿ ರುಜುವಾತುಮಾಡಬೇಕು. ಅವರ ಕಡೆಯವರೇ ಹೆಚ್ಚಿಗೆ ಇರುತ್ತಾರೆ.

ಶ್ರೀ ಟಿ. ಎಂ. ಮಂಜುನಾಥ್ —ಮಾನ್ಯ ಶ್ರೀ ಬೈರಾಪ್ಪಾಜಿಯವರು ಹೇಳಿದ ಮಾತನ್ನು ನಾನು ಹೇಗೆ ಒಪ್ಪಬೇಕೋ ನನಗೆ ಅದು ಗೊತ್ತಾಗುತ್ತಾ ಇಲ್ಲ. ಅವರು ಅಂತಹ ಸಂಸ್ಥೆಗಳಲ್ಲಿ ಸಂಸ್ಥಾ ಕಾಂಗ್ರೆಸ್‌ನವರೇ ಜಾಸ್ತಿ ಎಂದು ಹೇಳಿದರು. ಹಾಗಿದ್ದ ಪಕ್ಷದಲ್ಲಿ ಇವರು ಆಡಳಿತಕ್ಕೆ ಬಂದು ಇಲ್ಲಿಗೆ ಕೆಲವಾರು ವರ್ಷಗಳಾದರೂ ಕೂಡ ಸರ್ಕಾರ ಏಕೆ ಕೆಲವು ವಿಷಯಗಳಲ್ಲಿ ಹಿಂಜರಿಯಬೇಕು ? ಅಂತಹ ಗಂಡಸುತನ ಸರ್ಕಾರಕ್ಕೆ ಇದ್ದರೆ ಯಾರು ದುರ್ವ್ಯವಹಾರ ಮಾಡಿದ್ದಾರೋ,

(ಶ್ರೀ ಟಿ. ಎಂ ಮಂಜುನಾಥ್)

ಅವ್ಯವಹಾರ ಮಾಡಿದ್ದಾರೋ ಅಂತಹವರನ್ನು ಏಕೆ ಇವರು ಹಿಡಿಯಲಿಲ್ಲ? ಅಂತಹ ಶಕ್ತಿ ಇವರಿಗೇಕೆ ಇಲ್ಲವೆಂದು ನಾನು ಕೇಳುತ್ತೇನೆ. ನೀವು ಕಳ್ಳರಲ್ಲಿ ದೊಡ್ಡ ಕಳ್ಳರು, ನಮ್ಮ ಪಕ್ಷದ ವಿಚಾರವನ್ನು ಕುರಿತು ಮಾತನಾಡಿದ್ದರಿಂದ ನಾನು ಆ ರೀತಿಯಾಗಿ ಹೇಳಬೇಕಾಗಿದೆ.

ಉಪಾಧ್ಯಕ್ಷರು :—ಹಾಗೆ ನೀವು ದೊಡ್ಡ ಕಳ್ಳರು ಎಂಬುದಾಗಿ ಮಾನ್ಯ ಸದಸ್ಯರು ಹೇಳಿದರೆ ನನಗೆ ಬಹಳವಾಗಿ ಮನಸ್ಸಿಗೆ ನೋವಾಗುತ್ತದೆ. ಆ ರೀತಿ ಹೇಳಬಾರದು.

ಶ್ರೀ ಟಿ. ಎಂ. ಮಂಜನಾಥ್ :—ನಿಜವಾಗಿಯೂ ಸಹ ನಾನು ಆ ವಿಚಾರ ವನ್ನು ಹೇಳುತ್ತೇನೆ ಇಲ್ಲಿ ವನಸ್ಪತಿ ಮಾಡತಕ್ಕದ್ದರಲ್ಲಿ ಸರಿಯಾದ ಅಂಕ-ಅಂಶ ಗಳಿಲ್ಲ. ಅದನ್ನು ಹೆಚ್ಚಿಗೆ ಉತ್ಪತ್ತಿ ಮಾಡಿ ಬಹಳ ಸಂತೋಷ. ಇಲ್ಲದಿದ್ದರೆ ಅದರ ಬೆಲೆ ಇಪತ್ತು ಸಾರ್ವಜನಿಕರಿಗೆ ಬಹಳ ದುಬಾರಿಯಾಗಿದೆ. ಏಕೆಂದರೆ, ಎಣ್ಣೆ, ವನಸ್ಪತಿ ಬಡವರ ಕೈಗೆ ಸಿಗುವುದಿಲ್ಲ ಇದನ್ನು ಸಹಕಾರ ತತ್ವದ ಆಧಾರದ ಮೇಲೆ ಮಾಡಿರುವುದು ವ್ಯವಸ್ಥಿತವಾದ ರೀತಿಯಲ್ಲಿ ಮಾಡಬೇಕು ಕಳೆದ ವರ್ಷ ಇದು ಆಸ್ತಿಯಾಗಿ ಪರಿಗಣಿಸಿದೆ. ಆದರಿಂದ ಬರತಕ್ಕ ಉತ್ಪತ್ತಿ ಎಲ್ಲರಿಗೂ ಸಿಗುವ ಏರ್ಪಾಡು ಮಾಡುವ ಯೋಜನೆಯನ್ನು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಡೈರಿ ಕೊ-ಅಪರೇಟೀವ್ ಪ್ರಾಜೆಕ್ಟ್ ಎಂಬುದಾಗಿ ಮಾಡಿಕೊಂಡಿದ್ದಾರೆ. 8 ಜಿಲ್ಲೆಗಳಿಗೆ ವರ್ಲ್ಡ್ ಬ್ಯಾಂಕಿನಿಂದ ಸುಮಾರು 50 ಕೋಟಿ ರೂಪಾಯಿ ಗಳನ್ನು ತರತಕ್ಕ ವ್ಯವಸ್ಥೆ ಮಾಡಿದ್ದಾರೆ. ಬಹಳ ಸಂತೋಷ ತಾಲ್ಲೂಕು ಮಟ್ಟದಲ್ಲಿ ಹೊಸದಾಗಿ ಅಂತಹ ವ್ಯವಸ್ಥೆಯನ್ನು ಮಾಡಬೇಕು. ಅಲ್ಲಿ ಷೇರು ಎಷ್ಟು ಬರುತ್ತದೋ ಅಂತಹವರಿಗೆ ಮಾತ್ರ ಅವಕಾಶವನ್ನು ಕೊಡಬೇಕು. ನಾನು ವ್ಯವಸಾಯಗಾರನಾಗಿದ್ದೇನೆ. ನನಗೆ ತಿಳಿದಿರುವ ಹಾಗೆ ಅಂತಹ ಸಂಸ್ಥೆ ಗಳಲ್ಲಿ ಸ್ವಜನ ಪಕ್ಷಪಾತ ಹಾಗೂ ಭ್ರಷ್ಟಾಚಾರ ಮಾಡತಕ್ಕವರ ಕೈಲಿ ಆ ಹಣ ವನ್ನು ಕೊಡಬೇಡಿ. ಯಾರೂ ಗ್ರಾಮಾಂತರ ಪ್ರದೇಶಗಳಲ್ಲಿ ಹುಲ್ಲು ತೆಗೆದು ಕೊಂಡು ಬರುತ್ತಾರೋ ಅವರಿಗೆ ಅದನ್ನು ಬೇರೆ ಕಡೆಗಳಿಗೆ ಸಾಗಿಸುವುದಕ್ಕೆ ಅವಕಾಶ ಇಲ್ಲ, ಶಕ್ತಿ ಇಲ್ಲ. ಆದ್ದರಿಂದ ಅಂತಹವರಿಗೆ ಹೆಚ್ಚಿನ ಸಹಾಯವನ್ನು ಸರ್ಕಾರದವರು ಮಾಡಬೇಕು.

ಇನ್ನು ಇಂಡಸ್ಟ್ರಿಯಲ್ ಕೊ-ಆಪರೇಟೀವ್ ಬ್ಯಾಂಕ್ ಎಂಬುದಾಗಿ ಏನಿದೆಯೋ ಅದು ಇನ್ನೂ ಹೆಚ್ಚಿಗೆ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು. ಇದರಲ್ಲಿ ರೀಲರ್ಸ್ ಏನಿದ್ದಾರೆಯೋ ಅಂತಹವರಿಗೆ ಹೆಚ್ಚು ಹಣವನ್ನು ಕೊಡಬೇಕು. ಅವರ ಬಗ್ಗೆ ಹೆಚ್ಚಿಗೆ ಗಮನವನ್ನು ಕೊಡಬೇಕು. ಇದರಲ್ಲಿ ಮಾರ್ಕೆಟಿಂಗ್ ಬಹಳ ಪ್ರಾಮುಖ್ಯವಾದುದು. ರೈತ ತಾನು ಬೆಳೆದ ಮೇಲೆ ತಾನು ಬೆಳೆದಂಥ ಪದಾರ್ಥ ಗಳನ್ನು ಒಂದು ಸುವ್ಯವಸ್ಥಿತವಾದ ರೀತಿಯಲ್ಲಿ ನಿಯಂತ್ರಣ ಮಾರ್ಕೆಟ್ಟಿಗೆ ತಂದು ಮಾರಬೇಕೆಂದು ಹೇಳುವುದು ಒಂದು ಧ್ಯೇಯ. ಅದು ಬಹಳ ಒಳ್ಳೆಯದು. ನಮ್ಮ ದೇಶದಲ್ಲಿ ಅದು ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿದೆಯೆಂದು ನೋಡಬೇಕು. ಅದು ಬರೀ ನಾಮಕಾವಸ್ಥೆಗೆ ಮಾತ್ರ ಒಂದು ಮಾರ್ಕೆಟ್ ಎಂಬುದಾಗಿದೆ. ಅಲ್ಲಿ ರೈತರಿಗೆ ವರ್ತಕರಿಂದ ಶೋಷಣೆಯಾಗುತ್ತಿದೆ. ಅದನ್ನು ಯಾರೂ ತಪ್ಪಿಸುವುದಕ್ಕೆ ಆಗುವುದಿಲ್ಲವೇ ಎಂಬುದಾಗಿ ನಾನು ಮಂತ್ರಿಗಳಿಗೆ ನೇರವಾಗಿ ಪ್ರಶ್ನೆ ಕೇಳುತ್ತೇನೆ. ಬೆಂಗಳೂರು ಕರ್ನಾಟಕದ ರಾಜಧಾನಿ. ಇಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ಇದೆ. ಅದು ಎಷ್ಟು ಚೆನ್ನಾಗಿ ಕೆಲಸ ಮಾಡುತ್ತಿದೆ ಎಂಬುದನ್ನು ತಾವೂ ನೋಡಿದ್ದೀರಿ. ಕೇವಲ ಸೆಸ್ ವಸೂಲು ಮಾಡುವುದು ಬಿಟ್ಟರೆ ಯಾವ ರೈತ ಇಲ್ಲಿ ಪದಾರ್ಥಗಳನ್ನು ತರುತ್ತಾನೆ. ಈಗ ಆ ಮಾರ್ಕೆಟ್ ಯಾರ್ಡ್ ಶ್ರೀಮಂತರ ಹಾಗೂ ವರ್ತಕರ ಗೋಡೌನ್ ಆಗಿದೆ. ರೈತರ ರಕ್ಷಣೆಗೋಸ್ಕರ ಆದಂಥ ಈ ಮಾರ್ಕೆಟ್ ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತಿದೆ ಎಂಬ ಬಗ್ಗೆ ಒಂದು ನಿದರ್ಶನವನ್ನು ಕೊಟ್ಟಿದ್ದೇನೆ. ಬೆಂಗಳೂರಿನಲ್ಲಿರತಕ್ಕ ರೆಗ್ಯುಲೇಟೆಡ್ ಮಾರ್ಕೆಟ್‌ನಿಂದ ಯಾವ ರೈತರ ಹಿತರಕ್ಷಣೆ ಮಾಡಿದ್ದೀರಿ? ಕೇವಲ ವರ್ತಕರ ಬಂಡವಾಳಕ್ಕೋಸ್ಕರ ಅವರ ಹಿತರಕ್ಷಣೆ ಮಾಡಿದ್ದೀರಿ. ಆ ಮಾತನ್ನು ನಾನು ಘಂಟಾಘೋಷವಾಗಿ ಹೇಳಿದ್ದೇನೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ :—ವರ್ತಕರಿಂದ ಅಲ್ಲಿ ರೈತರಿಗೆ ಶೋಷಣೆಯಾಗುತ್ತಿದೆ ಎಂಬುದಾಗಿ ನಿಮ್ಮ ಬಾಯಲ್ಲಿಯೇ ಬಂದಿದೆ.

ಶ್ರೀ ಕೋಣಂದೂರು ಲಿಂಗಪ್ಪ :—ನಿಮ್ಮ ಕಾಲದಲ್ಲಿ ಅವರ ಹಿತರಕ್ಷಣೆಯಾಗಿಲ್ಲವೇ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ :—ಮಾನ್ಯ ಶ್ರೀ ಮಂಜುನಾಥ್ ಅವರು ಕೇಳಿದ್ದು ಹಿಪಟೂರ್ ರೆಗ್ಯುಲೇಟೆಡ್ ಮಾರ್ಕೆಟ್‌ಗೆ ಸಂಬಂಧಪಟ್ಟದ್ದೋ ಏನೋ ಗೊತ್ತಾಗಲಿಲ್ಲ.

ಶ್ರೀ ಟಿ. ಎಂ. ಮಂಜುನಾಥ್ :—ಮಂತ್ರಿಗಳು ಬೇಕಾದರೆ ನನ್ನ ಜೊತೆಯಲ್ಲಿ ತಿಪಟೂರ್ ತಾಲ್ಲೂಕ್ ಮತ್ತು ಬೆಂಗಳೂರು ಮಾರ್ಕೆಟ್‌ಗಳಲ್ಲಿ ವಿಜಿಟ್ ಮಾಡಿದರೆ ಅಲ್ಲಿಗೆ ಬರತಕ್ಕ ರೈತರು ತೆಗೆದುಕೊಳ್ಳುವ ಕೂಲಿ, ಅವರಿಗೆ ಬರತಕ್ಕ ವರಮಾನ ಎಷ್ಟೆಂಬುದು ಚೆನ್ನಾಗಿ ಗೊತ್ತಾಗುತ್ತದೆ.

ಶ್ರೀ ಹೆಚ್. ಸಿ ಶ್ರೀಕಂಠಯ್ಯ :—ಎಲ್ಲರೂ ಪ್ರಾಮಾಣಿಕರು ಎಂಬುದಾಗಿ ಹೇಳುವುದಕ್ಕೆ ಆಗುವುದಿಲ್ಲ. ಮಂತ್ರಿಗಳು, ವರ್ತಕರೆಲ್ಲರೂ ಪ್ರಾಮಾಣಿಕರು ಎಂದು ಹೇಳುವುದಿಲ್ಲ. ಪ್ರಾಮಾಣಿಕರಲ್ಲವೆಂದೂ ಸಹ ಹೇಳುವುದಿಲ್ಲ. ಅದರಲ್ಲಿಯೂ ಸ್ವಲ್ಪಮಟ್ಟಿಗೆ ವ್ಯತ್ಯಾಸ ಇರುತ್ತದೆ.

ಶ್ರೀ ಟಿ ಎಂ. ಮಂಜುನಾಥ್:— ಮೊಟ್ಟಮೊದಲನೆಯದಾಗಿ ವರ್ಲ್ಡ್ ಬ್ಯಾಂಕಿನಿಂದ ನೆರವು ಪಡೆದು 53 ಮಾರ್ಕೆಟ್‌ಗಳನ್ನು ತಾವು ಉದ್ಧಾರ ಮಾಡಬೇಕು. ಅಲ್ಲಿ ಹೆಚ್ಚಿಗೆ ಬಿಲ್ಡಿಂಗ್ಸನ್ನು ಕಟ್ಟಿಸಬೇಕು ಷೆಡ್‌ಗಳನ್ನು ಕಟ್ಟಬೇಕು. ರಸ್ತೆ, ಸಂಪರ್ಕ, ಸಾರಿಗೆಗಳನ್ನು ಮಾಡಬೇಕು ಆದರೆ ಕೇವಲ 53 ಮಾರ್ಕೆಟ್‌ಗಳನ್ನು ಕಟ್ಟಿಸಿದರೆ ಸಾಲದು. ನೂರಕ್ಕೆ ಮೇಲ್ಪಟ್ಟ ಮಾರ್ಕೆಟ್‌ಗಳನ್ನು ಕಟ್ಟುವ ವ್ಯವಸ್ಥೆ ಮಾಡಬೇಕು. ಎಲ್ಲಾ ಮಾರ್ಕೆಟ್‌ಗಳನ್ನು ಒಂದೇ ಸಾರಿ ಮಾಡಬೇಕೆಂದಿಲ್ಲ. ಇದು ಅನಗತ್ಯವೇನೂ ಇಲ್ಲ. ಕರ್ನಾಟಕ ಸ್ಟೇಟ್ ವೇರ್ ಹೌಸಿಂಗ್ ಕಾರ್ಪೊರೇಷನ್ ಎಂದೇನಿದೆಯೋ ಮತ್ತು ಎಲ್ಲೆಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ಇದೆಯೋ, ಎಲ್ಲಿ ಉತ್ಪತ್ತಿ ಚೆನ್ನಾಗಿ ಆಗುತ್ತಿದೆಯೋ ಅಂತಹ ಕಡೆಗಳಲ್ಲಿ ರೈತರ ಹಿತರಕ್ಷಣೆ ಇಟ್ಟುಕೊಂಡು ಸರ್ಕಾರ ಅದರ ಆಡಳಿತವನ್ನು ನಿರ್ವಹಿಸಬೇಕು. ವೇರ್‌ಹೌಸ್ ಬಿಲ್ಡಿಂಗ್‌ಗಳನ್ನೂ ಸಹ ಕಟ್ಟಿಸಬೇಕು. ಇದರ ಬಗ್ಗೆ ಅನೇಕಸಾರಿ ಮನವಿಗಳನ್ನು ಕೊಟ್ಟಿದ್ದೇನೆ. ಇವತ್ತು ಕೊಬ್ಬರಿ ಧಾರಣೆ ಬಹಳ ಜಾಸ್ತಿಯಾಗಿದೆ. ಆದರೆ ಕೊಬ್ಬರಿ ಬೆಳೆಯುವ ರೈತರು ಅದನ್ನು ಮೊದಲೇ ಮಾರಿಕೊಂಡಿರುತ್ತಾರೆಂದು ಈಗಾಗಲೇ ಆಪಾದನೆ ಇದೆ. ಬಡ ರೈತರಾದವರು ಮಾರ್ಕೆಟ್ ಯಾರ್ಡ್‌ಗೆ ಬಂದು ಹೋಗಿ ಯಾವರೀತಿಯಲ್ಲಿ ಕೊಬ್ಬರಿಯನ್ನು ಮಾರುವುದರಲ್ಲಿ ಅದರಿಂದ ವರಮಾನ ಪಡುವುದರಲ್ಲಿ ಎಷ್ಟರಮಟ್ಟಿಗೆ ತೊಂದರೆ ಪಡುತ್ತಿದ್ದಾರೆಂಬುದನ್ನು ತಾವು ನೋಡಬೇಕು.

ಇನ್ನು ಇನ್‌ಫರ್‌ಮೇಷನ್ ಮತ್ತು ಪಬ್ಲಿಸಿಟಿ ಇದು ಸರ್ಕಾರದ ಸ್ವತ್ತು ಅಲ್ಲ. ಕೇವಲ ಒಂದು ಪಕ್ಷದ ಪ್ರಚಾರವನ್ನೇ ಮಾಡುವುದಕ್ಕೆ ಅಲ್ಲ ಇದು ಇರುವುದು ಆರ್ಥಿಕ ರಂಗದಲ್ಲಿ ಸಾಮಾಜಿಕ ರಂಗದಲ್ಲಿ ಕೇವಲ ಒಂದು ಪಕ್ಷವೇ ಅಲ್ಲ ಬೇರೆ ಬೇರೆ ರಾಜಕೀಯ ಪಕ್ಷಗಳು ಕೆಲಸ ಮಾಡುತ್ತಿವೆ ಎಂದು ಮನಗಂಡು ಅವರ ಬಗ್ಗೆಯೂ ಪ್ರಚಾರವಾಗಬೇಕು. ಕೇವಲ ಮಂತ್ರಿಗಳ ವಿಚಾರವಾಗಿ

ಪ್ರಚಾರ ಮಾಡುವುದರಿಂದಲೇ ಇದರ ವ್ಯಾಪ್ತಿ ಪೂರೈಸಿದಂತೆ ಆಗುವುದಿಲ್ಲ. ಸರ್ಕಾರದಲ್ಲಿ ಅನೇಕ ಜನ ಮತ್ತು ರಾಜಕೀಯದಲ್ಲಿ ಅನೇಕರು ಪ್ರಾಮಾಣಿಕ ವಾಗಿ ಮತ್ತು ನಿಸ್ವಾರ್ಥತೆಯಿಂದ ಸಮಾಜ ಸೇವೆಯನ್ನು ಮಾಡುವವರು ಇದ್ದಾರೆ ಅನೇಕ ಜನ ಸಮಾಜ ಸುಧಾರಕರೂ ಇದ್ದಾರೆ. ಇವರ ಸೇವೆಯನ್ನು ಪ್ರಚಾರ ಮಾಡುವುದು ಈ ಇಲಾಖೆಯ ಕಾರ್ಯ. ಇದು ಯಾವುದೋ ಒಂದು ಪಕ್ಷದ ದುಡ್ಡಲ್ಲ ಎಂದು ಹೇಳಬಯಸುತ್ತೇನೆ. ಇಷ್ಟು ಮಾತುಗಳನ್ನು ಆಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸುತ್ತಾ ಮಾನ್ಯ ಕೃಷ್ಣಾರವರು ಉತ್ಸಾಹಿ ತರುಣರೂ ಅವರು ಸಹಕಾರ ಸಂಘಗಳಲ್ಲಿ ನಡೆಯುವ ಅವ್ಯವಹಾರಗಳ ಬಗ್ಗೆ ಕೂಡಲೇ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸು ತ್ತೇನೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸ್ನೇಹಿತರಾದ ಶ್ರೀಮಾನ್ ಮಂಜುನಾಥರವರ ದೃಷ್ಟಿ ತುಮಕೂರು ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯ ಮೇಲೆ ಇದೆ ಎಂದು ಕಾಣುತ್ತದೆ.

‡ ಶ್ರೀ ಜೆ. ರಾಮೇಗೌಡ (ದೊಡ್ಡಬಳ್ಳಾಪುರ).— ಮಾನ್ಯ ಅಧ್ಯಕ್ಷರೇ, ಸಹಕಾರಿ ಮಂತ್ರಿಗಳ ಪರವಾಗಿ ಕೈಗಾರಿಕೆ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಸಹಕಾರ ತತ್ವವನ್ನು ಎಲ್ಲರೂ ತಿಳಿದುಕೊಂಡಿದ್ದಾರೆ, ತಿಳಿಯದೇ ಇರುವವರೇ ಇಲ್ಲ. ತತ್ವ ಬಹಳ ಸಿಂಪಲ್ ಮತ್ತು ಬಹಳ ಒಳ್ಳೆಯದು. ಈ ಮನೆಯಲ್ಲಿ ಮಂಡಿಸಿದಾಗ ಈ ತತ್ವ ವನ್ನು ಯಾರೂ ವಿರೋಧಿಸಿಲ್ಲ. ಅದನ್ನು ಕಾರ್ಯರೂಪಕ್ಕೆ ತರುವಾಗ ಕೆಲವು ತೊಂದರೆಗಳು ಬರುತ್ತವೆ ಅದರ ನಿವಾರಣೆಗೆ ಕೆಲವು ಸಮಂಜಸವಾದ ಸಲಹೆ ಗಳನ್ನು ಮಾನ್ಯ ಮಂಜುನಾಥರವರು ಕೊಟ್ಟರು. ಕೆಲವು ಕಡೆ ಸ್ವಲ್ಪ ಕ್ರೋಧ ವಾಗಿ ಹೇಳಿದರು, ಏನೇನು ಮಾಡಬೇಕೆಂದು ಹೇಳುವುದಕ್ಕೆ ಬದಲು ಏನೇನು ಅನ್ಯಾಯಗಳು ನಡೆದಿವೆ ಅವುಗಳ ಹೆಚ್ಚಿಗೆ ಹೇಳಿದರು. ಆದರೆ ಒಂದು ಮಾತನ್ನು ಹೇಳಬೇಕಾಗುತ್ತದೆ. ",ನಡೆಯುವವನು ಎಡವಲೇ ಬೇಕಾಗುತ್ತದೆ'' ಎನ್ನುವ ಗಾದೆ ಪ್ರಕಾರ ಸಂಸ್ಥೆಗಳನ್ನು ನಡೆಸುವವರು ಎಡವುತ್ತಾರೆ. ಸಂಸ್ಥೆಗಳನ್ನು ಕಟ್ಟುವುದು ಬಹಳ ಕಷ್ಟ ಕಟ್ಟಿದ ಸಂಸ್ಥೆಗಳನ್ನು ನಡೆಸುವುದೂ ಬಹಳ ಕಷ್ಟ. ಯಾವ ಸಂಸ್ಥೆಗಳನ್ನು ನಡೆಸದೇ ಇರುವವರು ಯಾರು ಮಾತ ನಾಡುತ್ತಾರೆ ಅದು ಆಧಾರವಿಲ್ಲದ ಮಾತು ಎಂದು ಹೇಳಬೇಕಾಗು ತ್ತದೆ. ಶ್ರೀಮಾನ್ ಮಂಜುನಾಥರವರು ಹೇಳಿದ್ದರಲ್ಲಿ ಹಲವಾರು ಅರ್ಥ ಇದ್ದವು. ನಮ್ಮ ರಾಜ್ಯದಲ್ಲಿ ಭೂ ಅಭಿವೃದ್ಧಿ ಬ್ಯಾಂಕ್ ಏನು ಇದೆ ಅದು 31 ಯೋಜನೆಗಳನ್ನು ಇಟ್ಟುಕೊಂಡು ರಾಜ್ಯದಲ್ಲಿ ಬಡವರಿಗೆ ಹೆಚ್ಚಿಗೆ ಸಹಾಯ ಮಾಡ

(ಶ್ರೀ ಜೆ. ರಾಮೇಗೌಡ)

ಬೇಕೆಂದು ಮುಖ್ಯವಾದ ಉದ್ದೇಶ ಇಟ್ಟುಕೊಂಡು ವ್ಯವಸಾಯ ಅಭಿವೃದ್ಧಿಗೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಹಸಿರು ಕ್ರಾಂತಿಯನ್ನು ಕರೆಸಿದೆ. ನಮ್ಮ ರಾಜ್ಯದಲ್ಲಿ ಖಂಡಿತವಾಗಿ ಯಾರೂ ಅದನ್ನು ವಿರೋಧಿಸಿಲ್ಲವೆಂದು ನನ್ನ ಭಾವನೆ. ತತ್ವ ಬೆಳೆಯುತ್ತಾ ಇರುವಾಗ ಹಲವಾರು ಸದಸ್ಯರು ಹಲವಾರು ವಿಚಾರಗಳನ್ನು ಮಾತನಾಡುತಾ ವಿಷಾದ ವ್ಯಕ್ತಪಡಿಸಿದರೂ ವರ್ಷ ವರ್ಷಕ್ಕೂ ಸಹಾಯಧನ ಹೆಚ್ಚಾಗಿ ಸಂಸ್ಥೆಗಳೂ ಕೂಡ ದಿನದಿನಕ್ಕೆ ಹೆಚ್ಚಾಗುತ್ತಾ ಗ್ರಾಮಾಂತರಗಳಲ್ಲಿಯೂ ಕೂಡ ಅವುಗಳ ಸಂಖ್ಯೆ ಹೆಚ್ಚಿದೆ. ಮೂಲಧನ ಕೋಟಿಗಟ್ಟಲೆ ಹೆಚ್ಚಿದೆ ಬಹಳ ಶ್ರೇಯಸ್ಸು ಆಗಿದೆ ಇದರಲ್ಲಿ ಸಮಾಜವಾದದ ಅರ್ಥ ಇದೆ. ಸಾಮಾಜಿಕವಾಗಿ ಜನರಿಗೆ ಸಹಾಯ ಸಿಕ್ಕುತ್ತದೆ. ಅದು ಎಲ್ಲ ಜನರಲ್ಲಿ ವ್ಯಕ್ತವಾಗುತ್ತಿದೆ. ಅದನ್ನು ನಾವು ಎಲ್ಲರೂ ತಿಳಿದುಕೊಂಡಿದ್ದೇವೆ. ಸಂಸ್ಥೆಗಳಲ್ಲಿ ಏನು ಸಮಸ್ಯೆಗಳು ಇವೆ ಅವುಗಳನ್ನೆಲ್ಲಾ ನಿವಾರಿಸತಕ್ಕಂಥ ನಂಬಿಕೆ ನಮ್ಮಲ್ಲಿ ಇದೆ. ಯಾರುಯಾರು ಸಮಸ್ಯೆ ಇದೆಯೆಂದು ಹೇಳುತ್ತಾರೆ. ಅದರಲ್ಲಿ ಲೋಪದೋಷ ಏನು ಇದೆ ಅದರಲ್ಲಿ ಮುಖ್ಯವಾಗಿ ಸಮಾಜದಲ್ಲಿ ಸಾಮಾನ್ಯ ಜನರಿಗೆ ತಿಳುವಳಿಕೆ ಹೇಳಿ ಸಂಸ್ಥೆಗಳಿಗೆ ತಮ್ಮ ತಮ್ಮ ಪ್ರಭಾವವನ್ನು ಬೀರಿದರೆ ಸಂಸ್ಥೆಗಳು ಇನ್ನೂ ಚೆನ್ನಾಗಿ ನಡೆಯುತ್ತವೆ. ಈಗ ನಮ್ಮಲ್ಲಿ ಒಂದನೂರು ಕೋಟಿ ರೂಪಾಯಿಗಳ ಬಂಡವಾಳ ಇದೆ 120 ಕೋಟಿ ರೂಪಾಯಿ ಡಿಪಾಜಿಟ್ ಇದೆ. ವ್ಯವಸಾಯಕ್ಕೆ ಸಹಕಾರಿ ಸಂಸ್ಥೆಗಳಿಂದ 680 ಸಂಸ್ಥೆಗಳಿಗೆ ಕೊಟ್ಟಿದ್ದಾರೆ ಆ ಬಂಡವಾಳದಿಂದ ವ್ಯವಸಾಯವನ್ನು ನಡೆಸುತ್ತಿದ್ದಾರೆ. ಇದನ್ನು ತೂಕಮಾಡಿ ನೋಡಿದರೆ ಯಾವ ರೀತಿಯಲ್ಲಿಯೂ ಕಡಿಮೆ ಇಲ್ಲವೆಂದು ಒಪ್ಪತಕ್ಕದ್ದಾಗಿದೆ. ವ್ಯವಸಾಯಗಾರರಿಗೆ ಅನುಕೂಲವಾಗಲಿ ಎಂದು ಬಂಡವಾಳವನ್ನು ಹಾಕಿದ್ದಾರೆ. ಸಾಮಾನ್ಯ ಜನರಿಗೆ 24-34 ಪರ್ಸೆಂಟ್ ಬಡ್ಡಿಯ ಮೇಲೆ ಬಡವರಿಗೆ ಹಣ ಕೊಡುವ ಬಂಡವಾಳಶಾಹಿಗಳು ಇದ್ದಾರೆ, ಅನೇಕ ಬಡವರನ್ನು, ಸರ್ಕಾರಿ ನೌಕರರನ್ನು ಹಲವಾರು ಸಂಘ ಸಂಸ್ಥೆಗಳಲ್ಲಿ ಕೆಲಸ ಮಾಡುವ ನೌಕರರನ್ನು ಈ ಬಂಡವಾಳ ಶಾಹಿಗಳು ಇಷ್ಟೊಂದು ದೊಡ್ಡ ಪ್ರಮಾಣದ ಬಡ್ಡಿಯನ್ನು ವಸೂಲು ಮಾಡಿ ಅವರನ್ನು ಶೋಷಣೆ ಮಾಡುತ್ತಿದ್ದರು. ಈಗ ಅದನ್ನು ತಪ್ಪಿಸುವುದರಲ್ಲಿ ಸಹಕಾರ ಸಂಘಗಳು ಎಷ್ಟೋ ಸಹಾಯ ಮಾಡಿವೆಯೆಂದು ಹೇಳಿದರೆ ತಪ್ಪಾಗಲಾರದು. ಸಹಕಾರ ಸಂಘಗಳಲ್ಲಿ ಕೇವಲ 10-12 ಪರ್ಸೆಂಟ್ ಬಡ್ಡಿಯ ಮೇಲೆ 10-12 ಸಮ ಕಂತುಗಳಲ್ಲಿ ಸಾಲ ಕೊಟ್ಟು ಅವರಿಗೆ ಇದ್ದ ನಿರ್ಬಂದವನ್ನು ತಪ್ಪಿಸಿದ್ದಾರೆ. ಯಾರು ಬಂಡವಾಳ ಶಾಹಿಗಳು ಹಣವನ್ನು ಕೊಡುತ್ತಿದ್ದರೋ ಅವರು ರೈತರನ್ನು ಮತ್ತು ಬಡ ಜನರನ್ನು ಸುಲಿಗೆ ಮಾಡುತ್ತಿದ್ದರು ಆದರೆ ಈಗ ಕೆಲವು ಸಹಕಾರ ಸಂಘಗಳಲ್ಲಿ ಸಾಲ ಕೊಟ್ಟಿದ್ದಾರೆ ಅವರಿಂದ ಮುಕ್ತಿ ಹೊಂದಲು. ಮಾನ್ಯ ಮಂಜುನಾಥರವರು ಹೇಳಿದರು

ಕೆಲವರಿಗೆ ಸಕಾಲದಲ್ಲಿ ಸಾಲವನ್ನು ಕೊಟ್ಟಿಲ್ಲವೆಂದು ಅದು ಕೇವಲ 5 ಪರ್ಸೆಂಟ್ ಇರಬಹುದು. ಅದಕ್ಕೂ ಕಾರಣಾಂತರಗಳು ಇವೆ. ಹಳ್ಳಿಗಳಲ್ಲಿ ಕೆಲಸವಾಡತಕ್ಕ ಕೆಲವು ಸಹಕಾರ ಸಂಘಗಳು ದಿನದಲ್ಲಿ ಪೂರ್ತಿ ವೇಳೆ ಕೆಲಸಮಾಡುವುದಿಲ್ಲ ಕಾರಣ ವೇನೆಂದರೆ ಅಲ್ಲಿ ಸಂಬಳ ತೆಗೆದುಕೊಂಡು ಕೆಲಸಮಾಡುವ ಮತ್ತು ಪೂರ್ತಿ ದಿನ ಕೆಲಸ ಮಾಡುವ ಕಾರ್ಯದರ್ಶಿಗಳು ಇಲ್ಲದಿರುವುದರಿಂದ ಅಲ್ಲಲ್ಲಿ ಕೆಲವು ತೊಂದರೆ ಗಳು ಆಗಿವೆ. ಇದರ ಬಗ್ಗೆ ನಮ್ಮ ರಾಜ್ಯಸರ್ಕಾರದವರು, ರಿಸರ್ವ್ ಬ್ಯಾಂಕಿನವರು ಮತ್ತು ಸಹಕಾರಿ ಸಂಸ್ಥೆಗಳವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಎಲ್ಲಿ 2 ಲಕ್ಷ ರೂಪಾಯಿ ಸಾಲ ಕೊಡುವುದಕ್ಕೆ ಸಾಧ್ಯವಿಲ್ಲವೋ ಅಂಥಹ ಕಡೆಗಳಲ್ಲಿ ಎರಡು ಮೂರು ಸಣ್ಣ ಸಣ್ಣ ಸಂಸ್ಥೆಗಳನ್ನು ಒಂದುಗೂಡಿಸಿ ಒಂದು ದೊಡ್ಡ ಸಂಸ್ಥೆಯ ನ್ನಾಗಿ ಮಾಡಿ ಅಲ್ಲಿ ಸಂಬಳ ತೆಗೆದುಕೊಂಡು ಕೆಲಸಮಾಡುವ ಕಾರ್ಯದರ್ಶಿಗಳನ್ನು ನೇಮಿಸಿಕೊಂಡು ವ್ಯವಹಾರ ನಡೆಸಿದರೆ ಈಗ ಇರುವ ತೊಂದರೆಗಳನ್ನು ಸಕಾಲಕ್ಕೆ ಕೊಟ್ಟು ತೊಂದರೆಯನ್ನು ನಿವಾರಿಸಬಹುದು. ಇದು ನನ್ನ ಭಾವನೆ ಇದು ಏನು ದೊಡ್ಡ ಸಮಸ್ಯೆಯಲ್ಲ. ಕೊಟ್ಟ ಸಾಲ ವಸೂಲಾಗುವುದಿಲ್ಲ ಎಂದು ಹೇಳಿದ್ದಾರೆ. ನಾವು ಸಾಲ ಕೊಡುವುದಕ್ಕೆ ಸ್ವಲ್ಪ ತೊಂದರೆ ಇದ್ದರೆ ಬಡವನ ಸ್ಥಿತಿಯನ್ನು ಮತ್ತು ಅವನ ಆರ್ಥಿಕ ಸ್ಥಿತಿಯನ್ನು ಅನುಸರಿಸಿ ಅವನು ತೆಗೆದುಕೊಂಡ ಸಾಲದಿಂದ ಸಂಪಾದನೆ ಮಾಡಿ ತಾನು ಊಟಮಾಡಿ ಸಾಲ ತೀರಿಸುವುದಕ್ಕೆ ಒಂದು ಯೋಜನೆ ಯನ್ನು ಹಾಕಿದ್ದೇವೆ. ಇದು ಯಾರು ಮಾಡತಕ್ಕಂಥ ಯೋಜನೆಯಲ್ಲ. ವರ್ತಕರು ಬಂಡವಾಳಗಾರರು ಯಾರಿಗೆ ಸಾಲ ಕೊಡುತ್ತಾರೆ ಎಂದರೆ ಹೆಚ್ಚಿಗೆ ಎಲ್ಲಿ ಲಾಭ ಬರುತ್ತದೆ ಅವರಿಗೆ ಕೊಡುತ್ತಾರೆ. ಆದರೆ ನಮ್ಮ ಫಿಲಾಸಫಿ ಬಡವನನ್ನು ಸಾಮಾನ್ಯ ಜನರನ್ನು ಮತ್ತು ಸಣ್ಣ ಹಿಡುವಳಿದಾರನನ್ನು ಮಾರ್ಜಿನಲ್ ಫಾರ್ಮರ್ಸ್ ಅವರಿಗೆ ಸಹಾಯ ಮಾಡುವುದಕ್ಕೋಸ್ಕರ ಸರ್ವ ಪ್ರಯತ್ನ ಮಾಡಿದ್ದೇವೆ. ಕೆಲವಾರು ಕಡೆ ತೊಂದರೆಯಾಗಿದೆ. ಅದಕ್ಕೆ ಸಹಕಾರಿ ಸಂಸ್ಥೆಗಳು ಕಾರಣವಲ್ಲ ಸಣ್ಣ ಹಿಡುವಳಿದಾರರು ಕಾರಣವಲ್ಲ. ಸಹಕಾರ ಸಂಘಗಳಲ್ಲಿ ಬಿ. ಡಿ. ಓ ಮತ್ತು ತಹಸೀಲ್ದಾರ್ ವಿಂಗಡಿಸಿರತಕ್ಕಂಥವರು ಪಟ್ಟಿ ಯನ್ನು ಏರಿಯಾದ ಮೇಲೆ ಸಣ್ಣ ಹಿಡುವಳಿದಾರರೆಂದು ವಿಂಗಡಿಸುವುದರಿಂದ ಈ ಲೋಪದೋಷ ಬರಬಹುದು. ಇದು ಏನು ದೊಡ್ಡ ಸಮಸ್ಯೆಯಲ್ಲ ಎಲ್ಲರೂ ಸಕಾಲದಲ್ಲಿ ಸರ್ಕಾರದವರು, ಇಲಾಖೆಯವರು ನಾವು ಸೇರಿ ಇದನ್ನು ಪರಿಶೀಲಿಸ ಬೇಕೆಂದು ಒಂದು ಯೋಜನೆಯನ್ನು ಹಾಕಿ ಕೊಂಡಿದ್ದೇವೆ.

ಆದುದರಿಂದ ಸಮಾಜದಲ್ಲಿ 100 ಕ್ಕೆ 100 ಜನಕ್ಕೆ ಸಾಲ ಕೊಡಬೇಕಾದರೆ ಬಹಳ ತೊಂದರೆ ಇದೆ. ಇದಕ್ಕೆ ಕಾರಣವಿಷ್ಟೇ. ಲೆಕ್ಕಗಳು ಸರಿಯಾಗಿ ಇರುವು ದಿಲ್ಲ, ಅವನಿಗೆ ಸಾಲ ತೆಗೆದುಕೊಳ್ಳಬೇಕು ಎನ್ನತಕ್ಕಂಥ ಶಕ್ತಿ ಇರುವುದಿಲ್ಲ. ಇದ್ದರೂ ಸಹ ಸಾಲವನ್ನು ತೆಗೆದುಕೊಳ್ಳತಕ್ಕಂಥ ಅನುಭವ ಅವನಿಗೆ ಇರುವುದಿಲ್ಲ.

(ಶ್ರೀ ಜಿ. ರಾಮೇಗೌಡ)

ಈಗಾಗಲೇ ನಾವು ಶೇ. 50 ರಷ್ಟು ಮುಟ್ಟಿಸಿದ್ದೇವೆ. ವರ್ಷ ವರ್ಷ ಹೀಗೆ ಹೆಚ್ಚಿಸುತ್ತಾ ಹೋದರೆ ಇನ್ನು ಕೆಲವೇ ವರ್ಷಗಳಲ್ಲಿ 100ಕ್ಕೆ 100 ಜನರಿಗೂ ಸಾಲವನ್ನು ಕೊಡಲಿಕ್ಕೆ ತೊಂದರೆ ಇರಲಾರದೆಂದು ನನ್ನ ಸ್ವಂತ ಅನುಭವದಿಂದ ಈ ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

4-00 P. M.

ಶ್ರೀ ಕೋಣಂದೂರು ಲಿಂಗಪ್ಪ:— ನೀವು ಸಣ್ಣ ರೈತರೋ ಅಥವ ದೊಡ್ಡ ರೈತರೋ ?

ಶ್ರೀ ಜಿ. ರಾಮೇಗೌಡ:— ನಾನು ಮೀಡಿಯಂ ರೈತ. ದೊಡ್ಡ ರೈತನೂ ಅಲ್ಲ, ಸಣ್ಣ ರೈತನೂ ಅಲ್ಲ. ಮಾನ್ಯ ಕೋಣಂದೂರು ಲಿಂಗಪ್ಪನವರ ಸಹಾಯವನ್ನು ರೈತರ ಸಹಾಯಕ್ಕಾಗಿ ತೆಗೆದುಕೊಳ್ಳಬೇಕಾಗಿದೆ. ಈಗ ಫ್ಯಾಕ್ಟರಿಗಳಲ್ಲಿ ಹೇಗೆ ಯೂನಿಯನ್‌ಗಳಿವೆಯೋ, ಟೀಚರ್ಸ್‌ಗಳಲ್ಲಿ ಹೇಗೆ ಯೂನಿಯನ್‌ಗಳಿವೆಯೋ ಮತ್ತೆ ಎಲ್ಲಾ ವರ್ಗದ ನೌಕರರಲ್ಲೂ ಯೂನಿಯನ್‌ಗಳಿರುವಾಗ ರೈತರ ಯೂನಿಯನ್ ಮಾಡಬೇಕು ಎನ್ನುವುದೇ ನನಗಿರತಕ್ಕಂಥ ಉದ್ದೇಶ. ಅದಕ್ಕೆ ಮಾನ್ಯ ಕೋಣಂದೂರು ಲಿಂಗಪ್ಪನವರ ಸಹಾಯಬೇಕು. ಏತಕ್ಕೆಂದರೆ ಇದರಿಂದ ತೊಂದರೆಗೆ ಈಡಾದವರಿಗೆ ಅನುಕೂಲವಾಗುತ್ತದೆ. ಅದನ್ನು ಮಾಡದೇ ಇದ್ದರೆ ಯಾವ ಸಂದರ್ಭದಲ್ಲಿ ಸಣ್ಣ ಹಿಡುವಳಿದಾರರೇ ಆಗಲೀ, ಸಣ್ಣ ರೈತರೇ ಆಗಲಿ, ಗ್ರಾಮಾಂತರ ಪ್ರದೇಶಗಳಲ್ಲಿ ಸಹಾಯ ದೊರಕಲಿಲ್ಲವೆಂದರೆ ಅದನ್ನು ಸರ್ಕಾರದ ಮುಂದೆ ತಮ್ಮ ಬೇಡಿಕೆಗಳನ್ನು ಇಡುವುದಕ್ಕೆ ಅನುಕೂಲವಾಗುತ್ತದೆ. ಅದನ್ನು ಮಾಡಬೇಕಾಗಿರುವುದರಿಂದ ಇದಕ್ಕೆ ಮಾನ್ಯ ಕೋಣಂದೂರು ಲಿಂಗಪ್ಪನವರ ಹಾಗೂ ಕೃಷ್ಣನ್‌ರವರ ಸಹಾಯ ಬೇಕಾಗುತ್ತದೆ. ಹಾಗಯೇ ಇನ್ನೊಂದು ಸರ್ಕಾರಕ್ಕೆ ಸಲಹೆ ಮಾಡುವುದೇನೆಂದರೆ, ಈ ಸಹಕಾರ ಸಂಘಗಳು ಹಳ್ಳಿ ಮಟ್ಟದಲ್ಲಿರುವ ವೈಯಬಲ್, ನಾನ್ ವೈಯಬಲ್‌ಗಳನ್ನು ವೈಯಬಲ್ ಮಾಡಬೇಕು ಎನ್ನುವ ಪ್ರಯತ್ನ ನಡೆಯುವಾಗ ಮೊದಲು ಲಾರ್ಜ್ ಸೈಜ್‌ಗಳಿಂದ, ಸಣ್ಣ ಸೊಸೈಟಿಗಳು ಆಯಿತು. ಫಾರ್ಮರ್ ಸೊಸೈಟಿಯಲ್ಲಿ ಏನು ಅಕ್ರಮ ತೆಗೆದುಕೊಳ್ಳಬೇಕು ಎಂದು ಹಾಗೆ ಇಟ್ಟಿರಿ. ಆ ಮೇಲೆ ಸೆರಿಕಲ್ಚರ್ ಸೊಸೈಟಿ ಎಂದು ಕಾಣುತ್ತದೆ. ಇದು ಯಾವ ಜ್ಯೂರಿಸ್‌ಡಿಕ್ಷನ್‌ನಲ್ಲಿ ಬರುತ್ತದೋ ಗೊತ್ತಾಗುವುದಿಲ್ಲ. ಇದರಲ್ಲಿ ಒಂದು ಗೊಂದಲವಿದೆ. ಕಳೆದ ವರ್ಷ ಒಂದು ಗೊಂದಲವೇನಾಯಿತು. ಹೀಗೆ ಸೊಸೈಟಿಗಳ ಮೇಲೆ ಆರೋಪಣೆಗಳು ಬರುತ್ತಿವೆ. ಅದನ್ನೆಲ್ಲಾ ಸುಲಭವಾಗಿ ತೀರ್ಮಾನ ಮಾಡುವುದಕ್ಕೆ ಇದರಿಂದ ಅನುಕೂಲವಾಗುತ್ತದೆ. ಇದನ್ನು ಆದಷ್ಟು ಜಾಗ್ರತೆ ಇಲಾಖೆಯವರು ಮಾಡುವುದು ಉತ್ತಮವೆಂದು ನನಗಾದರೂ ಅನ್ನಿಸುತ್ತದೆ.

ಇನ್ನು ಈ ಸಹಕಾರ ತತ್ವವೇನಿದೆ, ಆ ಧೋರಣೆಯ ಮೇಲೆ ನಾವು ಸಾಮಾನ್ಯವಾಗಿ ನಡೆಸುತ್ತಾ ಇಲ್ಲ. ದೊಡ್ಡ ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭ ಮಾಡುವಾಗ, ದೊಡ್ಡ ದೊಡ್ಡ ಮಾರ್ಕೆಟಿಂಗ್ ಸೊಸೈಟಿಗಳನ್ನು ಮಾಡುವಾಗ, ದೊಡ್ಡ ದೊಡ್ಡ ಕನ್‌ಸ್ಯೂಮರ್ಸ್ ಆಕ್ಟಿವೀಟಿಸ್ ಇಟ್ಟುಕೊಳ್ಳತಕ್ಕಂಥದ್ದು, ಬಹಳ ಒಳ್ಳೆಯದು. ಈವಾಗ ಜನತಾ ಬಜಾರ್ ಎಂದು ಮಾಡಿದ್ದಾರೆ ಇದು ಬಹಳ ಶ್ಲಾಘನೀಯವಾದುದು. ಜನತಾ ಬಜಾರ್‌ಗಳು ನೇರವಾಗಿ ಎಲ್ಲಾ ಕಡೆಗೂ ಬೇಕು ಎನ್ನುವುದನ್ನು ಒಪ್ಪುತ್ತೇನೆ. ಆ ರೀತಿ ಆಗಬೇಕಾದರೆ, ಎಲ್ಲಿಂದ ಹಣ ಕೊಡಬೇಕು. ಸರ್ಕಾರದ ಹಣ ಅಲ್ಲಿ ಕೊಟ್ಟಿರುವುದನ್ನು ನೋಡಿದರೆ ಕೇವಲ 4 ರಷ್ಟು ಕೂಡ ಇಲ್ಲವೆಂದು ಹೇಳಬಹುದು. ಆದರೆ ರಿಜರ್ವ್ ಬ್ಯಾಂಕಿನವರು ಸರ್ಕಾರದ ಗ್ಯಾರಂಟಿ ಮೇಲೆ ಕೊಟ್ಟಿರಬಹುದು ಆದರೆ ಅದನ್ನು ತೆಗೆದುಕೊಂಡು ಹೋಗಿ ಅಲ್ಲಿ ಕೆಲಸ ಮಾಡತಕ್ಕಂಥ ಸಾಮರ್ಥ್ಯ ಸಂಘ ಸಂಸ್ಥೆಗಳಿಗೆ ಇರಬೇಕು. ಅದರಲ್ಲಿ ಯಾವುದೇ ತರಹದ ತೊಂದರೆಗಳು ಇದ್ದರೆ ಆಗ ಅವರು ಮುಂದೆ ಬರಲಾರರು. ಇವತ್ತು ಜನತಾ ಬಜಾರ್‌ಗಳೇ ಆಗಲೀ, ಕನ್ ಸ್ಯೂಮರ್ಸ್ ಸೊಸೈಟಿಗಳೇ ಆಗಲೀ, ತಾಲ್ಲೂಕು ಮಟ್ಟದಲ್ಲಿ ಆಗಬೇಕು ಎನ್ನುವುದೇ ಆದರೆ ನನ್ನ ದೃಷ್ಟಿಯಲ್ಲಿ ಹೇಳುವುದಾದರೆ ಕನ್‌ಸ್ಯೂಮರ್ಸ್‌ಗೂ ಜನತಾ ಬಜಾರ್‌ಗಳಿಗೂ ಒಂದು ಸಂಬಂಧವಿರಬೇಕು. ವ್ಯವಸಾಯದ ಉತ್ಪಾದನೆಗಳು ಏನು ರೈತರಿಂದ ಬರುತ್ತದೆ ಅದನ್ನು ನೇರವಾಗಿ ಜನತಾ ಬಜಾರ್‌ಗಳು ತೆಗೆದುಕೊಂಡು ಅದನ್ನು ಕನ್‌ಸ್ಯೂಮರ್ಸ್‌ಗೆ ಕೊಡತಕ್ಕಂಥ ಒಂದು ವ್ಯವಸ್ಥೆ ಮಾಡಿದರೆ, ಮಾನ್ಯ ಲಿಂಗಪ್ಪನವರು ಏನು ಆಹಾರ ಪದಾರ್ಥಗಳ ಬೆಲೆ ಇಳಿಯುತ್ತಿಲ್ಲವೆಂದು ಹೇಳಿದರೋ, ಆಗ ಬೆಲೆ ಇಳಿಯುವ ಬಗ್ಗೆ ಕೇಳಬೇಕಾದ್ದೇ ಇಲ್ಲ. ಅದು ತಾನೇ ತಾನಾಗಿ ಇಳಿಯುತ್ತದೆಂದರೆ ತಪ್ಪಾಗಲಾರದು. ರೈತ ಬೆಳೆಯುತಕ್ಕಂಥ ಮಾಲು ರೆಗ್ಯುಲೇಟ್ ಮಾರ್ಕೆಟ್‌ಗೆ ಹೋಗಿ ಅಲ್ಲಿಂದ ಬೇರೆ ಸಂಘಸಂಸ್ಥೆಗಳು ಅದರ ಮೇಲೆ ಪ್ರೈಪೋಟಿ ಮಾಡಿ ಸಾಮಾನುಗಳನ್ನು ತೆಗೆದಿಟ್ಟು ಮಾರತಕ್ಕಂಥ ವ್ಯವಸ್ಥೆಯಿದ್ದು, ಇದರಲ್ಲಿ ವರ್ತಕರ ಕೈವಾಡ ಬೇರೆ ಇರುವುದರಿಂದ ಪದಾರ್ಥಗಳು ಸುಲಭ ಬೆಲೆಗೆ ದೊರಕುತ್ತಿಲ್ಲ. ಆದುದರಿಂದ ಜನತಾ ಬಜಾರ್‌ಗಳು ನೇರವಾಗಿ ರೈತರಿಂದ ಕೊಂಡು ಮಾರಾಟ ಮಾಡಿದರೆ ಈ ಅವ್ಯವಹಾರಗಳನ್ನು ತಪ್ಪಿಸಬಹುದು. ಈ ವಿಷಯವನ್ನು ನಾವು ಹಲವಾರು ಸಾರ್ತಿ ಹೇಳುತ್ತಲೇ ಇದ್ದೇವೆ. ಈ ಸಲಹೆಯನ್ನು ದಯವಿಟ್ಟು ಸರ್ಕಾರದವರು ಆದಷ್ಟು ಜಾಗ್ರತೆಯಾಗಿ ಕಾರ್ಯರೂಪಕ್ಕೆ ತಂದರೆ, ನನ್ನ ಅಭಿಪ್ರಾಯದಲ್ಲಿ ಈ ಆಹಾರ ಪದಾರ್ಥಗಳ ಬೆಲೆಗಳು 25 ಪರ್ಸೆಂಟ್ ಇಳಿಯುತ್ತದೆ ಎಂದು ನನಗೆ ನಂಬಿಕೆ ಇದೆ. ಇದನ್ನು ಆದಷ್ಟು ಜಾಗ್ರತೆಯಾಗಿ ಕಾರ್ಯರೂಪಕ್ಕೆ ತಂದರೆ ಸಂತೋಷಪಡುವವರಲ್ಲಿ ನಾನು ಮೊದಲಿಗನು ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಈ ಸೆಂಟ್ರಲ್ ಬ್ಯಾಂಕ್ಸ್ ವೀಕ್ ಆಗುವುದಕ್ಕೆ ಕಾರಣವೇನು ಎಂದು ಮಾನ್ಯ ಸಚಿವರುಗಳು ಹೇಳಿದರು. ಯಾವ ಲೆಂಡಿಂಗ್ ಎಂಬ ಫಿಲಾಸಫಿ ಇದೆ

(ಶ್ರೀ ಜೆ. ರಾಮೇಗೌಡ)

ಮಳೆ ಆಧಾರದ ಮೇಲೆ ಬೆಳೆಯತಕ್ಕಂಥ ಪದಾರ್ಥಗಳು ಸಕಾಲದಲ್ಲಿ ಮಳೆ ಬಾರದೆ ಸಾಕಷ್ಟು ತೊಂದರೆಯಾಗುತ್ತದೆ. ಆ ವರ್ಷ ಅವರು ಸಾಲವನ್ನು ವಾಪಸ್ಸು ಕೊಡುವುದಕ್ಕೆ ತೊಂದರೆಯಾಗುತ್ತದೆ ಈ ಬ್ಯಾಂಕ್‌ಗಳವರು ರಿಸರ್ವ್ ಬ್ಯಾಂಕಿನಿಂದ ಜಾಸ್ತಿ ಬಡ್ಡಿ ಕೊಟ್ಟು, ಅವರಿಂದ ವಾಪಸ್ಸು ಪಡೆಯುವಾಗ ಕಡಿಮೆ ಬಡ್ಡಿಯನ್ನು ತೆಗೆದುಕೊಳ್ಳುತ್ತಿರುವುದರಿಂದ ಈ ಬ್ಯಾಂಕ್‌ಗಳಿಗೆ ವರ್ಷೇ ವರ್ಷೇ ತೊಂದರೆಯಾಗುತ್ತಿದೆ ಎನ್ನತಕ್ಕಂಥದ್ದನ್ನು ಸುಲಭವಾಗಿ ತಿಳಿದುಕೊಳ್ಳತಕ್ಕಂಥ ಒಂದು ವಿಚಾರ.

ನಮ್ಮ ರಾಜ್ಯದಲ್ಲಿ ಮಳೆ ಅಭಾವದಿಂದ ಕೆಲವು ವೇಳೆ ಬೆಳೆಯಾಗದೆ ಬಹಳ ತೊಂದರೆಯಾಗುತ್ತದೆ, ಮತ್ತೆ ಬೆಳೆದಂಥ ಬೆಳೆಗೆ ಸರಿಯಾದ ಬೆಲೆ ದೊರೆಯದೇ ಇರತಕ್ಕಂಥದ್ದು ಇದೆ. ಕಳೆದ ವರ್ಷ ವರಲಕ್ಷ್ಮಿ ಕಾಟನ್‌ಗೆ ಒಂದು ಸಾವಿರ ರೂಪಾಯಿ ಬೆಲೆ ಇತ್ತು. ಆದರೆ ಈ ವರ್ಷ ಅನೇಕ ಜನರು ಈ ಬೆಳೆಯನ್ನು ಬೆಳೆದರೆ ಬೆಲೆ ಏನಿದೆ ಎಂಬುದನ್ನು ನೋಡಿದರೆ ಒಂದು ಕ್ವಿಂಟಾಲ್‌ಗೆ ಕೇವಲ 300 ರೂಪಾಯಿಗಳು ಇದೆ. ಹೀಗಾದರೆ ಅವನು ಸಾಲವನ್ನು ಹೇಗೆ ತೀರಿಸ ಬೇಕು; ಅವನು ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ 10 ಕ್ವಿಂಟಾಲ್, 12 ಕ್ವಿಂಟಾಲ್ ಹತ್ತಿಯನ್ನು ಬೆಳೆದು 300 ರೂಪಾಯಿಗಳಿಗೆ ಒಂದು ಕ್ವಿಂಟಾಲ್ ನಂತೆ ಮಾರಿದರೆ ಅವನು ಹೇಗೆ ಸಾಲವನ್ನು ತೀರಿಸಬೇಕು? ಇದಕ್ಕೆ ಮೂಲ ಕಾರಣ ಬೆಳೆದ ಪದಾರ್ಥಕ್ಕೆ ಪೇಟೆಯಲ್ಲಿ ಒಂದು ನಿಗದಿಯಾದ ಬೆಲೆ ಇಲ್ಲದಿರು ವುದೇ ಕಾರಣವೆಂದು ನನ್ನ ಅನುಭವದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆದುದರಿಂದ ಸರ್ಕಾರದವರೇ ಆಗಲೀ ಬೇರೆ ಯಾವುದೇ ಫೆಡರೇಷನ್‌ನವರು ಆಗಲೀ ಇದರ ಬಗ್ಗೆ ಸರಿಯಾದ ವ್ಯವಸ್ಥೆಯನ್ನು ಮಾಡಬೇಕು. ರೈತನು ಇಂಥ ಪದಾರ್ಥಗಳನ್ನು ಬೆಳೆದರೆ ಮುಂದಿನ ವರ್ಷ ಇಂಥ ರೇಟನ್ನು ಕೊಡುತ್ತೇವೆಂದು ವ್ಯವಸ್ಥೆ ಮಾಡಿದರೆ ಸಾಕು ರೈತನು ತೆಗೆದುಕೊಂಡಂಥ ಸಾಲವನ್ನು ತೀರಿಸಲಿಕ್ಕೆ ಅನುಕೂಲವಾಗುತ್ತದೆ. ಮೊದಲನೆಯದಾಗಿ ಕಾಲಕ್ಕೆ ಸರಿಯಾಗಿ ಮಳೆ ಬರು ವುದಿಲ್ಲ, ನಾವು ಬಯಸಿದಂಥ ದರ ಸಿಕ್ಕುವುದಿಲ್ಲ, ಮತ್ತೆ ನಾವು ಏನು ಬೆಳೆಯನ್ನು ನಿರೀಕ್ಷಣೆ ಮಾಡಿದ್ದೆವೋ ಅಷ್ಟು ಬೆಳೆ ಕೈಗೆ ಸಿಕ್ಕುವುದಿಲ್ಲ. ಇದರಿಂದ ಸಾಲ ವನ್ನು ಕೊಟ್ಟಂಥ ಬ್ಯಾಂಕ್‌ಗಳಿಗೂ ಸ್ವಲ್ಪ ಕಷ್ಟವಾಗುತ್ತದೆ.

ಶ್ರೀ ಹೆಚ್.ಡಿ. ದೇವೇಗೌಡ :—ಪರಿಸ್ಥಿತಿ ಹೀಗಿದ್ದರೂ ಕೂಡ ಅಂಥವರ ಹತ್ತಿರ ಅನ್ ಅಕೌಂಟೆಡ್ ಮನಿ ಇದೆ.

ಶ್ರೀ ಜಿ. ರಾಮೇಗೌಡ :—ಎಲ್ಲೋ ಒಂದು ಪರ್ಸೆಂಟೋ, ಎರಡು ಪರ್ಸೆಂಟೋ ಇರುತ್ತಾರೆ ನಾನು ಮತ್ತು ಮಾನ್ಯ ದೇವೇಗೌಡರವರು ಪಿ.ಎ.ಸಿ. ಕಮಿಟಿಯಲ್ಲಿ ಕೆಲಸ ಮಾಡಿದ್ದೇವೆ. ಅದರಲ್ಲಿ ಗೊತ್ತಾಗುತ್ತದೆ, ಕೋಪರೇಟಿವ್

ಇಲಾಖೆಯೊಂದೇ ಅಲ್ಲ, ಸರ್ಕಾರದ ಯಾವ ಇಲಾಖೆಯನ್ನೇ ನೋಡಿದರೂ ಕೂಡ ನ್ಯೂನತೆಗಳು ಇಲ್ಲದೇನೆ ಇಲ್ಲ. ಇದಕ್ಕಾಗಿ ಮಾನ್ಯ ದೇವೇಗೌಡರವರು ಬಹಳ ಪಶ್ಚಾತ್ತಾಪಪಟ್ಟು ಒಂದೊಂದು ಸಲ ದೇವರೇ ಕಾಪಾಡಬೇಕು ಎಂದು ಹೇಳಿದ್ದನ್ನು ಕೇಳಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ :—ನಾನು ಅನ್ ಅಕೌಂಟೆಡ್ ಮನಿ ಎಂದು ಹೇಳಿದ್ದು ಅಲ್ಲ. ನಿಮ್ಮ ದೊಡ್ಡದೊಡ್ಡವರೇ ಆದ ಶ್ರೀಮತಿ ಇಂದಿರಾ ಗಾಂಧಿ ಮುಂತಾದವರು ಹೇಳಿದ್ದಾರೆ.

ಶ್ರೀ ಜಿ. ರಾಮೇಗೌಡ :—ಮಾನ್ಯ ದಿವಂಗತ ಪಂಡಿತ್ ಜವಾಹರ್‌ಲಾಲ್ ನೆಹರೂರವರು ಸಹ ಹೇಳಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಬಂಡವಾಳಗಾರರು ಇಲ್ಲದವರಿಗೆ ಕೊಟ್ಟು ಸಹಾಯ ಮಾಡಿ ಎಂದು ಹೇಳಿದ್ದಾರೆ ಇಲ್ಲವೆಂದು ಹೇಳುವುದಿಲ್ಲ. ಡೆಮಾಕ್ರಸಿಯಲ್ಲಿ ಪ್ರಭಾವ ಬೀರುವ ಸ್ವಭಾವ ಮನುಷ್ಯನಲ್ಲಿದೆ. ಮಾನ್ಯ ದೇವೇಗೌಡರವರು ಸಹ ಒಂದೊಂದು ಸಲ ಪ್ರಭಾವಕ್ಕೊಳಗಾದರೆ ಅದರಲ್ಲಿ ಏನೂ ಮಾಡುವುದಕ್ಕೆ ಆಗುವುದಿಲ್ಲ. ತಪ್ಪು ಮಾಡಿದ್ದರೆ ತಿದ್ದಿಕೊಳ್ಳಬೇಕು ಆದುದರಿಂದ ಈ ಒಂದು ವೀಕರ್ ಬ್ಯಾಂಕ್‌ಗಳನ್ನು ಅಭಿವೃದ್ಧಿಪಡಿಸಬೇಕಾದರೆ ಸರ್ಕಾರ ಒಂದು ಧೋರಣೆಯನ್ನು ಬದಲಾವಣೆ ಮಾಡಬೇಕು. ಅದನ್ನು ತೀವ್ರವಾಗಿ ಬದಲಾವಣೆ ಮಾಡಿ ರೈತರಿಗೆ ಅನುಕೂಲವನ್ನು ಮಾಡಿಕೊಡಬೇಕು ಇವತ್ತು ಸಾಲ ವಾಪಸ್ಸು ಬಾರದೇ ಇರುವ ಕಡೆ ದಾವ ಮಾಡಿ, ಡಿಕ್ರಿ ಮಾಡಿದರೆ ಅಗ ಜನ ವಾಪಸ್ಸು ಮಾಡುತ್ತಾರೆ ಮತ್ತು ಹೆಚ್ಚು ಆಸಕ್ತಿ ಇರತಕ್ಕಂಥ ಅಧಿಕಾರಿಗಳನ್ನು ಕೊಟ್ಟರೆ, ಈ ವೀಕರ್ ಬ್ಯಾಂಕ್ಸ್ ಎಂದು ಏನು ಹೇಳುತ್ತೀರಿ ಅದನ್ನು ತಪ್ಪಿಸುವುದಕ್ಕೆ ಸಾಧ್ಯವಿದೆ. ಆಗ ಯಾವುದೇ ನಷ್ಟ ಬರಲಾರದೆಂದು ನನ್ನ ಅಭಿಪ್ರಾಯವಿದೆ. ಆದುದರಿಂದ ವೀಕರ್ ಬ್ಯಾಂಕ್‌ಗಳು ಸಹ ಉಳಿದುಕೊಳ್ಳುತ್ತವೆ.

ಬೇರೆ ಬೇರೆ ಸಂಘಸಂಸ್ಥೆಗಳು ಯಾವುವು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಹೇಳುವುಕ್ಕೆ ಯಾರೂ ಇಷ್ಟಪಡುವುದಿಲ್ಲ. ಹೌಸಿಂಗ್ ಕಾರ್ಪೊರೇಷನ್, ಮಾರ್ಕೆಟಿಂಗ್ ಫೆಡರೇಷನ್, ಇಂಥ ಕಡೆಗಳಲ್ಲಿ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆಂದು ಹೇಳಿದರೆ ಅದು ತಪ್ಪಾಗಲಿಕ್ಕಿಲ್ಲ, ಕೆಲವು ಲೋಪದೋಷಗಳು ಇರಬಹುದು, ಆದರೆ ರೈತರು ಬೆಳೆದಂಥ ಪದಾರ್ಥಗಳನ್ನು ವಿತರಣೆ ಮಾಡುವುದಕ್ಕೆ ಮತ್ತು ಇನ್ನು ಯಾವ ಯಾವ ರೀತಿಯಲ್ಲಿ ರೈತರಿಗೆ ಇದು ಸಹಾಯ ಮಾಡುತ್ತಿದೆ ಎಂದು ಹೇಳುವವರಲ್ಲಿ ನಾನೂ ಒಬ್ಬ. ಇವರು ಲಕ್ಷಾಂತರ ರೂಪಾಯಿಗಳ ಹಣವನ್ನು ಕೊಟ್ಟು ಗೊಬ್ಬರದ ಸಹಾಯ ಮಾಡಿದ್ದು ಮೊದಲನೆಯದು. ಇವತ್ತು ಮಾರ್ಕೆಟಿಂಗ್ ಸೊಸೈಟಿಯವರು ಫೆಡರೇಷನ್‌ಗೆ ನಾಲ್ಕು ಲಕ್ಷ ರೂಪಾಯಿಗಳ ಮೇಲ್ಪಟ್ಟು ಬಾಕಿ ಇದ್ದರೂ ಅವರಿಗೆ ಸಹಾಯ ಮಾಡಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ :—ಗೊಬ್ಬರವೂ ಇಲ್ಲ, ದುಡ್ಡೂ ಇಲ್ಲ. ಸಂಡ್ರಿ ಡೆಟರ್ಸ್‌ನಲ್ಲಿ 70-75 ಲಕ್ಷ ರೂಪಾಯಿಗಳು ಖರ್ಚಾಗಿದೆ. ಇದರ ಬಗ್ಗೆ ವಿವರಣೆ ಕೇಳಿದರೆ ತಮಗೆ ಗೊತ್ತಾಗುತ್ತದೆ.

ಶ್ರೀ ಜಿ ರಾಮೇಗೌಡ :—ಅಲ್ಲಿಯ ಲೆಕ್ಕಗಳನ್ನು ಆಡಿಟ್ ಮಾಡುವವರು ಎಕ್ಸ್‌ಪರ್ಟ್ ಏನೂ ಅಲ್ಲ. ಆಡಿಟ್ ಮಾಡುವುದಕ್ಕೂ ವ್ಯವಹಾರ ನಡೆಸುವುದಕ್ಕೂ ವ್ಯತ್ಯಾಸ ಇದೆ.

ಶ್ರೀ ಕಾಗೋಡು ತಿಮ್ಮಪ್ಪ :—ಸೊಸೈಟಿಗಳನ್ನು ಆಡಿಟ್ ಮಾಡುವವರು ಎಕ್ಸ್‌ಪರ್ಟ್ಸ್ ಅಲ್ಲ ಎಂದು ಹೇಳುತ್ತೀರಿ, ಅದು ಸರಿ. 1972-73ರಲ್ಲಿ, 1973-74 ರಲ್ಲಿ ಇವರುಗಳು ಆಡಿಟ್ ಮಾಡಿದ್ದಾರೆ. ಆಡಿಟ್ ಮಾಡಿರತಕ್ಕ ಪಿರಿಯಡ್‌ನಲ್ಲಿ 13 ಲಕ್ಷ ರೂಪಾಯಿಗಳ ಜಮ ಇಲ್ಲ. ಇವು ಒಬ್ಬರಿಗೆ ಖರ್ಚಾಗಿದೆ. ಖಾಲಿ ಚೆಕ್ಸ್ ಇದ್ದು, ಇವರು ಯಾವ ಲೆಕ್ಕವನ್ನು ಆಡಿಟ್ ಮಾಡಿದ್ದಾರೆ? ಇದನ್ನು ನೋಟೀಸ್ ಮಾಡುವುದು ಬೇಡವೇ?

ಶ್ರೀ ಜಿ. ರಾಮೇಗೌಡ :—ಅದನ್ನೆಲ್ಲಾ ಕೈಬಿಟ್ಟರು ಎಂದು ಕಾಣುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ :—ಕೈಬಿಟ್ಟಿರುವುದು ಬೇರೆ ವಿಷಯ. ಖಾಲಿ ಚೆಕ್ ಕೊಟ್ಟರು ಗೊಬ್ಬರ ತೆಗೆದುಕೊಂಡರು, ಕೊಟ್ಟಂಥ ಚೆಕ್ಕನ್ನು ಎರಡು ವರ್ಷವಾದರೂ ಬ್ಯಾಂಕಿಗೆ ಪ್ರೆಸೆಂಟ್ ಮಾಡಲಿಲ್ಲ. The Registrar of Co-operative Societies is one of the members of the Board of that institution. 25-50 ರೂಪಾಯಿಗಳನ್ನು ಯಾವುದಾದರೂ ಸೊಸೈಟಿಯಲ್ಲಿ ಮಿಸ್ ಅಪ್ರೊಪ್ರಿಯೇಟ್ ಮಾಡಿದ ಕ್ಲರ್ಕ್‌ಗೆ ಪ್ರಾಸಿಕ್ಯೂಟ್ ಮಾಡುತ್ತೇವೆ; ರಿಜಿಸ್ಟ್ರಾರ್ ಅವರು ಬೋರ್ಡಿನಲ್ಲಿದ್ದಂಥವರು, ಪ್ರತಿ ತಿಂಗಳು ಬೋರ್ಡು ಮೀಟಿಂಗ್ ಇದ್ದಾಗ ಇವರು ಟ್ರಾನ್‌ಸ್ಯಾಕ್ಷನ್ಸ್ ಅನ್ನು ಅಪ್ರೂವ್ ಮಾಡಬೇಕು. ಎರಡು ವರ್ಷಗಳವರೆಗೂ ಯಾರೂ ಇದನ್ನು ನೋಟೀಸ್ ಮಾಡಿಲ್ಲ. ಈಗ ಯಾರನ್ನು ಪ್ರಾಸಿಕ್ಯೂಟ್ ಮಾಡಬೇಕು? Every Board member has to be prosecuted if the Government is sincere.

ಶ್ರೀ ಜಿ. ರಾಮೇಗೌಡ :—ಇರ್‌ರ್ರೆಗ್ಯುಲಾರಿಟೀಸ್ ಇದ್ದರೆ, ವ್ಯವಹಾರದಲ್ಲಿ ಅಕೌಂಟ್ಸ್ ತಪ್ಪಾಗಿದ್ದರೆ ಅದಕ್ಕೂ ಸಂಸ್ಥೆಯು ಮಾಡತಕ್ಕ ಕೆಲಸದಲ್ಲಿ ಅದರ ಒಂದು ಯೋಜನೆ ಮತ್ತು ಧೋರಣೆ, ಕಾರ್ಯಕ್ರಮಕ್ಕೂ ಯಾವ ಸಂಬಂಧವೂ ಇಲ್ಲ. ಇರ್‌ರ್ರೆಗ್ಯುಲಾರಿಟೀಸ್ ಇದ್ದರೆ ಅದನ್ನು ಕೇಳಬಹುದು. ಕೊಡುವುದು ಕಳೆಯುವುದರಲ್ಲಿ ತಪ್ಪುಗಳು ಇದ್ದರೆ ಅದನ್ನೂ ಕೇಳಬಹುದು. ಆದರೆ ಆಹಾರ

ಪದಾರ್ಥಗಳನ್ನು ಕೊಳ್ಳುವುದು, ಹತ್ತಿ ಕೊಳ್ಳುವುದು ವ್ಯವಸಾಯಕ್ಕೆ ಬೇಕಾದ ಸಾಮಗ್ರಿಗಳನ್ನು ಕೊಳ್ಳುವುದು, ಇಂಥ ವ್ಯವಹಾರಗಳು ಇವೆ. ಕೊಡುವುದು ಕಳೆಯುವುದರಲ್ಲಿ ತಪ್ಪು ಇರುವುದಕ್ಕೂ, ಸಾಮಗ್ರಿಗಳನ್ನು ತೆಗೆದುಕೊಳ್ಳುವುದಕ್ಕೆ ಏನೂ ಸಂಬಂಧವೂ ಇಲ್ಲ. ಈ ಒಂದು ಫೆಡರೇಷನ್ ಮೂರು ವರ್ಷದ ಕೆಳಗೆ 30 ಲಕ್ಷ ರೂಪಾಯಿಗಳ ನಷ್ಟದಲ್ಲಿತ್ತು. ಅದೇ ಎರಡನೆಯ ವರ್ಷದಲ್ಲಿ 40 ಲಕ್ಷ ರೂಪಾಯಿಗಳ ಲಾಭವನ್ನು ಸಂಪಾದನೆ ಮಾಡಿತು. ಮೂರನೇ ವರ್ಷದಲ್ಲಿ 45 ಲಕ್ಷ ರೂಪಾಯಿಗಳ ಲಾಭವನ್ನು ಸಂಪಾದನೆಮಾಡಿತು. ಅದರಿಂದ ಸಹಾಯ ವನ್ನು ನಾವು ಪಡೆದು ಅದನ್ನು ಇಲ್ಲಿ ಹೇಳದಿದ್ದರೆ ಅದು ತಪ್ಪಾಗುತ್ತದೆ. ಒಂದು ಟನ್ ಗೊಬ್ಬರಕ್ಕೆ 20 ರೂಪಾಯಿಗಳ ಕನ್‌ಸೇಷನ್ ತೋರಿಸಿ ಮಾರ್ಜಿನ್ ರೇಟಿನಲ್ಲಿ ಕೊಟ್ಟಿದ್ದಾರೆ. ಈ ಒಂದು ವ್ಯವಸ್ಥೆಯು ಯಾವಾಗಲೂ ನಡೆದಿರಲಿಲ್ಲ. ನಡೆದಿರುವುದನ್ನು ನಾವು ಒಪ್ಪಿಕೊಳ್ಳಬೇಕು ಅದರಲ್ಲಿ ತಪ್ಪಿದ್ದರೆ ಅದನ್ನು ನಾವು ತಿದ್ದಿಕೊಳ್ಳಬೇಕು. ತಪ್ಪುಗಳನ್ನು ಯಾರು ಮಾಡಿರುತ್ತಾರೆ ಅವರಿಗೆ ಶಿಕ್ಷೆ ಯಾಗಬೇಕು.

ಶ್ರೀ ಕಾಗೋಡು ತಿಮ್ಮಪ್ಪ :—ಮಾನ್ಯ ರಾಮೇಗೌಡರು ಅನೇಕ ವರ್ಷ ಗಳಿಂದ ಸಹಕಾರಿ ಸಂಘಗಳಲ್ಲಿದ್ದಾರೆ, ಆಡಿಟರ್ ಅವರು ಲೆಕ್ಕವನ್ನು ಆಡಿಟ್ ಮಾಡತಕ್ಕ ಬಗ್ಗೆ ಅವರೇ ಹೇಳಬೇಕು.

ಶ್ರೀ ಜಿ ರಾಮೇಗೌಡ ;—ಯಾರೇ ಆಗಲೀ, ಸರ್ಕಾರದ ಅಧಿಕಾರಿಗಳೇ ಆಗಲೀ ತಪ್ಪು ಮಾಡಿದ್ದರೆ ಅದನ್ನು ಸರಿಪಡಿಸತಕ್ಕದ್ದು ನಮ್ಮ ಜವಾಬ್ದಾರಿ. 1972 ನೇ ಇಸವಿಯಲ್ಲಿದ್ದ ಸರ್ಕಾರ ಸೆಕ್ಷನ್ 54ನ್ನು ಜಾರಿಗೆ ತಂದು ಈ ಬ್ಯಾಂಕನ್ನು ಸೂಪರ್‌ಸೀಡ್ ಮಾಡಿದರು. ಜಿಲ್ಲಾಧಿಕಾರಿಗಳು ಇದರ ಅಧಿಕಾರಿ ಗಳಾದಾಗ 25ಸಹಸ್ರ ರೂಪಾಯಿಗಳ ಮಿಸ್ ಅಪ್ರೊಪ್ರಿಯೇಷನ್ ಮಾಡಿದವರ ಮೇಲೆ ದಾವೆಯನ್ನು ತಕ್ಷಣ ಹಾಕಲಿಕ್ಕಾಗಲಿಲ್ಲ. ತಿರುಗಿ ನಾವು ಬಂದಮೇಲೆ 8-9 ತಿಂಗಳು ಆದಮೇಲೆ ಅವರ ಮೇಲೆ ನಾವು ದಾವೆ ಮಾಡಿ ಡಿಕ್ರಿಮಾಡಿ ಇನ ಪ್ಯೂರೆನ್ಸ್ ದುಡ್ಡನ್ನು ತೆಗೆದುಕೊಂಡಿದ್ದೇವೆ. ಅವರ ಕೈಯಲ್ಲಿ ಅದನ್ನೂ ಮಾಡಲಿಕ್ಕಾಗ ಲಿಲ್ಲ. ಮಾಡಬಾರದ ಕೆಲಸಗಳನ್ನು ಮಾಡಿದಾಗಲೂ ತಿದ್ದಿಕೊಳ್ಳುವುದಕ್ಕೆ ಅವರಿದ್ದಾಗ ಸಾಧ್ಯವಾಗಲಿಲ್ಲ. ಒಳ್ಳೆಯ ಕೆಲಸಗಳನ್ನು ಮಾಡಿದ್ದರೆ ಅದನ್ನು ಹೇಳಬೇಕಾದ್ದು ನಮ್ಮ ಧರ್ಮ. ಈಗ ಫೆಡರೇಷನ್‌ನವರು ಒಳ್ಳೆಯ ಕೆಲಸ ಗಳನ್ನು ಮಾಡುತ್ತಿದ್ದಾರೆ. ಮೊದಲು ಔಷಧಿಗಳನ್ನು ಕೊಂಡು ಮಾರಾಟ ಮಾಡು ತ್ತಿದ್ದರು, ಈಗ ಅವರೇ ತಯಾರು ಮಾಡಿ ಮಾರುತ್ತಿದ್ದಾರೆ. ಪಂಜಾಬಿನ ಮುಖ್ಯ ಮಂತ್ರಿಗಳು ಇಲ್ಲಿಗೆ ಬಂದಾಗ ನಾನು ಅವರನ್ನು ಮಾರ್ಕೆಟಿಂಗ್ ಫೆಡರೇಷನ್ ಯಾವ ರೀತಿ ಕೆಲಸ ಮಾಡುತ್ತಿದೆ, ಎಂದು ಕೇಳಿದೆ. ಪಂಜಾಬಿನ ಮುಖ್ಯಮಂತ್ರಿ ಗಳು ಈ ಒಂದು ಪೋರ್ಟ್‌ಫೋಲಿಯೋ ಅನ್ನು ಅವರೇ ಇಟ್ಟುಕೊಂಡಿದ್ದಾರೆ.

(ಶ್ರೀ ಜೆ. ರಾಮೇಗೌಡ)

ಆದರೆ ನಮ್ಮ ಮುಖ್ಯಮಂತ್ರಿಗಳು 10 ಪೋರ್ಟ್‌ಫೋಲಿಯಗಳನ್ನು ಇಟ್ಟುಕೊಂಡಿದ್ದಾರೆ. ಅದರ ಜೊತೆಗೆ ನಮ್ಮ ಮುಖ್ಯಮಂತ್ರಿಗಳು ಮುಖ್ಯವಾದ ಕೋ-ಆಪರೇಟಿವ್ ಪೋರ್ಟ್‌ಫೋಲಿಯನ್ನೂ ತೆಗೆದುಕೊಳ್ಳಬೇಕು. ಇದು ಅಷ್ಟು ಮುಖ್ಯವಾದುದು. ಪಂಜಾಬಿನಲ್ಲಿ ಮಾರ್ಕೆಟಿಂಗ್ ಫೆಡರೇಷನ್‌ನವರು ಅವರೇ ಗೊಬ್ಬರವನ್ನು ತಯಾರು ಮಾಡುತ್ತಾರೆ, ಅವರೇ ಅದನ್ನು ರೈತರ ಮನೆಗೆ ತೆಗೆದುಕೊಂಡು ಹೋಗಿ ಕೊಡುತ್ತಾರೆ. ನಮ್ಮಲ್ಲಿಯೂ ಸಹ ಈಗಿರುವ 3 ಟಯರ್ ಸಿಸ್ಟಂ 4 ಟಿಯರ್ ಸಿಸ್ಟಂ ಹೋಗಬೇಕು. ಇಂಟೆನ್ಸೀವ್ ಆಗಿ, ಚೆನ್ನಾಗಿ ಕೆಲಸ ಮಾಡತಕ್ಕ ವ್ಯವಸ್ಥೆ ನಮ್ಮ ರಾಜ್ಯದಲ್ಲಿಯೂ ಆಗಬೇಕು. ಸಣ್ಣ ರೈತರ ಅಭಿವೃದ್ಧಿಯಾಗಬೇಕು. ಗೊಬ್ಬರವನ್ನು ಸರಿಯಾದ ರೀತಿಯಲ್ಲಿ ಸರಿಯಾದ ಸಮಯದಲ್ಲಿ, ಯಾವುದನ್ನೂ ಇಲ್ಲ ಅನ್ನದೆ ಕೊಡುವಂಥ ವ್ಯವಸ್ಥೆಯಾಗಬೇಕು. ಹಾಗಾದರೆ ಮಾರ್ಕೆಟಿಂಗ್ ಫೆಡರೇಷನ್ ಚೆನ್ನಾಗಿ ನಡೆಯುವುದರಲ್ಲಿ ಯಾವ ಸಂಶಯವೂ ಇಲ್ಲ. ಆದ್ದರಿಂದ ಮುಖ್ಯವಾಗಿ ಇದನ್ನು ಮುಖ್ಯಮಂತ್ರಿಗಳು ತೆಗೆದುಕೊಂಡು ಸರಿಯಾದ ರೀತಿಯಲ್ಲಿ ನಡೆಸತಕ್ಕ ವ್ಯವಸ್ಥೆ ಯಾಗಬೇಕು, ಆಡಿಟಿಂಗ್ ವ್ಯವಸ್ಥೆಯೂ ಸರಿಯಾಗಿ ಆಗಬೇಕು. ಈ ರೀತಿಯಾಗಿ ಸಹಕಾರಿ ಸಂಸ್ಥೆಗಳು ಚೆನ್ನಾಗಿ ಕೆಲಸ ಮಾಡಿದರೆ ಹಾಗೂ ಚೆನ್ನಾಗಿ ಕೆಲಸ ಮಾಡತಕ್ಕ ಅಧಿಕಾರಿಗಳು ಇದ್ದರೆ, ಮಾನ್ಯ ವಿರೋಧ ಪಕ್ಷದ ಸದಸ್ಯರು ಹೇಳುವಂಥ ಅವ್ಯವಹಾರವನ್ನು ಸ್ವಲ್ಪ ಸುಲಭವಾಗಿ ತಪ್ಪಿಸುವುದಕ್ಕೆ ಸಾಧ್ಯವಿದೆ ಎಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

‡ಶ್ರೀ ಜಿ. ಎಸ್. ಅಮ್ಮಣ್ಣನವರ್ (ಸದಲಗ) :—ಮಾನ್ಯ ಅಧ್ಯಕ್ಷರೇ, ಮಾನ್ಯ ಟಿ ಎಂ. ಮಂಜುನಾಥ್ ರವರು ಹೇಳುತ್ತಾ ಹೇಳುತ್ತಾ ಏನು ಹೇಳಿದರು ಅಂದರೆ ಭ್ರಷ್ಟ ಸರ್ಕಾರ, ನೀತಿಗೆಟ್ಟ ರಾಜಕಾರಿಣಿ, ಮತ್ತು ಭಂಡ ಸರ್ಕಾರ ಅಂತ. ಮತ್ತು ಇವಕ್ಕೆ ಉದಾಹರಣೆಯನ್ನೂ ಕೂಡ ಕೊಟ್ಟಿದ್ದಾರೆ, ಅದೇನೆಂದರೆ ಸಕಾಲಕ್ಕೆ ಕೊಡಬೇಕಾದ ಸಾಲ ಕೊಟ್ಟಿಲ್ಲ ಎಂದು. ಅದಕ್ಕೆ ನಾನು ಇಷ್ಟೇ ಹೇಳಬಯಸುತ್ತೇನೆ. ಈ ಸಹಕಾರೀ ಚಳುವಳಿ ಏನು ಇದೆ ಆದು ನಮ್ಮ ನಿಮ್ಮ ಎಲ್ಲ ಜನರ ಚಳುವಳಿ. ಅದು ಬರೇ ಸರಕಾರೀ ಚಳುವಳಿ ಎಂದು ಮಾತನಾಡಿದರೆ ಬಹಳ ಕಷ್ಟವಾಗುತ್ತದೆ. ಈ ಸರ್ಕಾರದಲ್ಲಿ ನಾವು ಏನು ಕೆಲಸ ಮಾಡಬೇಕೋ ಆ ಕೆಲಸ ನಾವು ಮಾಡಬೇಕು, ಸರಕಾರದವರು ಈ ಸಹಕಾರೀ ಸಂಸ್ಥೆಯಲ್ಲಿ ಏನು ಕೆಲಸ ಮಾಡಬೇಕೋ ಅದನ್ನು ಅವರು ಮಾಡಬೇಕು. ಹೇಗೆಂದರೆ ನಮ್ಮ ರಾಜ್ಯದಲ್ಲಿ 21 ಸಾವಿರ ಸೊಸೈಟಿಗಳು ಇವೆ. ಇವೆಲ್ಲದರ ಮೇಲೂ ಸರಕಾರ ನಿಗಾ ಇಡುವುದು ಬಹಳ ಕಷ್ಟ. ನಾವು 200-300 ಸದಸ್ಯರು ಏನು ಇದ್ದೇವೆ ನಾವುಗಳೇ ಇದರ ಚೇರಮನ್‌ರಾಗಿರುತ್ತೇವೆ, ಸೆಕ್ರೆಟರಿಯಾಗಿರುತ್ತೇವೆ, ಇದರ

ಕಾರ್ಯಕರ್ತರಾಗಿರುತ್ತೇವೆ. ಮತ್ತು ಈ ಡಿ. ಸಿ. ಸಿ. ಬ್ಯಾಂಕ್ ನಮ್ಮದೇ ಆಗಿರುವಾಗ ಸಕಾಲಕ್ಕೆ ನಾವು ರೈತರಿಗೆ ಸಾಲ ಕೊಡದೇ ಹೋದರೆ ಅದು ಸರ್ಕಾರದ ದೋಷ ಎಂದರೆ ನನಗಂತೂ ಗೊತ್ತಾಗುವುದಿಲ್ಲ. ಅದಕ್ಕೆ ಬೇರೆ ಹೆಸರನ್ನೂ ಕೂಡ ಇಡಲಿಕ್ಕೆ ನನಗೆ ಗೊತ್ತಾಗುವುದಿಲ್ಲ. ಈ ಸಹಕಾರೀ ಚಳುವಳಿಯಲ್ಲಿ ದೋಷ ಇದೆ, ಇಲ್ಲ ಎಂದು ಹೇಳುವುದಿಲ್ಲ. ಒಂದು ಆಲದ ಮರ ಹುಟ್ಟಿ ದೊಡ್ಡದಾದ ಮೇಲೆ ಸಾವಿರಾರು ವರ್ಷಗಳಾದ ಮೇಲೆ ಹುಟ್ಟುತ್ತವೆ. ಅದರಲ್ಲಿ ಕೋಗಿಲೆ ಇರಬಹುದು, ನವಿಲು ಇರಬಹುದು ಕಾಗೆಯೂ ಇರಬಹುದು. ಆದರೆ ಅವರು ಕಾಗೆಯನ್ನು ತೋರಿಸುತ್ತಾರೇ ವಿನಾ ಮತ್ತೇನೂ ಹೇಳುವುದಿಲ್ಲ ಈ ಸಹಕಾರೀ ಇಲಾಖೆಯಲ್ಲಿ ಸರಕಾರದ ಮೇಲೆ ಬೇಕಾದಷ್ಟು ಟೀಕೆಟಿಪ್ಪಣಿಗಳನ್ನು ಹೇಳುತ್ತಿದ್ದಾರೆ. ಆದರೆ ಇದರಲ್ಲಿ ಸರ್ಕಾರ ಮಾಡುವ ಕೆಲಸ ಬೇರೆ ಇದೆ. ಅದೆಲ್ಲಕ್ಕಿಂತಲೂ ಹೆಚ್ಚಾಗಿ ನಾವು ಸದಸ್ಯರಾಗಿರತಕ್ಕಂಥಾವರು, ಈ ಸಹಕಾರೀ ಇಲಾಖೆಯ ಕಾರ್ಯಕರ್ತರೂ ಮಾಡಬೇಕಾದ್ದು ಎಷ್ಟೋ ಕೆಲಸಗಳು ಇವೆ ಇದಕ್ಕೆ ಒಂದು ಗಾದೆ ಹೇಳುವುದಾದರೆ ಮೊದಲು ಯಥಾ ರಾಜ ತಥಾ ಪ್ರಜಾ ಅನ್ನುತ್ತಿದ್ದರು. ಈಗ ಏನಾಗಿದೆ ಎಂದರೆ ಯಥಾ ಪ್ರಜಾ ತಥಾ ರಾಜ ಆಗಿದೆ. ಆದುದರಿಂದ ವಾಚ್‌ಡಾಗ್ ಆಗಿ ನಾವು ಸದಸ್ಯರಾಗಿರತಕ್ಕಂಥಾವರು ಈ ಸಹಕಾರಿ ಸಂಘದ ಬೆಳವಣಿಗೆಯನ್ನು ಮಾಡದೇ ಹೋದರೆ ಇದು ಬಹಳ ಕುಂಠಿತವಾಗಿ ಹೋಗುತ್ತದೆ. ಆದುದರಿಂದ ಇದರಲ್ಲಿ ನಾವು ಜಾಗೃತಿ ವಹಿಸಬೇಕು. ಈ ಸಹಕಾರೀ ರಂಗದಲ್ಲಿ ಇರತಕ್ಕಂಥ ಜನ ಜಾಗೃತಿ ವಹಿಸಿದರೆ ಇದು ಚೆನ್ನಾಗಿ ಕೆಲಸ ಮಾಡುತ್ತದೆ ಎಂದು ನನ್ನ ಅಭಿಪ್ರಾಯ.

ಇನ್ನೊಂದು ವಿಷಯ ಏನೆಂದರೆ ನಮ್ಮ ರಾಜ್ಯದಲ್ಲಿ 21 ಸಾವಿರ ಸಹಕಾರಿ ಸಂಸ್ಥೆಗಳು ಇವೆ. ಇದರಲ್ಲಿ ಒಂದೆರಡು ಸೊಸೈಟಿಗಳಲ್ಲಿ ಇಂಥಾ ದೋಷ ಇದೆ ಎಂದು ಹೇಳಿದರೇ ವಿನಾ ಈ ಬಗ್ಗೆ ತಾವೇನಾದರೂ ಸಂಬಂಧಪಟ್ಟ ಅಧಿಕಾರಿಗಳಿಗೆ ಬರೆದು ತಿಳಿಸಿದ್ದೀರಾ? ಇದರಲ್ಲಿ ಸದಸ್ಯರಾಗಿರತಕ್ಕಂಥಾವರ ಕರ್ತವ್ಯ ಏನು ಇದೆ ಅದನ್ನು ತಾವು ಮಾಡಿದ್ದೀರಾ? ಅವರು ಇಂತಹ ಸಂಸ್ಥೆ ಹೀಗಾಗಿದೆ ಅಂತ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ಅವರು ಏನೂ ಕಾರ್ಯಕ್ರಮ ಕೈಗೊಳ್ಳದಿದ್ದರೆ ಆವಾಗ ಅವರು ಈ ಬಗ್ಗೆ ಏನೂ ಕಾರ್ಯಕ್ರಮ ಕೈಗೊಳ್ಳಲಿಲ್ಲ ಎಂದು ಹೇಳುವುದು ಯೋಗ್ಯವಾಗುತ್ತಿತ್ತು ಎಂದು ಹೇಳಬಯಸುತ್ತೇನೆ ನಾನು ಈ ಮಾತನ್ನು ಏತಕ್ಕೆ ಹೇಳುತ್ತೇನೆ ಎಂದರೆ ಸರ್ಕಾರ ಪ್ರತಿಯೊಬ್ಬರ ಮೇಲೂ ನಿಗಾ ಇಟ್ಟು ನೋಡುವುದಕ್ಕೆ ಸಾಧ್ಯವಿಲ್ಲ. ಉದಾಹರಣೆಗೆ ಈಗ ನಾನು ಕೂತಿರುವಾಗ ನನ್ನ ಮನಸ್ಸಿನಲ್ಲಿ ಏನು ಇದೆ ಎನ್ನುವುದನ್ನು ಹೇಳುವುದಕ್ಕಾಗುತ್ತದೆಯೋ? ಆದುದರಿಂದ ಇದಕ್ಕೆ ಜನತೆಯೇ ಪರಿಹಾರ ಕಂಡುಹಿಡಿಯಬೇಕು ಎಂದು ಹೇಳುತ್ತೇನೆ, ಈ ಬಗ್ಗೆ ನಮ್ಮದೂ ಒಂದು ಕರ್ತವ್ಯ ಇದೆ ಎನ್ನುವುದನು ನಾವು ತಿಳಿದುಕೊಳ್ಳಬೇಕು. ಈಗ ಸಹಕಾರೀ ಚಳುವಳಿಯಲ್ಲಿ ಒಂದು ಹೊಸ ಕಾಯಿದೆ

(ಶ್ರೀ ಜಿ. ಎಸ್. ಅಮ್ಮಣ್ಣನವರು)

ಆಗಿ ಸುಮಾರು 10-15 ವರ್ಷಗಳಾದವು. ಆ ಬಗ್ಗೆ ಕಾರ್ಯ ಮಾಡುತ್ತಾ ಇರುವಾಗ ಎಷ್ಟೋ ಹೊಸ ಸುಧಾರಣೆಗಳು ಆಗಿವೆ, ಈ ಬಗ್ಗೆ ಈ ಮನೆಯ ಹಿರಿಯ ಸದಸ್ಯರಾದ ಶ್ರೀಮಾನ್ ರಾಮೇಗೌಡರು ಹೇಳಿದರು ವಯಬಿಲಿಟಿ ಕಾಂಪಿಟಿಷನ್ಸ್ ವಿತ್ ಇನ್ ದಿ ಕೋಆಪರೇಟೀವ್ ಸ್ಟ್ರಕ್ಚರ್ ಮತ್ತು ಕಾರ್ಪೋರೇಷನ್ಸ್ ಇಷ್ಟೆಲ್ಲಾ ಆಗಿವೆ ಎಂದು. ಮತ್ತು ವರ್ಕಿಂಗ್ ಗ್ರೂಪ್‌ನವರು ಇದರ ಬಗ್ಗೆ ಬೇಕಾದಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ. 1973 ರಲ್ಲಿ ನಮ್ಮ ರಾಜ್ಯದಲ್ಲಿ ಕೋಅಪರೇಟೀವ್ ಇನ್ಸ್ಟಿಟ್ಯೂಷನ್ಸ್ ಎಷ್ಟು ಇವೆ ಅವೆಲ್ಲಾ ಒಟ್ಟುಗೂಡಿಸಿ ಒಂದೇ ಇನ್ಸ್ಟಿಟ್ಯೂಷನ್ ಮಾಡಬೇಕು ಅಂತ ಒಂದು ನಿರ್ಣಯ ಬಂತು. ಸರ್ಕಾರದವರು ಇನ್ನೂ ಇದರ ಬಗ್ಗೆ ವಿಚಾರ ವ್ಯಕ್ತಪಡಿಸುವುದರಲ್ಲೇ ಇದ್ದಾರೆ. ಈ ಮನೆಯ ಹಿರಿಯ ಸದಸ್ಯರಾದ ಶ್ರೀ ಕರಿಯಪ್ಪಗೌಡರು ಎರಡು ವರ್ಷದ ಹಿಂದೆ ಈ ಬಗ್ಗೆ ಒಂದು ರೆಸಲ್ಯೂಷನ್ ತಂದಾಗ ಆ ಕಾಲಕ್ಕೆ ಸರ್ಕಾರದವರು ಈ ಬಗ್ಗೆ ಆಶ್ವಾಸನೆ ಕೊಟ್ಟಿದ್ದಾರೆ ನಾವು ಈ ಬಗ್ಗೆ ಒಂದು ಸಮಿತಿ ನೇಮಕ ಮಾಡಿ ಇದರಲ್ಲಿ ಏನು ದೋಷ ಇದೆ ಅದನ್ನು ಕೂಲಂಕಷವಾಗಿ ಪರಿಶೀಲಿಸಿ ಅದರ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರೂ ಕೂಡ ಇನ್ನೂವರೆಗೂ ಆ ಕೆಲಸ ಆಗಲಿಲ್ಲ ಆದುದರಿಂದ ಇದನ್ನು ಕೂಡಲೇ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ

ಇನ್ನು ವಾಸ್ತವವಾಗಿ ಸರ್ಕಾರ ಮಾಡಬೇಕಾದ ಕೆಲಸದಲ್ಲಿ ನಾನು ಕೆಲವೊಂದು ಸಲಹೆಗಳನ್ನು ಕೊಡಲಿಕ್ಕೆ ಬಯಸುತ್ತೇನೆ. ಈಗ ಇದರಲ್ಲಿ ಸ್ಟೇಟ್ ಅಡ್ವೈಸರಿ ಕಮಿಟಿ ಇದೆ. ಆದರೆ ಆ ಕಮಿಟಿ ಅಷ್ಟು ಹೇಳಿಕೊಳ್ಳುವಂಥ ಯಾವ ಕೆಲಸವನ್ನೂ ಮಾಡಿಲ್ಲ. ಈ ಬಗ್ಗೆ ಹೇಳಬೇಕಾದರೆ ಸ್ಟೇಟ್ ಅಡ್ವೈಸರಿ ಕಮಿಟಿಯಲ್ಲಿ ಕೋಅಪರೇಟೀವ್ ಇನ್ಸ್ಟಿಟ್ಯೂಷನ್‌ನಲ್ಲಿ, ಈ ಸಹಕಾರೀ ಚಳುವಳಿಯಲ್ಲಿ ಚೆನ್ನಾಗಿ ಕೆಲಸಮಾಡಿದಂಥ ಪರಿಣತರಿಂದ ಕೂಡಿದ ಒಂದು ಸಮಿತಿ ಇರಬೇಕೇ ವಿನಾ ಅನುಭವ ಇಲ್ಲದೇ ಇರುವ ಜನರು ಇದರಲ್ಲಿ ಇದ್ದರೆ ಸ್ವಲ್ಪ ಕಷ್ಟವಾಗುತ್ತದೆ ಎಂದು ಹೇಳುತ್ತೇನೆ: ಅಷ್ಟೇ ಅಲ್ಲದೆ ಹಿಂದೆ ಈ ಸಹಕಾರೀ ಬಗ್ಗೆ ಒಂದು ಬಿಲ್ ಅಂದು ಅದು ಈ ಮನೆಯಲ್ಲಿ ಪಾಸಾಗಿದೆ. ಇದು ಆ ಮನೆಯಲ್ಲಿ ಪಾಸಾಗದೆ ಒಂದು ವರ್ಷವಾದರೂ ಇದು ಹಾಗೆಯೇ ಉಳಿದಿದೆ. ಇನ್ನೊಂದು ಉದಾಹರಣೆಯನ್ನು ಶ್ರೀ ಮಂಜುನಾಥ್‌ರವರು ಹೇಳಿದರು ಭೂ ಅಭಿವೃದ್ಧಿ ಬ್ಯಾಂಕು 1963 ರಲ್ಲಿ 96 ಲಕ್ಷ ರೂಪಾಯಿ ಏನು ಸಾಲ ಕೊಟ್ಟಿತು ಈಗ ಅದೇ ಬ್ಯಾಂಕ್ 1975ರಲ್ಲಿ 100 ಕೋಟಿ ರೂಪಾಯಿ ಕೊಟ್ಟಿದೆ ಎಂದು. ಆದಕ್ಕೆ ತಕ್ಕಂತೆ ಕಾಯಿದೆಯಲ್ಲೂ ಕೂಡ ಸೂಕ್ತ ಬದಲಾವಣೆ ಮಾಡಬೇಕಾಗುತ್ತದೆ. ಅದಕ್ಕಾಗಿ ಒಂದು ತಜ್ಞರ ಸಮಿತಿಯನ್ನು ನೇಮಿಸಿ ಈ ಬಗ್ಗೆ ಯಾವ ಯಾವ ಬದಲಾವಣೆ ಮಾಡಬೇಕು ಅದು ತತ್‌ಕ್ಷಣ ಕೂಡಲೇ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಇಲ್ಲದೇ ಹೋದರೆ ಇದರಲ್ಲಿ ಎಷ್ಟೋ ಅನಾಹುತಗಳು ಆಗುತ್ತದೆ. ಈ ಬಗ್ಗೆ ಯಾವ ರೀತಿ ಇದೆ ಎನ್ನುವುದಕ್ಕೆ ನಾನು ಒಂದೆರಡು ಉದಾಹರಣೆ ಕೊಟ್ಟೆ.

ಇನ್ನು ಕೋಆಪರೇಟೀವ್ ಟ್ರಿಬ್ಯೂನಲ್‌ನಲ್ಲಿ ಈ ಒಂದು ನಿರ್ಣಯವಾಗಿದೆ. ಅದೇನೆಂದರೆ ಫ್ಯೂಚರ್ ಇಂಟರೆಸ್ಟ್ ಕೊಡಬೇಕಾದರೆ 320ನೇ ಸೆಕ್ಷನ್ ಪ್ರಕಾರ 6 ಪರ್ಸೆಂಟ್‌ಗಿಂತ ಹೆಚ್ಚಿಗೆ ಕೊಡುವುದಕ್ಕೆ ಬರುವುದಿಲ್ಲ ಎಂದು ಅವರು ಹೇಳಿದ್ದಾರೆ. ಈ ಸೊಸೈಟಿಯಲ್ಲಿ ಬಾರೋಯಿಂಗ್ ಅಂಡ್ ಲೆಂಡಿಂಗ್ ರೇಟ್ 6 ಪರ್ಸೆಂಟ್ ಬರುವುದಕ್ಕೆ ಸಾಧ್ಯವಿಲ್ಲ. ಹೀಗಿರುವಾಗ ಇನ್ನು ಸೊಸೈಟಿ ಬೆಳೆಯಬೇಕು ಎಂದು ಹೇಗಾಗುತ್ತದೆ. ಆದುದರಿಂದ ಈ ಬಗ್ಗೆ ತಕ್ಷಣ ಈ ಕಾಯಿದೆಯಲ್ಲಿ ಬದಲಾವಣೆ ಏತಕ್ಕೆ ಮಾಡಬಾರದು ?

ಇನ್ನು ಎಲೆಕ್ಷನ್ ಡಿಸ್‌ಪ್ಯೂಟ್ಸ್ ಬಗ್ಗೆ ಹೇಳುವುದಾದರೆ ಈ ಬಗ್ಗೆ ಏನಾದರೂ ಡಿಸ್‌ಪ್ಯೂಟ್ಸ್ ಇದ್ದರೆ ಟ್ರಿಬ್ಯೂನಲ್‌ಗೆ ಅಡ್ಮಿಟ್ ಮಾಡಬೇಕೇ ವಿನಾ ಸದಸ್ಯರು ಯಾರು ಆರಿಸಿ ಬಂದಿರುತ್ತಾರೋ ಅವರನ್ನು ವಜಾ ಮಾಡುವುದಕ್ಕೆ ಸಾಧ್ಯವಿಲ್ಲ. ಮತ್ತು 3 ಜನ ಟ್ರಿಬ್ಯೂನಲ್ ಸದಸ್ಯರು ಇದ್ದರೂ ಕೂಡ ಅವರುಗಳು ಅಧ್ಯಕ್ಷರು ಇಲ್ಲದೇ ಇದ್ದಾಗ ಒಂದು ನಿರ್ಣಯ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಈ ರೀತಿಯಾದ ತೊಂದರೆಗಳು ಈ ಕಾಯಿದೆಯಲ್ಲಿ ಇರುವುದರಿಂದ ಯಾವುದಾದರೂ ಒಂದು ನಿರ್ಣಯ ತೆಗೆದುಕೊಳ್ಳಬೇಕಾದರೆ ಅದು ವರ್ಷಗಟ್ಟಲೆಯಾಗುತ್ತದೆ. ಆದುದರಿಂದ ಈ ಆಕ್ಟ್‌ನಲ್ಲಿ ಕೆಲವು ಬದಲಾವಣೆಗಳನ್ನು ಮಾಡದೇ ಹೋದರೆ ಈಗಿರುವ ಸಹಕಾರೀ ಕಾಯಿದೆಯಲ್ಲಿ ಅಧಿಕಾರವನ್ನು ಚಲಾಯಿಸುವುದಕ್ಕೆ ಸಾಧ್ಯವಿಲ್ಲ. ಅದಕ್ಕೋಸ್ಕರ ಇದರಲ್ಲಿ ಕೆಲವು ಬದಲಾವಣೆಗಳನ್ನು ತತ್‌ಕ್ಷಣ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಅರ್ಬಿಟ್ರೇಷನ್ ಬಗ್ಗೆ ಹೇಳುವುದಾದರೆ ರಿಜಿಸ್ಟ್ರಾರ್‌ರವರೇ ಇದಕ್ಕೆ ಖಾಸಗೀ ಸದಸ್ಯರನ್ನು ನೇಮಕ ಮಾಡುತ್ತಾರೆ. ಆದರೆ ನಮ್ಮ ನೆರೆ ರಾಜ್ಯದಲ್ಲಿ ಅಂದರೆ ಮಹಾರಾಷ್ಟ್ರದಲ್ಲಿ ಈ ಅರ್ಬಿಟ್ರೇಷನ್ ಕೇಸಸ್‌ನ್ನು ನಿಭಾ ಮಾಡುವ ದೃಷ್ಟಿಯಿಂದ ಅಧಿಕಾರಿಗಳನ್ನು ನೇಮಿಸುತ್ತಾರೆ. ಅದು ನಮ್ಮ ದೃಷ್ಟಿಯಲ್ಲಿ ಕೂಡ ಸಮಾಧಾನಕರವಾಗಿದೆ. ಆದುದರಿಂದ ಇದನ್ನು ಯೋಗ್ಯ ಮಾಡಬೇಕು ಎಂದು ಹೇಳುತ್ತೇನೆ. ಈ ಖಾಸಗೀ ಸದಸ್ಯರನ್ನು ಈ ಅರ್ಬಿಟ್ರೇಷನ್ ನೇಮಿಸಿದರೆ ಎಷ್ಟೋ ಅನಾಹುತವಾಗುತ್ತದೆ ಕಾರಣ ಅವರಿಗೆ ಸರಿಯಾದ ಜ್ಞಾನ ಇರುವುದಿಲ್ಲ. ಇದನ್ನು ಯಾವ ರೀತಿ ನಿಭಾ ಮಾಡಬೇಕು ಆ ಬಗ್ಗೆ ಕಟ್ಟುನಿಟ್ಟಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಲಾ ಗ್ರ್ಯಾಜುಯೇಟ್‌ನವರನ್ನು ಚೆನ್ನಾಗಿರುತ್ತದೆ. ಆ ರೀತಿ ಮಾಡಬೇಕೆಂದು ಹೇಳುತ್ತೇನೆ.

(ಶ್ರೀ ಜಿ. ಎಸ್. ಅಮ್ಮಣ್ಣನವರು)

ಇನ್ನು ಎಲೆಕ್ಷನ್ ವಿಚಾರದಲ್ಲಿ ಹೇಳುವುದಾದರೆ ಅಫೆಕ್ಸ್ ಸೊಸೈಟಿಗಳಲ್ಲಿ ಸರಿಯಾಗಿ ಚುನಾವಣೆ ನಡೆಯದೇ ಇರುವುದಕ್ಕೆ ಕಾರಣ ಏನೆಂದರೆ ಯಾರಾದರೂ ಮೆಂಬರ್ಸ್ ಆ ಸೊಸೈಟಿಗೆ ಚುನಾವಣೆಗೆ ನಿಂತರೆ ಏನಾದರೂ ಕಾರಣ ತೋರಿಸಿ ಆ ನಾಮಿನೇಷನ್ಸ್ ಅನ್ನು ರಿಜೆಕ್ಟ್ ಮಾಡಿ ಆರ್ಬಿಟ್ರೇಷನ್‌ಗೆ ರೆಫರ್ ಮಾಡಿಬಿಡುತ್ತಾರೆ. ಆರ್ಬಿಟ್ರೇಷನ್ ಮುಂದೆ ಹೋದರೆ ಆ ಸೊಸೈಟಿಯಲ್ಲಿ ಚುನಾವಣೆ ಮಾಡುವುದಕ್ಕೆ ಬರುವುದಿಲ್ಲ. ಹೀಗಾಗಿ ಯಾವ ಕಾಲಕ್ಕೆ ಚುನಾವಣೆ ನಡೆಯಬೇಕಾಗಿತ್ತೋ ಆ ಕಾಲಕ್ಕೆ ಚುನಾವಣೆ ನಡೆಯುವುದು ತೊಂದರೆಯಾಗುತ್ತದೆ. ಈ ರೀತಿಯಾಗಿ ಈ ಎಲೆಕ್ಷನ್ ಡಿಸ್‌ಪ್ಯುಟ್‌ನಿಂದ ಚುನಾವಣೆ ನಿಂತು ಹೋಗುತ್ತದೆ. ಆದುದರಿಂದ ನಾನು ಹೇಳುವುದು ಏನೆಂದರೆ ಅದು ಯಾದ ರೀತಿಯಾದ ಸೊಸೈಟಿಯೇ ಇರಲಿ ಕಾಲಕ್ಕೆ ಸರಿಯಾಗಿ ಚುನಾವಣೆ ನಡೆಸಲಿಕ್ಕೆ ಬೇರೆಯವರನ್ನು ಪ್ರಿಸೈಡಿಂಗ್ ಆಫೀಸರನ್ನು ಖಡ್ಡಾಯವಾಗಿ ನೇಮಕ ಮಾಡಬೇಕು ಎಂದು ನಾನು ಕೇಳುತ್ತೇನೆ.

ಕೋಆಪರೇಟಿವ್ ಅಪ್‌ಲಟ್ ಟ್ರಿಬ್ಯುನಲ್ ಎಂದು ಬೆಂಗಳೂರಿನಲ್ಲಿ ಮಾಡಿದ್ದಾರೆ ರೈತರು ಇಲ್ಲವೇ ಇದರ ಸದಸ್ಯರುಗಳು ಅಪೀಲು ಮಾಡಿಕೊಳ್ಳಬೇಕಾದರೆ 300-100 ಮೈಲಿಗಳ ದೂರದಿಂದ ಬೆಂಗಳೂರಿಗೆ ಬಂದು ಅಪೀಲು ಮಾಡಬೇಕಾಗುತ್ತದೆ. ಇದಕ್ಕಾಗಿ ಇಂತಹ ಅಪ್‌ಲಟ್ ಟ್ರಿಬ್ಯುನಲ್‌ಗಳನ್ನು ಪ್ರತಿಯೊಂದು ಜಿಲ್ಲಾ ಹೆಡ್ ಕ್ವಾರ್ಟರ್‌ಗಳಲ್ಲಿ ಮಾಡಿದರೆ ಇದರಿಂದ ಜನರಿಗೆ ಅನುಕೂಲವಾಗುತ್ತದೆ ಮತ್ತು ಎಷ್ಟೋ ಕೇಸುಗಳು ನಿಕಾಲು ಆಗುವುದಕ್ಕೆ ಸಹಾಯವಾಗುತ್ತದೆ ಮತ್ತು ಜನತೆಗೂ ಸಹಾಯವಾಗುತ್ತದೆ. ನಮ್ಮ ಸಹಕಾರ ಇಲಾಖೆಯಲ್ಲಿ ಇದುವರೆಗೂ ಒಂದು ಡಿಪಾರ್ಟ್‌ಮೆಂಟು ಮ್ಯಾನ್ಯೂಯಲ್ ಎಂದು ಮಾಡಿಲ್ಲ ಆದರೆ ನಮ್ಮ ನೆರೆ ರಾಜ್ಯವಾದ ಮದ್ರಾಸು ರಾಜ್ಯದಲ್ಲಿ ಇಂತಹ ಒಂದು ಡಿಪಾರ್ಟ್‌ಮೆಂಟು ಮ್ಯಾನ್ಯೂಯಲ್ ಎಂದು ಮಾಡಿದ್ದಾರೆ ಮತ್ತು ಇದು ತಿದ್ದುಪಡಿ ಮಾಡಿ ಆರೇಳು ವಾಲ್ಯೂಂಗಳು ಇವೆ ಎಂದು ಕೇಳುತ್ತೇವೆ ಇದರಿಂದ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಸಹಾಯವಾಗುತ್ತದೆ. ನಮ್ಮ ರಾಜ್ಯದಲ್ಲೂ ಇಂತಹ ಡಿಪಾರ್ಟುಮೆಂಟು ಮ್ಯಾನ್ಯೂಯಲ್‌ನ್ನು ಮಾಡುವುದರ ಕಡೆಗೆ ಲಕ್ಷ್ಯ ಕೊಡಬೇಕು ಎಂದು ಹೇಳುತ್ತೇನೆ.

4-30 P. M.

ಇನ್ನು ಮಿಸ್ ಅಪ್ರೋಪ್ರಿಯೇಷನ್ ಬಗ್ಗೆ ಹೇಳಬೇಕಾದರೆ ಇಂದು ನಮ್ಮ ರಾಜ್ಯದಲ್ಲಿರುವ ಅನೇಕ ಸಹಕಾರ ಸಂಸ್ಥೆಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಮತ್ತು ಹಣದ ದುರುಪಯೋಗವಾಗುತ್ತಿದೆ ಎಂದು ಕೇಳುತ್ತೇನೆ. ಇದಕ್ಕೆ ಕಾರಣ ನಮ್ಮ ಸಹಕಾರ ಸಂಸ್ಥೆಗಳಲ್ಲಿ ಕಾಲ ಕಾಲಕ್ಕೆ ತನಿಖೆ ಮಾಡಲು ಸರಿಯಾದ

ಆಡಿಟರುಗಳನ್ನು ನೇಮಕ ಮಾಡದೇ ಇರುವುದೇ ಆಗಿದೆ. ಆಡಿಟರುಗಳನ್ನು ಎಲ್ಲ ಕಡೆ ಕಟ್ಟುನಿಟ್ಟಾಗಿ ನೇಮಿಸಿ ಲೆಕ್ಕ ಪತ್ರಗಳನ್ನು ತನಿಖೆ ಮಾಡಿದರೆ ಇಂತಹ ದುರುಪಯೋಗಗಳಾಗುವುದು ಕಡಿಮೆಯಾಗುತ್ತವೆ. ನನಗೂ ಕೂಡ ಸಹಕಾರ ಸಂಸ್ಥೆಗಳಲ್ಲಿ ಎಷ್ಟೋ ಮಿಸ್‌ಅಪ್ರೊಪ್ರಿಯೇಷನ್ ಕೇಸುಗಳಾಗಿರುವುದು ಗೊತ್ತಿದೆ. ಕೆಲವು ಕಡೆ ಕೇಸುಗಳನ್ನು ಫೈಲು ಮಾಡಿ ಮೂರು ನಾಲ್ಕು ವರ್ಷಗಳಾದರೂ ಅವುಗಳು ಇನ್ನೂ ತೀರ್ಮಾನವಾಗದೇ ಹಾಗೇ ಉಳಿದಿದೆ. ಇದಕ್ಕೆ ಕಾರಣ ಸರಿಯಾದ ಆಡಿಟು ಕೆಲಸಗಳನ್ನು ಮಾಡಿಸದೇ ಇರುವುದರಿಂದ ಆಗುತ್ತಿದೆ. ಇದಕ್ಕಾಗಿ ಸರಕಾರ ಶೀಘ್ರವಾಗಿ ಎಲ್ಲ ಕಡೆಗಳಲ್ಲೂ ಆಡಿಟರುಗಳನ್ನು ಸಹಕಾರ ಸಂಸ್ಥೆಗಳಿಗೆ ನೇಮಕ ಮಾಡಿ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುವುದು ಅಗತ್ಯ ಎಂದು ಇಲ್ಲಿ ಹೇಳಬಯಸುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ಕೋಆಪರೇಟಿವ್ ಯೂನಿಯನ್ ಎಂದು ಇದೆ. ಇಂತಹ ಒಂದು ಯೂನಿಯನ್ ನಮ್ಮ ಜಿಲ್ಲೆಯಲ್ಲೂ ಇದೆ. ಇದರ ಮೂಲಕ ಬರಿಯ ಸದಸ್ಯರನ್ನು ಸೇರಿಸಬೇಕೆಂದು ಮಾಡುವ ಒಂದು ಕಾರ್ಯಕ್ರಮ ಕಾಣುತ್ತಿದೆ ಜನರಿಗೆ ಸಹಕಾರ ಸಂಘಗಳಲ್ಲಿ ಯಾವ ರೀತಿಯ ಸಾಲ ಸೌಲಭ್ಯಗಳು ದೊರೆಯುತ್ತವೆ ಹಾಗೂ ಇನ್ನು ಯಾವ ರೀತಿಯಾದ ಸಹಾಯವನ್ನು ಕೊಡಬಹುದು ಎನ್ನುವುದರ ಬಗ್ಗೆ ಯೂನಿಯನ್‌ನವರು ಆಸಕ್ತಿವಹಿಸುತ್ತಿಲ್ಲ. ಬರೀ ಸದಸ್ಯರನ್ನು ಕೂಡಿಸುವುದರಲ್ಲಿ ಮಾತ್ರ ಇರುತ್ತಾರೆ. ಆದುದರಿಂದ ಜನರಿಗೆ ಅನುಕೂಲವಾಗುವಂತಹ ಕಾರ್ಯಗಳನ್ನು ಯೂನಿಯನ್ ಮೂಲಕ ಮಾಡಿದರೆ ಜನರಿಗೆ ಅನುಕೂಲವಾಗುತ್ತದೆ ಇಂದು ಕೋಆಪರೇಟಿವ್ ಟ್ರೈನಿಂಗು ಪ್ರೊಗ್ರಾಂಗಳೆಂದು ಇವೆ ಹಾಗೂ ಇನ್ನಿತರ ಸಹಕಾರ ಯೋಜನೆಗಳಿವೆ ಇವುಗಳನ್ನು ಯೂನಿಯನ್ ಮೂಲಕ ಏಕೆ ಮಾಡಬಾರದು ಮತ್ತು ನಮ್ಮ ಸಹಕಾರ ಇಲಾಖೆಯ ಸಿಬ್ಬಂದಿಯವರಿಗೆ ಬೇಕಾಗುವ ಅನುಕೂಲಗಳನ್ನು ಯೂನಿಯನ್‌ನವರು ಮಾಡಿಕೊಡಬಹುದು. ಜನರಿಗೆ ತೊಂದರೆ ಇಲ್ಲದ ಹಾಗೆ ಕೆಲಸಗಳನ್ನು ಮಾಡಿದರೆ ಯೂನಿಯನ್ ಮುಂದಕ್ಕೆ ಬರಲೂ ಅನುಕೂಲವಾಗುತ್ತದೆ. ಇದರ ಬಗ್ಗೆ ಸರಕಾರ ಆಲೋಚನೆ ಮಾಡಬೇಕು.

ಇನ್ನು ಸಿಬ್ಬಂದಿ ವಿಚಾರವಾಗಿ ಹೇಳಬೇಕಾದರೆ ಸಾಧಾರಣವಾಗಿ ಲೋಕಲ್ ಜನರನ್ನೇ ಹೆಚ್ಚಾಗಿ ಅಲ್ಲಲ್ಲಿ ನೇಮಕ ಮಾಡುತ್ತಾರೆ. ಇದರಿಂದ ಇವರನ್ನು ಕಂಟ್ರೋಲ್ ಮಾಡುವುದು ಕಷ್ಟವಾಗುತ್ತದೆ. ಇದಕ್ಕಾಗಿ ತಾಲ್ಲೂಕು ಲೆವಲ್‌ನಲ್ಲಿ, ಡಿಸ್ಟ್ರಿಕ್ಟು ಲೆವಲ್‌ನಲ್ಲಿ ಹಾಗೂ ಸ್ಟೇಟ್ ಲೆವಲ್‌ನಲ್ಲಿ ಒಂದು ರೀತಿಯಾದ ರಿಕ್ರೂಟ್‌ಮೆಂಟು ಸ್ಟ್ರಕ್ಚರು ಇರುವಂತೆ ಮಾಡಿದರೆ ಆಗ ಎಲ್ಲ ಕಡೆಯಿಂದಲೂ ಸಿಬ್ಬಂದಿಯವರನ್ನು ವರ್ಗ ಮಾಡಲು ಅನುಕೂಲವಾಗುತ್ತದೆ. ಹಾಗಿಲ್ಲದೆ ಲೋಕಲ್ ಆಗಿರುವ ಜನರನ್ನು ನೇಮಕ ಮಾಡಲು ಹೋದರೆ ಅಲ್ಲಿ ತಮಗೆ ಬೇಕಾದವರನ್ನೇ ನೇಮಕ

(ಶ್ರೀ ಜಿ ಎಸ್. ಅಮ್ಮಣ್ಣನವರು)

ಮಾಡುತ್ತಾರೆ. ಇದರಿಂದ ಒಂದು ರೀತಿಯಾದ ಸಿಬ್ಬಂದಿಗೆ ಅನುಕೂಲವಾದ ಕೇಡರನ್ನು ಮಾಡಿ ರಿಕ್ರೂಟ್‌ಮೆಂಟು ಸ್ಟ್ರಕ್ಚರು ಎಂದು ಮಾಡುವುದರ ಬಗ್ಗೆ ಸರಕಾರ ಯೋಚನೆ ಮಾಡಬೇಕು ಕೋಟ್ಯಾಂತರ ರೂಪಾಯಿಗಳ ವ್ಯವಹಾರ ಮಾಡುವ ಸಹಕಾರ ಸಂಸ್ಥೆಗಳಲ್ಲಿ ಸರಿಯಾದ ಸಿಬ್ಬಂದಿ ಇರಬೇಕು. ಒಂದು ರೀತಿ ಯಾದ ಯುನಿಟರಿ ಸ್ಟ್ರಕ್ಚರು ಇರುವಂತೆ ಮಾಡಬೇಕು. ಡಿ. ಸಿ. ಸಿ. ಬ್ಯಾಂಕು ಮತ್ತೆ ಅಪೆಕ್ಸು ಬ್ಯಾಂಕು, ಜಿಲ್ಲಾ ಬ್ಯಾಂಕು ಹಾಗೂ ತಾಲ್ಲೂಕು ಲೆವೆಲ್ ಬ್ಯಾಂಕು ಹೀಗೆ ಒಂದಕ್ಕೆ ಎರಡರಷ್ಟು ಮೂರರಷ್ಟು ಬ್ಯಾಂಕುಗಳನ್ನು ಮಾಡುವುದು ಅಷ್ಟು ಸರಿಯಲ್ಲ. ಡಿ. ಸಿ. ಸಿ. ಬ್ಯಾಕುಗಳನ್ನು ಇಡುವುದರಿಂದೇನೂ ಪ್ರಯೋಜನ ವಾಗುವುದಿಲ್ಲ. ಇದನ್ನು ರದ್ದು ಮಾಡುವುದು ಸರಿಯಾಗಿರುತ್ತದೆ. ಬ್ಯಾಂಕು ಗಳಲ್ಲಿ ಸೆಕ್ರೆಟರಿಗಳು ಏನು ಮಾಡುತ್ತಾರೋ ಅದಕ್ಕೆ ತಕ್ಕಂತೆ ಒಂದು ರಸಲ್ಯೂಷನ್ ಪಾಸು ಮಾಡುತ್ತಾರೆ ಅದನ್ನು ಸರಕಾರಕ್ಕೆ ಒಪ್ಪಿಗೆಗೆ ಕಳುಹಿಸಬೇಕು. ಇದನ್ನೆಲ್ಲಾ ಸಿಬ್ಬಂದಿಯವರೇ ಮಾಡಬಹುದು. ಇದಕ್ಕಾಗಿಯೇ ಒಂದು ಏಕ ರೀತಿಯಾದ ಪ್ಯಾನಲ್ ಸ್ಟ್ರಕ್ಚರು ಎಂದು ಮಾಡಿದರೆ ಇದರಿಂದ ಅನುಕೂಲವಾಗುತ್ತದೆ. ಚಿಕ್ಕ ಚಿಕ್ಕ ಸೊಸೈಟಿಗಳಿಗೂ ಅನುಕೂಲವಾಗುತ್ತದೆ. ಸಿಬ್ಬಂದಿಯವರು ಸರಿಯಾದ ರೀತಿಯಲ್ಲಿ ಕೆಲಸ ಮಾಡಲು ಅನುಕೂಲವಾಗುವಂತೆ ಅವರ ಸಂಬಳ ಸಾರಿಗೆಗಳನ್ನೂ ಸರಿಪಡಿಸಬಹುದು. ಇವುಗಳನ್ನೆಲ್ಲಾ ಪರಿಶೀಲನೆ ಮಾಡಿ ಸರಕಾರವೇ ಒಂದು ಕಮಿಟಿ ನೇಮಕ ಮಾಡಿದರೆ ಅವು ಇವೆಲ್ಲವನ್ನೂ ವಿಚಾರ ಮಾಡಿ ಸಲಹೆ ಕೊಡಬಹುದು. ಇದನ್ನು ಸರಕಾರ ವಿಚಾರ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಹಿಂದೆ ಶ್ರೀ ಬಿ. ಎಲ್. ಗೌಡರವರ ಕಮಿಟಿ ಎಂದು ಮಾಡಿದರು. ಇದು ಈಗ ಕೋಲ್ಡ್ ಸ್ಟೋರೇಜ್‌ನಲ್ಲಿದೆ ಎಂದು ಕಾಣುತ್ತೆ. ಇದಕ್ಕಾಗಿ ಈಗಲಾದರೂ ಒಂದು ಕಮಿಟಿ ಮಾಡಬೇಕು ಎಂದು ಹೇಳುತ್ತೇನೆ ನಾನು ಹಿಂದೆ ಒಂದು ವಿಚಾರ ತಿಳಿಸಿದೆ. ಅದು ಷುಗರು ಡೈರೆಕ್ಟೋರೇಟು ವಿಚಾರದ ಬಗ್ಗೆ. ಚಿಕ್ಕೋಡಿಯಲ್ಲಿ ಒಂದು ಸಹಕಾರ ಸಕ್ಕರೆ ಕಾರ್ಖಾನೆ ಇದೆ. 1969ನೇ ಇಸವಿಯಲ್ಲಿ ಇದರ ಬಂಡವಾಳಕ್ಕಾಗಿ ಷೇರು ಹಣವನ್ನು ಕೊಟ್ಟಿದ್ದರೂ ಕೂಡ ಇದುವರೆಗೆ ಅವರನ್ನು ಇದರ ಮೆಂಬರುಗಳಾಗಿ ಮಾಡಲಿಲ್ಲ. ಇದಕ್ಕೆ ಕಾರಣವೇನು ? ಹೋದ ಸಾರಿ ಕೂಡ ಇದೇ ವಿಚಾರ ಪ್ರಶ್ನೆ ಮಾಡಿದ್ದೆ. ಇದುವರೆಗೆ ಇನ್ನೂ ಇವರನ್ನು ಮೆಂಬರುಗಳಾಗಿ ಮಾಡಲಿಲ್ಲ. ಇದನ್ನು ಈಗಲಾದರೂ ಕೂಲಂಕಷವಾಗಿ ಪರಿಶೀಲಿಸಬೇಕೆಂದು ಮತ್ತು ಶೀಘ್ರವಾದ ಕಾರ್ಯಕ್ರಮವನ್ನು ಮಾಡಿಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ. ಕಾರವಾರದಲ್ಲಿರುವ ತಾಲ್ಲೂಕ್ ಅಗ್ರಿಕಲ್‌ಚರಲ್ ಮಾರ್ಕೆಟಿಂಗ್ ಸೊಸೈಟಿಯವರು ಗೋಡೌನ್ ಕಟ್ಟಲು ಸಹಾಯ ಮಾಡಿದ್ದರು ಮತ್ತು ಸರಕಾರ ಇದಕ್ಕಾಗಿ ಸಿಮೆಂಟು ಮೂಟೆಗಳನ್ನು ಸಹ ಒದಗಿಸಿದ್ದರು. ಇದುವರೆಗೆ ಇಲ್ಲಿ ಗೋಡೌನ್ ಆಗಲಿಲ್ಲ. ಆದರೆ

ಸರಕಾರ ಕೊಟ್ಟ ಸಿಮೆಂಟು ಮೂಟೆಗಳೆಲ್ಲಾ ಮಾಯವಾಗಿವೆ. ಇದರ ಬಗ್ಗೆ ಪರಿಶೀಲಿಸಬೇಕು ಎಂದು ಹೇಳುತ್ತೇನೆ. ಕೊನೆಯದಾಗಿ ಒಂದು ಮಾತನ್ನು ಮಾರ್ಕೆಟಿಂಗ್ ಫೆಡರೇಷನ್ ಬಗ್ಗೆ ಹೇಳಬೇಕಾಗಿದೆ ಇದಕ್ಕಾಗಿ ನೂರಾರು ಕೋಟಿಯಷ್ಟು ಬಂಡವಾಳ ಷೇರು ರೂಪದಲ್ಲಿ ಬಂದಿವೆ. ಇದರ ವ್ಯವಸ್ಥೆ ಸರಿಪಡಿಸಬೇಕು. ಇನ್ನು ಫಾರ್ಮರ್ಸ್ ಡೆವಲಪ್‌ಮೆಂಟ್ ಸಂಸ್ಥೆಗಳೆಂದು ಒಂಬತ್ತು ಜಿಲ್ಲೆಗಳಲ್ಲಿ ಮಾಡಿದ್ದಾರೆ ಇವು ಎಲ್ಲ ಜಿಲ್ಲೆಗಳಲ್ಲೂ ಇರುವಂತೆ ಮಾಡಬೇಕು. ನಾನಾಗಲೇ ಹೇಳಿದಂತಹ ಸಲಹೆಗಳನ್ನು ವಿಚಾರ ಮಾಡಿ ಒಂದು ಕಮಿಟಿಯನ್ನು ಇದರ ಬಗ್ಗೆ ನೇಮಿಸಬೇಕೆಂದು ಹೇಳುತ್ತೇನೆ ಮತ್ತು ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

‡ ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಸಹಕಾರ ಸಚಿವರು ಮಂಡಿಸಿರತಕ್ಕ ಸಹಕಾರ ಇಲಾಖೆಗಳ ಬೇಡಿಕೆಗಳನ್ನು ವಿರೋಧಿಸುತ್ತಾ ಎರಡು ಮಾತುಗಳನ್ನು ಇಲ್ಲಿ ಹೇಳಬಯಸುತ್ತೇನೆ.

ಸಹಕಾರ ಇಲಾಖೆಯಲ್ಲಿ ಸಹಕಾರ ಅಂದೋಲನ ನಮ್ಮ ದೇಶದಲ್ಲಿ ಮಾಡಬೇಕು ಎಂದು ಹೇಳುವ ಒಂದು ಚಿತ್ರವನ್ನು ಅವರೇ ಹೊರಡಿಸಿರುವ ಒಂದು ಇಲಾಖಾ ಹೊತ್ತಿಗೆಯನ್ನು ನೋಡಿದರೆ ನಮಗೆ ಇದರ ಸ್ಪಷ್ಟ ಚಿತ್ರ ಗೊತ್ತಾಗುತ್ತದೆ. ಸರಕಾರ ಕೊಟ್ಟಿರುವ ವರದಿಯಂತೆ ಎಷ್ಟು ಜನ ಸದಸ್ಯತ್ವ ಹೊಂದಿದ್ದಾರೋ ಇದರಲ್ಲಿ ಹೇಳಿರುವಂತೆ ಸುಮಾರು 49 ಲಕ್ಷ ಎಂದು ಇದೆ. ಇದರಲ್ಲಿ ಡ್ಯೂಪ್ಲಿಕೇಟ್ ಮೆಂಬರುಶಿಪ್ಪುಗಳು ಎಷ್ಟಿವೆ ಇದನ್ನು ಯಾರೂ ವಿಚಾರ ಮಾಡಲಿಲ್ಲ ಕಾರಣವೇನೆಂದರೆ ಒಬ್ಬ ಮನುಷ್ಯ ಹತ್ತು ಹತ್ತು ಸಹಕಾರ ಸಂಘಗಳಲ್ಲಿ ಸದಸ್ಯರಾಗಿ ಸದಸ್ಯತ್ವ ಹೊಂದಿರತಕ್ಕ ಪ್ರಸಂಗಗಳು ಇದರಲ್ಲಿವೆ. ಸಹಕಾರ ಇಲಾಖೆಯ ನಿಯಮದಂತೆ ಒಬ್ಬರು ಒಂದು ಸಂಘದ ಮೆಂಬರಾದರೆ ಮತ್ತೆ ಒಂದು ಬೇರೆ ಸಂಘದಲ್ಲಿ ಮೆಂಬರಾಗುವುದಕ್ಕೆ ಅವಕಾಶವಿಲ್ಲ. ಹಾಗಿಲ್ಲದಿದ್ದರೂ ಇಲ್ಲಿ ನಾವು ನೋಡುವಾಗ ಅನೇಕ ಸದಸ್ಯರು ಒಂದು ಸಂಘದಲ್ಲಿ ಮೆಂಬರಾಗಿರುವವರು ನಾಲ್ಕಾರು ಸಂಘಗಳಲ್ಲಿ ಮೆಂಬರಾಗಿರುತ್ತಾರೆ ಇದನ್ನು ಯಾರೂ ಸರಿಯಾಗಿ ಪರಿಶೀಲನೆ ಮಾಡುತ್ತಿಲ್ಲ ಇಂತಹ ಅವ್ಯವಸ್ಥೆಗಳನ್ನು ಸರಿಯಾಗಿ ಪರಿಶೀಲಿಸುವವರು ಯಾರು ಎಂದು ಕೇಳಬೇಕಾಗಿದೆ. ಒಂದು ಸಂಘದಲ್ಲಿ ಕ್ರಾಪ್ ಲೋನು ಎಂದು ತೆಗೆದುಕೊಂಡವರು ಬೇರೆ ಇನ್ನೊಂದು ಸಂಘದಲ್ಲೂ ಕ್ರಾಪ್ ಲೋನು ತೆಗೆದುಕೊಳ್ಳುತ್ತಾರೆ. ಹೀಗೆ ಡ್ಯೂಪ್ಲಿಕೇಟು ಸದಸ್ಯರುಗಳು ಟ್ರಿಪ್ಲಿಕೇಟು ಸದಸ್ಯರುಗಳು ನಮ್ಮ ಕರ್ನಾಟಕ ರಾಜ್ಯದಲ್ಲಿರುವುದನ್ನು ನಾವು ನೋಡಬಹುದು. ಹೀಗಾದರೆ ನಮ್ಮ ರಾಜ್ಯದಲ್ಲಿ ಸಹಕಾರದ ಅಂದೋಲನ ಯಾವ ರೀತಿಯಾಗುತ್ತದೆ ಎಂದು ನಾವು ವಿಚಾರ

(ಶ್ರೀ ಕಾಗೋಡು ತಿಮ್ಮಪ್ಪ)

ಮೂಡಬಹುದು. ಜೊತೆಗೆ ಅವರು ನಾನಾ ತರಹದ ಕೊಟ್ಟಿರತಕ್ಕಂಥಅಂಕಿ ಅಂಶಗಳ ಪ್ರಕಾರ ಒಟ್ಟು 21325 ಕೋಅಪರೇಟೀವ್ ಸೊಸೈಟಿಗಳು ಇವೆ. ಇವುಗಳ ಪೈಕಿ ವಯಬಲ್ ಎಷ್ಟು ಎಂಬುದನ್ನು ಹೇಳಿಲ್ಲ, ಒಂದು ವರ್ಷದ ಹಿಂದೆ ನಾನು ವ್ಯವಸಾಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಸೊಸೈಟಿಗಳ ಪೈಕಿ ಎಷ್ಟು ವಯಬಲ್ ಇದೆ ಎಂದು ಒಂದು ಪ್ರಶ್ನೆ ಕೇಳಿದ್ದಕ್ಕೆ, 8 ಸಾವಿರ ಸೊಸೈಟಿಗಳ ಪೈಕಿ 2 ಸಾವಿರ ವಯಬಲ್ ಇದೆ ಎಂದು ಉತ್ತರ ಕೊಟ್ಟಿದ್ದರು. ಅಂದರೆ ಉಳಿದ 6 ಸಾವಿರ ಸೊಸೈಟಿಗಳು ಸರಿಯಾಗಿ ಕೆಲಸ ಮಾಡದಿರುವುದು ಕಂಡುಬರುತ್ತದೆ. ಈ ಕೋಆಪರೇಟಿವ್ ಸೊಸೈಟಿಗಳು ವ್ಯಾಪಕವಾಗಿ ಏನೋ ಬೆಳೆಯುತ್ತಿವೆ, ಆದರೆ ಗುಣ ಮಟ್ಟದಲ್ಲಿ ಮಾತ್ರ ಕೀರ್ತಿ ಶಿಖರವೇರುತ್ತಿಲ್ಲ, ಇದಕ್ಕೆ ಮುಖ್ಯವಾದ ಕಾರಣ ವೇನೆಂದರೆ, ಸ್ಥಳದ ಮಟ್ಟದಲ್ಲಿರತಕ್ಕಂಥ ಅಧಿಕಾರಿಗಳ ಅಲಕ್ಷ ಮನೋಭಾವ. ಇಲ್ಲಿ ಆ ಊರು, ಈ ಊರು ಎನ್ನುವ ಪ್ರಶ್ನೆಯಲ್ಲ, ಇವೊತ್ತು ಗ್ರಾಮ ಮಟ್ಟದಲ್ಲಿ ತಾಲ್ಲೂಕ್ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿರುವ ಎಲ್ಲ ಸಹಕಾರೀ ಸಂಘಗಳು ಸಹ ಇದರ ಒಂದು ವ್ಯಾಪ್ತಿಯಲ್ಲಿ ಬರುತ್ತವೆ. ಎಷ್ಟೆಷ್ಟು ದುಡ್ಡು ಹೊಡೆಯುವುದಕ್ಕೆ ಸಾಧ್ಯ ಎಷ್ಟೆಷ್ಟು ಸಂಪಾದನೆ ಮಾಡಿಕೊಳ್ಳಬಹುದು ಎಂಬತಕ್ಕಂಥ ಒಂದು ಕೆಟ್ಟ ಮನೋವೃತ್ತಿ ಆ ಅಧಿಕಾರಿಗಳಲ್ಲಿ ಬೆಳೆಯುತ್ತಿದೆ. ಈ ಮಾತನ್ನು ಅತ್ಯಂತ ವೇದನೆಯಿಂದ ಹೇಳಬೇಕಾಗಿದೆ. ಇವೊತ್ತು ರಾಜ್ಯ ಮಟ್ಟದಲ್ಲಿ ಕೋಅಪರೇಟಿವ್ ಫೆಡರೇಷನ್, ಕನ್‌ಸ್ಯೂಮರ್ಸ್ ಫೆಡರೇಷನ್, ಅಪೆಕ್ಸ್ ಬ್ಯಾಂಕ್, ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಮತ್ತು ಮಾರ್ಕೆಟಿಂಗ್ ಫೆಡರೇಷನ್, ಇವು 5 ಸಹ ಭಾರಿ ಆನೆಗಳಂತೆ ಬೆಳೆದು ನಿಂತಿವೆ. ಈ ಆನೆಗಳು ಇಂದು ಏನಾಗಿವೆ ಎಂದರೆ, ಅದನ್ನು ನೋಡಿಕೊಳ್ಳುತ್ತಿರುವ ಜನರನ್ನು ಯಾರೂ ಮಾತನಾಡಿಸುವುದಕ್ಕೆ ಸಾಧ್ಯವಿಲ್ಲ, ಏಕೆಂದರೆ ಅವುಗಳು ಅವರ ಜಹಗೀರ್ ಇದ್ದಂತೆ ಇವೆ. ಇಂತಹವರು ಅಲ್ಲಿ 3 ವರ್ಷದ ಮೇಲೆ ಇರಬಾರದು ಎಂದು ಒಂದು ಮಸೂದೆಯನ್ನು ತಂದು ಈ ಮನೆಯಲ್ಲಿ ಪಾಸ್ ಮಾಡಲಾಯಿತು. ಆದರೆ ಅದು ಕೌನ್ಸಿಲ್‌ನಲ್ಲಿ ಇನ್ನೂ ಪಾಸಾಗಲಿಲ್ಲ, ಅದಕ್ಕೆ ಕಾರಣವೇನು ? ಸರ್ಕಾರಕ್ಕೆ ಏನಾದರು ಮಾನ ಮರ್ಯಾದೆ, ನಾಚಿಕೆ ಎಂಬುದು ಇದ್ದರೆ, ಅದು ಅಲ್ಲಿ ಪಾಸಾಗುವುದಕ್ಕೆ ಏರ್ಪಾಡು ಮಾಡಬೇಕು.

SRI S. M. KRISHNA.—I would like to reiterate that we tried to get it passed in the Legislative Council, soon after the Assembly passed the Bill. We also brought it before the Business Advisory Committee of the Council with a request to give top priority to this Bill.

ಶ್ರೀ ಹೆಚ್. ಡಿ. ದೇವೇಗೌಡ.—ಆ ಬಿಲ್ ಈ ಮನೆಯಲ್ಲಿ ಪಾಸಾದ ಮೇಲೆ ಕೌನ್ಸಿಲ್ ಅನೇಕ ಸಲ ಸಭೆ ನಡೆಸಿದ್ದರೂ ಸಹ ಅಲ್ಲಿ ಪಾಸಾಗದಿರುವುದಕ್ಕೆ ಕಾರಣವೇನು ?

ಶ್ರೀ ಎಸ್. ಎಂ. ಕೃಷ್ಣ.—ಅದಕ್ಕೆ ಉತ್ತರವನ್ನು ಕೌನ್ಸಿಲ್‌ನಿಂದ ಕೇಳಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ನೀವೂ ಸಹ ಕೌನ್ಸಿಲ್ ಸದಸ್ಯರಾಗಿದ್ದೀರಿ. ಆದಕಾರಣ ನೀವು ಕಾರಣ ಹೇಳಬೇಕು.

SRI S. M. KRISHNA.—I will take up the responsibility of getting it passed.

SRI H. D. DEVEGOWDA.—We know how that Bill is kept pending.

SRI S. M. KRISHNA.—I am sorry that there has been honest misunderstanding. It is uncharitable on their part to say like that though I am willing to get it passed

SRI H. D. DEVEGOWDA.—Let him say that the opposition obstructed the passing of the Bill. I know why it is pending.

SRI S. M. KRISHNA.—They have not been able to provide time for it. ಅದಕ್ಕೆ ಅನ್ಯತೆ ಕೊಡಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಇರುವ ವಿಚಾರವನ್ನು ತಾವು ಮುಚ್ಚಿಕೊಳ್ಳುವುದಕ್ಕೆ ಹೋಗಬೇಡಿ. ಆ ಬಿಲ್ ಪಾಸ್ ಮಾಡಲು ಅಲ್ಲಿಯ ವಿರೋಧ ಪಕ್ಷದವರು ಏನಾದರು ಅಡ್ಡಿ ಒಂದರೆ ಅದನ್ನು ತಾವು ಇಡೀ ದೇಶಕ್ಕೆ ಹೇಳುತ್ತಾ ಹೋಗಿ, ಅ ರೀತಿ ಮಾಡದಿದ್ದರೆ ಸರ್ಕಾರದವರಿಗೇ ಆ ಮಸೂದೆಯನ್ನು ಪಾಸ್ ಮಾಡಲು ಇಷ್ಟವಿಲ್ಲವೆಂದು ನಾವು ಹೇಳಬೇಕಾಗುತ್ತದೆ.

ಶ್ರೀ ಎಸ್. ಎಂ. ಕೃಷ್ಣ.—ಈ ಸಲ ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ಸಲವೂ ಮಾಡದೇ ಹೋದರೆ ತಾವು ಆ ಸ್ಥಾನ ಬಿಡಬೇಕಾಗುತ್ತದೆ.

ಶ್ರೀ ಎಸ್. ಎಂ. ಕೃಷ್ಣ.—ತಾವು ಆ ಒಂದು ಮಾತನ್ನು ಮಾತ್ರ ಕಲಿತಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ.—ರಾಜ್ಯಮಟ್ಟದಲ್ಲಿರತಕ್ಕಂಥ ಈ 5 ದೊಡ್ಡ ಸಂಸ್ಥೆಗಳು ಏನಿವೆ, ಅವುಗಳ ಆಡಿಟ್ ಮಾಡತಕ್ಕಂಥ ಕೆಲಸದಲ್ಲಿ ಅನೇಕ ಲೋಪ ದೋಷಗಳು ನಡೆಯುತ್ತಿವೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಒಂದು ಸಂಸ್ಥೆಯ ಲೆಕ್ಕ ಪತ್ರಗಳನ್ನು ಪರಿಶೀಲನೆ ಮಾಡಿ ನೋಡಿದಾಗ ಈ ರೀತಿ ಲೋಪ ದೋಷಗಳಿರುವುದು ಕಂಡುಬಂತು. ಈಗ ನಾನು ವಿವರವಾಗಿ ಹೇಳುವುದಕ್ಕೆ ಹೋಗು ವುದಿಲ್ಲ. ಏಕೆಂದರೆ ಅಲ್ಲಿ ಇನ್ನೂ ತನಿಖೆ ಮಾಡುವ ಸಂದರ್ಭದಲ್ಲಿದ್ದೇವೆ. ಮುಖ್ಯ ವಾಗಿ ಈ 5 ದೊಡ್ಡ ಸಂಸ್ಥೆಗಳು ಏನಿವೆ, ಅವುಗಳ ಲೆಕ್ಕವನ್ನು ತನಿಖೆ ಮಾಡುವ ಕೆಲಸವನ್ನು ಆಡಿಟರ್ ಜನರಲ್‌ಗೆ ಒಪ್ಪಿಸಬೇಕು ಎಂಬುದು ನಮ್ಮ ಮೂಲಭೂತ ವಾದ ಆಗ್ರಹವಾಗಿದೆ.

ಶ್ರೀ ಹೆಚ್. ಡಿ. ದೇವೇಗೌಡ :—ಮಾನ್ಯ ಮುಖ್ಯಮಂತ್ರಿಗಳು ಇಲ್ಲಿರುವುದ ರಿಂದ ಅವರ ಗಮನಕ್ಕೆ ನಾನು ಒಂದು ವಿಚಾರವನ್ನು ತರಬೇಕಾಗಿದೆ ಏನೆಂದರೆ, ಇವೊತ್ತು ನೀವು ಅಧಿಕಾರದಲ್ಲಿರಬಹುದು ; ನಾಳೆ ಬೇರೆಯವರು ಅಧಿಕಾರಕ್ಕೆ ಬರಬಹುದು ; ಆದರೆ, ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದಂತೆ All these 5 Institutions must be audited by the Auditor General If you are really interested to safeguard the money that has been invested in these Institutions you must get them audited. We are going to give a report on these Institutions. ಆ ರೀತಿ ಮಾಡದೇ ಹೋದರೆ, ಅದರಲ್ಲಿ ತೊಡಗಿಸಿರುವ ಹಣವೆಲ್ಲಾ ಕರಗಿಹೋಗಿ ಕೊನೆಗೆ, ಅವುಗಳು ನಾಮಾವಶೇಷವಾಗುತ್ತದೆಂದು ಹೇಳು ತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :—ಆ ಕೆಲಸವನ್ನು ತಾವು ದಯವಿಟ್ಟು ಮಾಡ ಬೇಕು. ಈಗ ಕೆಳಮಟ್ಟದಲ್ಲಿರತಕ್ಕಂಥ ಕೋಆಪರೇಟಿವ್ ಸೊಸೈಟಿಗಳು ಏನಿವೆ, ಅಂದರೆ ಪಂಚಾಯಿತಿ ಮಟ್ಟದ, ತಾಲ್ಲೂಕ್ ಮಟ್ಟದ ಮತ್ತು ಜಿಲ್ಲಾ ಮಟ್ಟದ ಸಂಸ್ಥೆಗಳು ಏನಿವೆ, ಅವುಗಳ ಆಡಿಟ್‌ನ್ನು ಇಲಾಖೆಯ ಅಧಿಕಾರಿಗಳೇ ಮಾಡು ತ್ತಿದ್ದಾರೆ. ಮತ್ತು ಪ್ರತಿವರ್ಷ ಆಡಿಟ್ ಮಾಡುವುದಿಲ್ಲ ; ಈಗಿನ ಪದ್ಧತಿಯನ್ನು ತೆಗೆದು ಅವುಗಳ ಆಡಿಟ್ ಮಾಡಲು ಒಂದು ಪ್ರತ್ಯೇಕವಾದಂಥ ಆಡಿಟ್ ಸೆಲ್ ರಚನೆ ಮಾಡುವುದಾಗಿ ಹಿಂದೆ ಸಹಕಾರ ಸಚಿವರಾಗಿದ್ದ ಮಾನ್ಯ ಶಂಕರ ಆಳ್ವ ಅವರು ಹೇಳಿದ್ದರು. ಆದರೆ ಆ ಕೆಲಸವನ್ನು ಅವೊತ್ತಿನವರೆಗೆ ಮಾಡಲಿಲ್ಲ ; ಈಗಿನ ಪದ್ಧತಿಯೇ ಮುಂದುವರೆದರೆ ಸಹಕಾರ ಸಂಘಗಳೆಲ್ಲಾ ಹಾಳಾಗಿ ಹೋಗುತ್ತವೆಂದು

ಹೇಳುತ್ತೇನೆ. ಸಹಕಾರ ಸಂಘದಲ್ಲಿರತಕ್ಕಂಥ ಕಾರ್ಯದರ್ಶಿಗಳು ಮತ್ತು ಅಧ್ಯಕ್ಷರು ಸೇರಿಕೊಂಡು ಯಾವ ರೀತಿ ಮೋಜವಾನಿ ಮಾಡುತ್ತಾರೋ, ಆ ರೀತಿ ಸಂಬಂಧ ಪಟ್ಟ ಅಧಿಕಾರಿಗಳು ಈಗ ಆಡಿಟ್ ಮಾಡುತ್ತಿದ್ದಾರೆ. ಇದು ಹೋಗಬೇಕು. ಪ್ರತ್ಯೇಕವಾದಂಥ ಆಡಿಟ್ ಸಿಬ್ಬಂದಿಯನ್ನು ನೇಮಕ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಆ ರೀತಿ ಮಾಡಿದ್ದೇ ಆದರೆ ಈಗಿನ ಸಹಕಾರ ಸಂಘಗಳನ್ನು ಒಂದು ಸ್ಟ್ರೀಮ್ ಲೈನ್ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಇನ್ನು ನಮ್ಮ ರಾಜ್ಯದಲ್ಲಿ ಈಗ ಕನ್‌ಸ್ಯೂಮರ್ ಕೋಆಪರೇಟಿವ್ ಫೆಡರೇಷನ್ ಏನಿದೆ, ಅದು ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಹೀಗೆ 3-4 ಕಡೆಗಳಲ್ಲಿ ಮಾತ್ರ ಜನತಾ ಬಜಾರ್‌ಗಳನ್ನು ನಡೆಸುತ್ತಿವೆ. ಅದು ಒಂದು ಒಳ್ಳೆಯ ಕೆಲಸವನ್ನು ಮಾಡುತ್ತಿದೆ. ಆದರೆ ಇದರ ಕೆಲಸಕಾರ್ಯ ಇಷ್ಟಕ್ಕೇ ಸೀಮಿತಗೊಳ್ಳದೆ, ಅದರ ಶಾಖೆಗಳು ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕ್ ಮಟ್ಟದಲ್ಲಿಯೂ ಪ್ರಾರಂಭವಾಗಬೇಕು.

SRI H. D. DEVEGOWDA :—This Federation has no control over the Whole-sale stores. If the Government is interested to make the Consumer Co-operative Federation a little more active, let its activities be spread throughout the State.

ಶ್ರೀ ಕಾಗೋಡು ತಿಮ್ಮಪ್ಪ :—ಅವರು ಮಾಡತಕ್ಕಂಥ ಕೆಲಸವನ್ನು ನಾನು ನೋಡಿದ್ದೇನೆ ಜರಡಿ ಹಿಡಿದು ಶುದ್ಧ ಮಾಡಿದಂತಹ ಬೇಳೆಗಳನ್ನು ಪ್ಯಾಕೆಟ್‌ಗಳಲ್ಲಿ ಹಾಕಿ ಕೊಡುತ್ತಾರೆ. ಅದನ್ನು ತಂದು ನೇರವಾಗಿ ಅಡಿಗೆ ಮಾಡಬಹುದು ; ಈ ಒಂದು ಸೌಲಭ್ಯ ರಾಜ್ಯದ ಎಲ್ಲ ಜನತೆಗೆ ಸಿಗುವಂತೆ ಮಾಡಬೇಕು. ಅದಕ್ಕಾಗಿ ಜನತಾ ಬಜಾರ್‌ಗಳನ್ನು ಎಲ್ಲ ತಾಲ್ಲೂಕ್ ಮಟ್ಟದಲ್ಲಿ ಮತ್ತು ಎಲ್ಲಾ ಜಿಲ್ಲಾ ಮಟ್ಟದಲ್ಲಿ ಕನ್‌ಸ್ಯೂಮರ್ ಕೋ ಆಪರೇಟಿವ್ ಫೆಡರೇಷನ್ ಮೂಲಕ ತೆರೆದು ಅಲ್ಲಿಯ ಜನರಿಗೂ ಈ ಒಂದು ಸೌಲಭ್ಯವನ್ನು ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ.

ಹೀಗೆ ನಿಮ್ಮ ಫೆಡರೇಷನ್ ಜಿಲ್ಲಾಭಿವೃದ್ಧಿ ಮಂಡಳಿಗಳನ್ನು ಜಿಲ್ಲಾ ಮಟ್ಟದಲ್ಲಿಯೂ, ತಾಲ್ಲೂಕು ಅಭಿವೃದ್ಧಿ ಮಂಡಳಿಗಳನ್ನು ತಾಲ್ಲೂಕು ಮಟ್ಟದಲ್ಲಿ ಅದರ ವ್ಯಾಪ್ತಿಯನ್ನು ನೇರವಾಗಿ ಇಟ್ಟುಕೊಂಡಿದ್ದಾರೆ. ಹಾಗೆಯೇ ಕನ್‌ಸ್ಯೂಮರ್ಸ್ ಫೆಡರೇಷನ್‌ಗೂ ಕೂಡ ಅದಕ್ಕೆ ಬೇಕಾದಂತ ಸಹಾಯವನ್ನು ಕೊಟ್ಟು ಅದರ ಪ್ರಯೋಜನ ಸಾಮಾನ್ಯ ಜನರಿಗೆ ಸಿಕ್ಕುವ ಹಾಗೆ ಮಾಡಬೇಕು. ಈ ಕನ್‌ಸ್ಯೂಮರ್ಸ್ ಫೆಡರೇಷನ್ ಈ ರೀತಿ ಅಗತ್ಯ ವಸ್ತುಗಳನ್ನು ವಿತರಣೆ ಮಾಡುವುದಕ್ಕೆ ಇರುವುದು.

ಶ್ರೀ ಡಿ. ದೇವರಾಜ ಅರಸ್ :—ಕನ್‌ಸ್ಯೂಮರ್ಸ್ ಫೆಡರೇಷನ್ ಚೆನ್ನಾಗಿ ಕೆಲಸ ಮಾಡುತ್ತಾ ಇದೆ.

ಶ್ರೀ ಕಾಗೋಡು ತಿಮ್ಮಪ್ಪ :—ಚೆನ್ನಾಗಿ ಕೆಲಸ ಮಾಡುತ್ತಾ ಇದೆ. ಮುಖ್ಯ ಮಂತ್ರಿಗಳು ನೋಡುವುದಾದರೆ ಬನ್ನಿ ತೋರಿಸುತ್ತೇನೆ. ಇಂಥ ಸಾಮಾನು ಗಳನ್ನು ಕೊಡಿಸಿಬಿಟ್ಟರೆ ಯಾರು ತಾನೆ ಬೇಡ ಎನ್ನುತ್ತಾರೆ.

ಶ್ರೀ ಹೆಚ್. ಡಿ. ದೇವೇಗೌಡ :—ದೇವೇಗೌಡರು ಸೋಷಿಯಲಿಸ್ಟ್ ಪಾರ್ಟಿ ಅಲ್ಲ, ಕಾಂಗ್ರೆಸ್ 'ಓ' ಆದ ಮಾತ್ರಕ್ಕೆ, ಆ ಕಡೆ ಕೂಡ 9 ಜನ ಇದ್ದಾರೆ. ಅಲ್ಲಿ ಕೆಲಸ ಚೆನ್ನಾಗಿ ನಡೆಯುತ್ತಾ ಇರುವುದು ಕಂಡುಬಂದಿದೆ. ಆರ್ಗನೈಸೇಷನ್‌ನ್ನು ಚೆನ್ನಾಗಿ ಸ್ಟ್ರೆಂತನ್ ಮಾಡಿದರೆ ಒಳ್ಳೆಯ ಕೆಲಸ ಆಗುತ್ತದೆ. ಬಳಕೆದಾರರ ದೃಷ್ಟಿಯಿಂದ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಈ ವ್ಯವಸ್ಥೆಯನ್ನು ಮಾಡುವುದಕ್ಕೆ ಈ ಒಂದು ಸಂಸ್ಥೆಯನ್ನು ರಾಜ್ಯ ವ್ಯಾಪ್ತಿ ದೃಷ್ಟಿಯಿಂದ ಬದಲಿಸುವು ದಕ್ಕೆ ಪ್ರಯತ್ನ ಮಾಡಬೇಕು. ಈ ಒಂದು ಸಕ್ಕರೆ ವಿತರಣೆ ಮಾಡುವುದನ್ನು ಗೊಬ್ಬರ, ಔಷಧಿ ಮುಂತಾದುವುಗಳನ್ನು ವಿತರಣೆ ಮಾಡುವುದನ್ನು ಇದಕ್ಕೆ ವಹಿಸ ಬೇಕು. ಹಾಗೆ ಮಾಡಿದರೆ it will strengthen the organisation and they will get resources.

ಶ್ರೀ ಹೆಚ್ ಸಿ. ಶ್ರೀಕಂಠಯ್ಯ :—ಆದಾಯ ಎರಡು ರೂಪಾಯಿ ಆದರೆ ಕಮಿಷನ್ 25 ಪೈಸೆ ಅಲ್ಲಿ ನಮಗೆ ಬರುವುದು 1–75 ಪೈಸೆಯಂತೆ ತಾಲ್ಲೂಕ್ ಸಂಘಗಳಿಗೆ ಕೊಡುತ್ತೇವೆ. ಜಿಲ್ಲಾ ಮಟ್ಟದಲ್ಲಿ ಕನ್‌ಸ್ಯೂಮರ್ಸ್ ಫೆಡರೇಷನ್ ಅಂಗವಾದ ಜಿಲ್ಲಾ ಹೋಲ್‌ಸೇಲ್ ಸ್ಟೋರ್ಸ್ ಕೆಲಸ ಮಾಡುತ್ತದೆ ತಾಲ್ಲೂಕ್ ಮಟ್ಟದಲ್ಲಿ ತಾಲ್ಲೂಕ್ ಸಂಘಗಳು ಕೆಲಸ ಮಾಡುತ್ತವೆ. ಕನ್‌ಸ್ಯೂಮರ್ಸ್ ಸಂಘವೂ ಕೆಲಸ ಮಾಡುತ್ತದೆ ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿಯು ಮಾಡುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ :—ಕನ್‌ಸ್ಯೂಮರ್ಸ್ ಫೆಡರೇಷನ್ ಈವತ್ತು ಮೂರು ಜನತಾ ಬಜಾರ್‌ಗಳನ್ನು ನಡೆಸುತ್ತಿದೆ. ಜಿಲ್ಲಾ ಮಟ್ಟದಲ್ಲಿ ಹೋಲ್ ಸೇಲ್ಸ್ ಸ್ಟೋರ್ಸ್ ಅವುಗಳ ಮೇಲೆ ಯಾವುದೇ ಹತೋಟಿ ಇಲ್ಲ. ಅದನ್ನು ಬದ ಲಾವಣೆ ಮಾಡಬೇಕು. ತಿದ್ದುಪಡಿ ಮಾಡಬೇಕು. It need be, a legislation has to be brought. ಕನ್‌ಸ್ಯೂಮರ್ಸ್ ಸ್ಟೋರ್ಸ್ ಅನೇಕ ಕಡೆ ಇಲ್ಲ. ತಾಲ್ಲೂಕು ಮಟ್ಟದಲ್ಲಿ ಅದು ಆಗಬೇಕು ಸಾಧ್ಯವಾದ ಮಟ್ಟಿಗೆ ಇಂದು ಕನ್‌ಸ್ಯೂಮರ್ಸ್ ದೃಷ್ಟಿಕೋನದಿಂದ ಇದನ್ನು ಸ್ಟ್ರೆಂತನ್ ಮಾಡಿ ಎಂದು ಹೇಳುತ್ತಾ ಇರುವುದು. Essential commodities must be gathered to meet the needs of the consumers.

ಶ್ರೀ ಕಾಗೋಡು ತಿಮ್ಮಪ್ಪ : ಆದುದರಿಂದ ಅಧ್ಯಕ್ಷರು ಎರಡನ್ನೂ ಗಮನಿಸಲಿ. ಒಂದು ಆಡಿಟ್ ಸಮಗ್ರವಾಗಿ ಎಷ್ಟು ಬೇಗ ಮಾಡುತ್ತಾರೆ ಅಷ್ಟು ಬೇಗ ಸಹಕಾರಿ ಕ್ಷೇತ್ರದಲ್ಲಿ ಉಂಟಾಗಿರುವ ಗೊಂದಲವನ್ನು ತೆಗೆಯಲು ಸಾಧ್ಯವಾಗುತ್ತದೆ ಎಂದು ನನ್ನ ಆಗ್ರಹ. ಇನ್ನು ಜಿಲ್ಲಾಮಟ್ಟದಲ್ಲಿ ಇರತಕ್ಕ ಡೆಪ್ಯುಟಿ ರಿಜಿಸ್ಟ್ರಾರ್ ಸಮಗ್ರವಾಗಿ ಕೆಲಸ ಮಾಡುತ್ತಾ ಇಲ್ಲ. ಅವರ ಕೈಕೆಳಗೆ ಇರತಕ್ಕ ಸಹಕಾರಿ ಸಂಘಗಳು ಕೆಲಸ ನಿಯಂತ್ರಣ ಮಾಡುತ್ತಾ ಇಲ್ಲ. ಸಂದರ್ಭ ಸಿಕ್ಕಿದಾಗ ಅವರುಗಳಿಂದ ಆಡಿಟ್ ರಿಪೋರ್ಟ್‌ಗಳನ್ನು ತರಿಸಿಕೊಂಡು ಅದರ ಮೇಲೆ ಕೆಲಸ ಕಾರ್ಯಗಳನ್ನು ಮಾಡತಕ್ಕ ಪ್ರಯತ್ನ ಮಾಡುತ್ತಾ ಇಲ್ಲ.

SRI H. D. DEVEGOWDA :—I must compliment a good Registrar is there — a man of integrity.

ಶ್ರೀ ಕಾಗೋಡು ತಿಮ್ಮಪ್ಪ :— ಜಿಲ್ಲಾ ಮಟ್ಟದಲ್ಲಿ ಇರತಕ್ಕ ಡೆಪ್ಯುಟಿ ರಿಜಿಸ್ಟ್ರಾರ್ ಬಗ್ಗೆ ಅವರು ಗಮನಕೊಟ್ಟು ಅವರ ಕೆಲಸಕಾರ್ಯಗಳನ್ನು ಗಮನಿಸದೆ ಹೋದರೆ ತೊಂದರೆಯಾಗುತ್ತದೆ. ಉದಾಹರಣೆಗೆ ಹೇಳುತ್ತೇನೆ. ಶಿವಮೊಗ್ಗಾ ಜಿಲ್ಲೆಯಲ್ಲಿ ಡೆಪ್ಯುಟಿ ರಿಜಿಸ್ಟ್ರಾರ್ ಇದ್ದಾರೆ. ಅಲ್ಲಿರುವ ಜನರು ಒಂದು ಸೊಸೈಟಿಯ ಮೇಲೆ ಅಪಾದನೆ ಮಾಡಿದ್ದಾರೆ. ಅವರು ಏನು ಮಾಡಿದರೂ ತನಿಖೆ ಮಾಡುವುದಕ್ಕೆ ಹೋಗಲಿಲ್ಲ. ನ್ಯಾಯವಾಗಿ ಅವರನ್ನು ಸಸ್‌ಪೆಂಡ್ ಮಾಡಬೇಕಾಗಿತ್ತು. ಗೋಡೌನ್‌ನನ್ನು ತನಿಖೆ ಮಾಡಿದಾಗ 1500 ಚಿಲ್ಲರೆ ಹೊಟ್ಟು ತುಂಬಿದ ಚೀಲಗಳು ಇತ್ತು. ಇದರ ಬೆಲೆ ಸುಮಾರು 2 ಲಕ್ಷ ಚಿಲ್ಲರೆಯಾಗುತ್ತದೆ. 18 ಸಾವಿರ ಕಾಲಿ ಚೀಲಗಳು ಇತ್ತು. 18 ಸಾವಿರ ಮೂಟೆಗೆ 15 ಸಾವಿರ ಕೊರತೆ ಎಂದರೆ 40 ಸಾವಿರಕ್ಕೆ ಎಷ್ಟು ಕೊರತೆಯಾಗಿರಬಹುದು. ಆದುದರಿಂದ ಅಲ್ಲಿರತಕ್ಕ ಡೆಪ್ಯುಟಿ ರಿಜಿಸ್ಟ್ರಾರ್ ಕಣ್ಣಿನ ಎದುರಿನಲ್ಲಿ, ಮೂಗಿನನೇರಕ್ಕೆ ನೋಡಿದರೂ ಸಹ ತನಿಕೆ ಮಾಡಲಿಲ್ಲ. ಜಿಲ್ಲಾಧಿಕಾರಿಗಳ ಆಜ್ಞೆಯ ಮೇರೆಗೆ, ಶಾಸನಸಭೆಯಲ್ಲಿ ಗಲಾಟೆ ಮಾಡಿದ ಮೇಲೆ ತನಿಖೆ ಮಾಡಿದಾಗ ಅಲ್ಲಿ ಕಂಡು ಬಂದಿರತಕ್ಕ 1500 ಮೂಟೆ ಕೊರತೆ 40 ಸಾವಿರ ಮೂಟೆಯಲ್ಲಿ ಅಷ್ಟು ಕೊರತೆಯಾದದ್ದು ಕಂಡು ಬಂದಿತು. ತಾಲ್ಲೂಕು ಮಟ್ಟದಲ್ಲಿ ಅಸಿಸ್ಟೆಂಟ್ ರಿಜಿಸ್ಟ್ರಾರ್, ಜಿಲ್ಲಾ ಮಟ್ಟದಲ್ಲಿ ಇರತಕ್ಕ ಡೆಪ್ಯುಟಿ ರಿಜಿಸ್ಟ್ರಾರ್ ಯಾರ ಯಾರ ಮರ್ಜಿಗೋಸ್ಕರ ಯಾರೋ ಹೇಳಿದ ಹಾಗೆ ಮಾಡುತ್ತಾ ಇರುವುದರಿಂದ ಇಲಾಖೆಯಲ್ಲಿ ಇರತಕ್ಕ ಆಡಳಿತ ಬಿಗಿ ತಪ್ಪಿಹೋಗಿದೆ. ಆಡಳಿತದಲ್ಲಿ ಬಿಗಿ ಬರದೆಹೋದರೆ ಪ್ರತಿಯೊಂದು ಸೊಸೈಟಿಯಲ್ಲಿಯೂ ಅವ್ಯವಹಾರಗಳು ಅವ್ಯಾಹತವಾಗಿ ನಡೆಯುವುದಕ್ಕೆ ಸಾಧ್ಯವಾಗುತ್ತದೆ. ಜಿಲ್ಲಾಮಟ್ಟದಲ್ಲಿ ಅಧಿಕಾರಿಗಳ ಮೇಲೆ ಹಿಡಿತವನ್ನು ಇಟ್ಟುಕೊಂಡು ಅವರ ಮೇಲೆ ಚಾರ್ಜ್‌ನ್ನು ಹಾಕತಕ್ಕ ಕೆಲಸಗಳನ್ನು ರಿಜಿಸ್ಟ್ರಾರರು, ಮಂತ್ರಿಗಳು ಮತ್ತು ಸರ್ಕಾರ ಮಾಡಬೇಕೆಂದು ಆಗ್ರಹಪಡಿಸುತ್ತಾ ಇಷ್ಟು ಮಾತು ಹೇಳುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಂ. ರುದ್ರಪ್ಪ (ಸಕಲೇಶಪುರ): ಸನ್ಮಾನ್ಯ ಸಭಾಧ್ಯಕ್ಷರೆ ಈವತ್ತಿನ ದಿವಸ ಮಂತ್ರಿಗಳು ಮಂಡಿಸಿರತಕ್ಕ ಡಿಮ್ಯಾಂಡ್ ನಂಬರ್ 37, 24, ಮತ್ತು 30 ಈ ಮೂರು ಡಿಮ್ಯಾಂಡುಗಳನ್ನು ಸಂಪೂರ್ಣವಾಗಿ ಬೆಂಬಲ ಕೊಡುತ್ತಾ ಬಹು ಮುಖ್ಯವಾಗಿ ಯೂತ್ ಸರ್ವೀಸಸ್ ಮತ್ತು ಇನ್‌ಫರ್‌ಮೇಶನ್ ಮತ್ತು ಪಬ್ಲಿಸಿಟಿ ಇಲಾಖೆಯ ಬಗ್ಗೆ ಕೆಲವು ಸಲಹೆಗಳನ್ನು ಮಾಡಬಯಸುತ್ತೇನೆ. ಯಾವ ದೇಶ ಅಭಿವೃದ್ಧಿಯಾಗಬೇಕಾದರೂ ಅಲ್ಲಿನ ಯುವಜನರ ಪಾತ್ರ ಬಹಳ ಹಿರಿಯದಾಗಿರುತ್ತದೆ. ಆದುದರಿಂದ ಯುವಜನರು ಒಂದು ರಾಷ್ಟ್ರೀಯ ಚರಿತ್ರೆಯನ್ನು ಬದಲಿವಿಕೊಂಡು ಮುಂದೆ ಅತ್ಯುತ್ತಮವಾದ ಪ್ರಜೆಗಳು ಆಗುವುದಕ್ಕೆ, ಮುಂದಿನ ಮುಖಂಡತ್ವವನ್ನು ವಹಿಸುವುದಕ್ಕೆ ಅವರಿಗೆ ತರಬೇತು ಕೊಡತಕ್ಕ ದೊಡ್ಡ ಜವಾಬ್ದಾರಿ ಸರ್ಕಾರದ ಮೇಲೆ ಇದೆ. ಆದನ್ನು ಅರಿತುಕೊಂಡು ನಮ್ಮ ರಾಜ್ಯ ಸರ್ಕಾರದವರು ಯುವಜನ ಖಾತೆಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟಿದ್ದಾರೆ. ಇದಕ್ಕೆ ಎರಡು ಕೋಟಿಗಳಷ್ಟು ಹಣವನ್ನು ಕೊಟ್ಟಿದ್ದಾರೆ. ಅದೇ ರೀತಿ ಇನ್‌ಫರ್‌ಮೇಶನ್ ಮತ್ತು ಪಬ್ಲಿಸಿಟಿ, ಇದನ್ನು ಮೊದಲು ಇನ್‌ಫರ್‌ಮೇಶನ್ ಮತ್ತು ಟೂರಿಸಂ ಡಿಪಾರ್ಟ್‌ಮೆಂಟ್ ಎಂದು ಕರೆಯಲಾಗುತ್ತಿತ್ತು. ಟೂರಿಸಂ ಇಲಾಖೆಯು ಇದಕ್ಕೆ ಸೇರಿತ್ತು, ಟೂರಿಸಂ ಅನ್ನು ಪ್ರತ್ಯೇಕ ಮಾಡಿ ಇದಕ್ಕೆ ಹೆಚ್ಚಿನ ಆದ್ಯತೆಯನ್ನೂ ಸಹ ಕೊಟ್ಟಿದ್ದಾರೆ. ಇದಕ್ಕಾಗಿ ಸುಮಾರು ಒಂದು ಕೋಟಿ 40 ಲಕ್ಷ ರೂಪಾಯಿಗಳನ್ನು ತೆಗಿದಿಟ್ಟಿದ್ದಾರೆ. ಮುಖ್ಯವಾಗಿ ಯುವ ಜನರಿಗೆ ಹೆಚ್ಚಿನ ತರಬೇತಿ ಕೊಡುವ ದೃಷ್ಟಿಯಿಂದ ಕ್ರೀಡೆಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಬೆಂಬಲ ಕೊಟ್ಟು ಸರ್ಕಾರದವರು 7 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ನನ್ನ ದೃಷ್ಟಿಯಲ್ಲಿ ಈಗ ಕೊಟ್ಟಿರುವ ಹಣ ಸಾಲದು. ಇನ್ನು ಹೆಚ್ಚಿಗೆ ಹಣವನ್ನು ಖರ್ಚು ಮಾಡಬೇಕು ಮತ್ತು ಯುವಜನರಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಉತ್ತಮವಾದ ಪ್ರಜೆಗಳಾಗುವುದಕ್ಕೆ ಎನ್. ಸಿ. ಸಿ. ಮತ್ತು ಕ್ರೀಡೆಗಳು, ಮತ್ತು ಜಿಲ್ಲಾಮಟ್ಟದಲ್ಲಿ ಸ್ಟೇಡಿಯಂ ಕಟ್ಟಿಸಿ ಅವರಿಗೆ ಒಳ್ಳೆಯ ತರಬೇತಿಯನ್ನು ಕೊಡತಕ್ಕದ್ದು ನ್ಯಾಯವಾಗಿದೆ. ಇದಕ್ಕಾಗಿ ಇಲಾಖೆಯ ರಾಜ್ಯಸಚಿವರು ಆದಂತ ಶ್ರೀಮಾನ್ ಗುಂಡುರಾಯರು ಇನ್ನು ಹೆಚ್ಚಿನ ನಿಗಾವಹಿಸಿ ಯುವಜನರ ಸಂಘಟನೆ ಮಾಡಿ ಅವರು ರಾಜ್ಯದ ರಕ್ಷಣೆ ಮತ್ತು ಆಗುಹೋಗುಗಳಲ್ಲಿ ಅವರು ಮುಂದೆ ಸತ್ ಪ್ರಜೆಗಳಾಗುವುದಕ್ಕೆ ತರಬೇತಿ ಕೊಡುತ್ತಾರೆಂದು ನಾನು ನಂಬಿದ್ದೇನೆ. ಬಹು ಮುಖ್ಯವಾಗಿ ಇದರಲ್ಲಿ ಏನು ಕಂಡು ಬರುತ್ತದೆ ಎಂದರೆ ಯುವಜನರ ಹೆಸರಿನಲ್ಲಿ ವಯಸ್ಸಾದವರು ಯುವಜನ ಮುಖಂಡರು ಎಂದು ಹೇಳಿಕೊಂಡು ಬರುತ್ತಾ ಇದ್ದಾರೆ. ಇದನ್ನು ತಪ್ಪಿಸಬೇಕು ಆದುದರಿಂದ ಇದಕ್ಕೆ ವಯೋಮಿತಿ ಹಾಕಿ ಇಷ್ಟು ವಯಸ್ಸಾದ ಮೇಲೆ ಇದರಲ್ಲಿ ಭಾಗವಹಿಸಬಾರದೆಂದು ಸರ್ಕಾರದವರು ಕಟ್ಟುನಿಟ್ಟಾಗಿ ನಿಯಮವನ್ನು ಮಾಡಬೇಕು. ಎನ್. ಸಿ. ಸಿ ಯಲ್ಲಿ ತರಬೇತಿ ಕೊಡುವುದನ್ನು ಸ್ಕೂಲ್ ಮತ್ತು ಕಾಲೇಜುಗಳಲ್ಲಿ ಕೊಡುತ್ತಿದ್ದಾರೆ. ಅದಕ್ಕೆ ಸರ್ಕಾರದವರು ಸಾಕಷ್ಟು ಹಣವನ್ನು ಖರ್ಚು ಮಾಡುತ್ತಿದ್ದಾರೆ. ಕೆಲವು

ಸಮಯದಲ್ಲಿ ಸರಿಯಾದ ಟ್ರೈನಿಂಗನ್ನು ಕೊಡುವವರು ಇಲ್ಲದೇ ಇರುವಂತಹ ಸಂದರ್ಭದಲ್ಲಿ ಅಲ್ಲಿಯೇ ಇರುವಂತಹ ಉಪಾಧ್ಯಾಯರ ಪೈಕಿ ಯಾರು ಇದರಲ್ಲಿ ಹೆಚ್ಚಿನ ಪರಿಣತೆಯನ್ನು ಹೊಂದಿರುತ್ತಾರೆ ಅಂಥವರ ಮೇಲ್ವಿಚಾರಣೆಗೆ ಇದನ್ನು ಒಳಪಡಿಸಬೇಕು. ಪ್ರತಿಯೊಂದು ಡಿಸ್ಟ್ರಿಕ್ಟ್‌ಗಳಲ್ಲೂ ಕೂಡ ಕ್ರೀಡೆಗಳನ್ನು ಅಭಿವೃದ್ಧಿಗೊಳಿಸುವುದಕ್ಕೋಸ್ಕರವಾಗಿ ಒಂದೊಂದು ಸ್ಟೇಡಿಯಂನ್ನು ಕಟ್ಟಲು ಯೋಜನೆಯನ್ನು ಹಾಕಿದ್ದಾರೆ. ಈ ವರ್ಷ ಹಾಸನ ಜಿಲ್ಲೆಗೆ ಅದನ್ನು ಕೊಟ್ಟಿದ್ದಾರೆ. ಆದರೆ ಇದಕ್ಕೆ ಕೊಟ್ಟಿರುವ ಹಣ ಬಹಳ ಕಡಿಮೆ. ಇದಕ್ಕೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸಿ ಇದು ಆದಷ್ಟು ಜಾಗ್ರತೆ ಕಾರ್ಯಗತವಾಗುವಂತೆ ಮಾಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ರಾಜ್ಯ ಸಚಿವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತು ಫ್ಲೈಯಿಂಗ್ ಟ್ರೈನಿಂಗ್ ಸ್ಕೂಲ್ ಕೂಡ ಆಗುವಂತೆ ಹೆಚ್ಚಿನ ಆದ್ಯತೆಯನ್ನು ಸರ್ಕಾರದವರು ಕೊಡಬೇಕು. ನಮ್ಮ ಹಾಸನ ಬೂವಿನ ಹಳ್ಳಿಯಲ್ಲಿ ಏರೋಡ್ರೋಮ್ ಕೆಲಸ ಅರ್ಧಕ್ಕೇ ನಿಂತು ಹೋಗಿದೆ ಈ ಕೆಲಸ ಬೇಗ ಆಗುವಂತೆ ನೋಡಿಕೊಳ್ಳಬೇಕು ಮತ್ತು ಹಳೇಬೀಡು, ಬೇಲೂರು, ಶ್ರವಣಬೆಳಗೊಳ ಇವುಗಳನ್ನು ನೋಡಲು ಬರುವ ಟೂರಿಸ್ಟ್‌ಗಳಿಗೆ ಅನುಕೂಲವಾಗುವಂತೆ ಏರೋಡ್ರೋಮ್ ಸರ್ವೀಸ್ ಆದಷ್ಟು ಬೇಗ ಆಗುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಾಯಪಡಿಸಬೇಕೆಂದು ಈ ಸಮಯದಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

5-00 P. M.

ಇನ್ನು ಪಬ್ಲಿಸಿಟಿ ಮತ್ತು ಇನ್‌ಫರ್ಮೇಷನ್ ಇಲಾಖೆಯನ್ನು ತೆಗೆದುಕೊಂಡರೆ ನಮ್ಮ ಸರ್ಕಾರದ ವತಿಯಿಂದ "ಮಾರ್ಚ್ ಆಫ್ ಕರ್ನಾಟಕ'' ಎನ್ನತಕ್ಕ ಇಂಗ್ಲಿಷ್ ಮಾಸಿಕ ಪತ್ರಿಕೆ ಹೊರಡುತ್ತಿದೆ. "ಜನಪದ'' ಕನ್ನಡ ವಾರಪತ್ರಿಕೆ ಹೊರಡುತ್ತಿದೆ. "ಪಂಚಾಯಿತಿ ರಾಜ್ಯ'' ಎಂಬ ವಾರಪತ್ರಿಕೆ ಕೂಡ ಹೊರಡುತ್ತಿದೆ. ಈಗ ಈ ಮೂರು ಪತ್ರಿಕೆಗಳೂ ಕೂಡ ಸರಿಯಾಗಿ ಬರುತ್ತಿವೆ. ಇದರಲ್ಲಿ ಹಳೆಯ ವರ್ತಮಾನಗಳು ಇರುತ್ತವೆ. ಆದುದರಿಂದ ಹೊಸ ಹೊಸ ವರ್ತಮಾನಗಳೂ ಮತ್ತು ಒಳ್ಳೆಯ ಫೋಟೋಗ್ರಫಿಯನ್ನೂ ಹಾಕಿ ಇವುಗಳನ್ನು ಒಳ್ಳೆಯ ಅತ್ಯುತ್ತಮ ಪತ್ರಿಕೆಗಳನ್ನಾಗಿ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಏತಕ್ಕೆಂದರೆ ನಮ್ಮ ಸರ್ಕಾರ ಏನು ಮಾಡುತ್ತಿದೆ ಎಂಬುದು ಜನತೆಗೆ ತಿಳಿಯಬೇಕಾದರೆ ಪತ್ರಿಕೆಗಳು ಮತ್ತು ಸಿನಿಮಾಗಳು ಮುಖ್ಯ ಸಾಧನಗಳು ಆದುದರಿಂದ ಇವುಗಳಿಗೆ ಉತ್ತೇಜನವನ್ನು ನೀಡಿ ಹಳ್ಳಿಗಳಲ್ಲಿ ಪ್ರಚಾರವಾಗುವಂತೆ ಸರ್ಕಾರದವರು ನೋಡಿಕೊಳ್ಳಬೇಕು. ಈ ಕಾರ್ಯವನ್ನು ನಮ್ಮ ಸರ್ಕಾರದವರು ಮಾಡುತ್ತಾರೆಂದು ನಾನು ತಿಳಿದಿದ್ದೇನೆ. ಅದೇ ರೀತಿಯಲ್ಲಿ ಸರ್ಕಾರದವರು ದೊಡ್ಡ ದೊಡ್ಡ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಅವುಗಳಲ್ಲಿ ಮುಖ್ಯವಾದುವು ಭೂಸುಧಾರಣೆ ವಸತಿ ನಿರ್ಮಾಣ ಯೋಜನೆ ಇತ್ಯಾದಿ ಜನಗಳಿಗೆ

(ಶ್ರೀ ಕೆ. ಎಂ. ರುದ್ರಪ್ಪ)

ತಿಳಿವಳಿಕೆ ಬರುವುದಕ್ಕೆ ಇವು ಮುಖ್ಯ ಸಾಧನಗಳು. ಇದರಲ್ಲಿ ಇನ್ನೂ ಹೆಚ್ಚು ಮುಖ್ಯವಾದುದು ಎಂದರೆ ಸಿನಿಮಾಗಳು. ನಮ್ಮಲ್ಲಿ "ಕರ್ನಾಟಕ ಫಿಲಂ ಕೋ ಆಪರೇಟಿವ್ ಡೆವಲಪ್‌ಮೆಂಟ್ ಕಾರ್ಪೊರೇಷನ್" ಎಂದು ಇದೆ. ಇದರಲ್ಲಿ ಸರ್ಕಾರದವರು ಹೆಚ್ಚಿಗೆ ಷೇರುಗಳನ್ನು ತೆಗೆದುಕೊಳ್ಳಬೇಕು. ಈ ವರ್ಷ 10 ಲಕ್ಷ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿದ್ದಾರೆ. ಇದೂ ಕೂಡ ಸಾಲದು. ಹೆಚ್ಚು ಹೆಚ್ಚು ಇನ್‌ವೆಸ್ಟ್ ಮಾಡಿ ಮಿನಿ ಥಿಯೇಟರುಗಳು ಆಗುವಂತೆ ನೋಡಿಕೊಳ್ಳಬೇಕು. ಈಗ ಕನ್ನಡ ಚಿತ್ರಗಳಿಗೆ 50 ಸಾವಿರದಿಂದ 1 ಲಕ್ಷ ರೂಪಾಯಿ, ಟೆಕ್ನಿಕಲರ್ ಚಿತ್ರಗಳಿಗೆ 1 ಲಕ್ಷದಿಂದ ಒಂದೂವರೆ ಲಕ್ಷ ರೂ. ಗಳಿಗೆ "ಸಬ್ಸಿಡಿ" ಧನವನ್ನು ಏರಿಸಿದ್ದಾರೆ. ಈ ಮೂಲಕ ಸರ್ಕಾರದವರು ಒಂದು ಯೋಗ್ಯ ಕ್ರಮವನ್ನು ತೋರಿಸಿ ಕೊಟ್ಟಿದ್ದಾರೆ. ಆದರೆ ಹಿಂದಿ, ತೆಲುಗು, ತಮಿಳು, ಮಲೆಯಾಳಂ, ಚಿತ್ರಗಳಿಗೆ ಏತಕ್ಕೆ ಇವರು ಸಬ್ಸಿಡಿಯನ್ನು ಕೊಡಬೇಕೋ ನನಗೆ ಅರ್ಥವಾಗುವುದಿಲ್ಲ. ಕನ್ನಡ ಚಿತ್ರಗಳಿಗೇ ಇನ್ನೂ ಹೆಚ್ಚಿನ ರೀತಿಯಲ್ಲಿ ಸಬ್ಸಿಡಿಯನ್ನು ಕೊಟ್ಟರೆ ತಪ್ಪಾಗಲಿಕ್ಕಿಲ್ಲವೆಂದು ಹೇಳಬಯಸುತ್ತೇನೆ.

ಇನ್ನು ಮತ್ತೊಂದು ವಿಷಯ ಹೇಳಬೇಕೆಂದರೆ, ಸಣ್ಣ ಪತ್ರಿಕೆಗಳು. ಇವು ಜಿಲ್ಲಾ ಮಟ್ಟದಲ್ಲಿ ಹೊರಡುತ್ತಿವೆ. ಅವುಗಳಿಗೆ ಹೆಚ್ಚಿನ ಉತ್ತೇಜನವನ್ನು ಕೊಡಬೇಕಲ್ಲದೆ, ಹೆಚ್ಚಿನ ರೀತಿಯಲ್ಲಿ ಜಾಹಿರಾತುಗಳನ್ನೂ, ಮತ್ತು ಅದಕ್ಕೆ ಬೇಕಾದ ಪೇಪರನ್ನೂ ಕೂಡ ಸಪ್ಲೈ ಮಾಡುವುದಕ್ಕೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ.

Mr. Chairman (Sri H. T. Krishnappa) in the Chair

ನಮ್ಮಲ್ಲಿ ದೊಡ್ಡ ದೊಡ್ಡ ಪತ್ರಿಕೆಗಳು ಬಹಳ ಚೆನ್ನಾಗಿ ಹೊರಡುತ್ತಿವೆ. ಉದಾಹರಣೆಗೆ ಹೇಳಬೇಕೆಂದರೆ ಡೆಕ್ಕನ್ ಹೆರಾಲ್ಡ್, ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ಕನ್ನಡ ಪ್ರಭ, ಹಿಂದೂ ಇತ್ಯಾದಿ ಪತ್ರಿಕೆಗಳು ನಮ್ಮ ರಾಜ್ಯದಲ್ಲಿ ಹೊರಡುತ್ತಾ ಇರತಕ್ಕಂಥ ಯಾವ ಪತ್ರಿಕೆಗಳಿಗೂ ಕೂಡ ಕಡಿಮೆ ಇಲ್ಲ. ಅವುಗಳಿಗೂ ಕೂಡ ನ್ಯೂಸ್ ಪ್ರಿಂಟನ್ನು ಒದಗಿಸಿ ಕೊಡುವುದಕ್ಕೆ ಸರ್ಕಾರ ಹೆಚ್ಚಿನ ನಿಗಾವನ್ನು ಕೊಡಬೇಕು.

ಇನ್ನು ಕೋ ಆಪರೇಟಿವ್ ವಿಚಾರದಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ಏನೆಂದರೆ ವೆಸ್ಟೆಡ್ ಇಂಟರೆಸ್ಟ್ ಕ್ರಿಯೇಟ್ ಆಗಿದೆ. ಈ ವೆಸ್ಟೆಡ್ ಇಂಟರೆಸ್ಟ್ ಹೋಗಬೇಕಾದರೆ ಅಲ್ಲಿ ಪದಾಧಿಕಾರಿಗಳು 2 ಟರ್ಮ್‌ಗಿಂತ

ಮೇಲ್ಪಟ್ಟು ಇರಬಾರದು. ಈ ಬಗ್ಗೆ ಅಸೆಂಬ್ಲಿಯಲ್ಲೂ ಕೂಡ ಒಂದು ಮಸೂದೆಯನ್ನು ಪಾಸ್ ಮಾಡಿದೆ. ಅದು ಕೌನ್ಸಿಲ್‌ಗೂ ಹೋಗಿದೆ. ಆದುದರಿಂದ ಸರ್ಕಾರದವರು ಇದನ್ನು ಕೂಡಲೇ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಅರ್ಬಿಟ್ರೇಟರ್ಸ್ ವಿಷಯದಲ್ಲಿ ಹೇಳಬೇಕಾದರೆ, ಇವರನ್ನು ಖಾಯಂ ಆಗಿ ನೇಮಕ ಮಾಡುವುದು ಒಳ್ಳೆಯದು. ಏಕೆಂದರೆ ಆನರರಿ ಆರ್ಬಿಟ್ರೇಟರುಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ದೂರುಗಳು ಬರುತ್ತಿವೆ.

ಇನ್ನೊಂದು ವಿಚಾರ ಏನೆಂದರೆ, ಜನತಾ ಬಜಾರ್‌ಗಳನ್ನು ಪ್ರತಿಯೊಂದು ಜಿಲ್ಲಾ ಹೆಡ್ ಕ್ವಾರ್ಟರ್ಸ್ ಮತ್ತು ಕೆಲವು ಕಡೆ ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ಗಳಲ್ಲೂ ಕೂಡ ತೆರೆಯಬೇಕೆಂದು ಹೇಳಬಯಸುತ್ತೇನೆ.

ಇನ್ನು ವೇರ್ ಹೌಸ್‌ಗಳ ವಿಷಯದಲ್ಲಿ ಹೇಳಬೇಕಾದರೆ, ರೈತರು ತಾವು ಬೆಳೆದ ದವಸ ಧಾನ್ಯಗಳನ್ನು ಸರಿಯಾದ ರೀತಿಯಲ್ಲಿ ದಾಸ್ತಾನು ಮಾಡಬೇಕಾದರೆ ವೇರ್ ಹೌಸ್‌ಗಳು ಹೆಚ್ಚಿಗೆ ಆಗಬೇಕು. ಪ್ರತಿಯೊಂದು ತಾಲ್ಲೂಕಿನಲ್ಲೂ ವೇರ್ ಹೌಸ್‌ಗಳನ್ನು ಮಾಡಲು ಹೆಚ್ಚಿನ ಗ್ರ್ಯಾಂಟನ್ನು ಸರ್ಕಾರದವರು ಕೊಡಬೇಕೆಂದು ತಿಳಿಸಿ ನನಗೆ ಇಷ್ಟು ಮಾತುಗಳನ್ನಾಡಲು ಅವಕಾಶವನ್ನು ಕಲ್ಪಿಸಿ ಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

‡ಶ್ರೀ ಬಿ. ಭೈರಪ್ಪಾಜಿ (ತುರುವೇಕೆರೆ):— ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಹಕಾರ ಸಚಿವರ ಪರವಾಗಿ ಮಂಡಿಸಿರತಕ್ಕಂಥ ಬೇಡಿಕೆಗಳನ್ನೂ ಮತ್ತು ಶ್ರೀಮಾನ್ ಗುಂಡೂರಾವ್ ಅವರು ಇನ್‌ಫರ್ಮೇಷನ್ ಮತ್ತು ಪಬ್ಲಿಸಿಟಿ ಮತ್ತು ಯುವಜನ ಕಲ್ಯಾಣ ಖಾತೆಗಳ ಬಗ್ಗೆ ಇಟ್ಟಿರತಕ್ಕಂಥ ಬೇಡಿಕೆಗಳನ್ನೂ ನಾನು ಬೆಂಬಲಿಸಿ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಹಕಾರ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿ ಆಗುತ್ತಾ ಇದೆಯೆಂದು ನಾನಾದರೂ ಕೂಡ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮಗೆ 1974-75 ರ ಸಾಲಿಗೆ ಒದಗಿಸಿರತಕ್ಕಂಥ ಕೈಪಿಡಿಯಲ್ಲಿ ಸಾಕಷ್ಟು ವಿಷಯಗಳು ನಮ್ಮ ಮುಂದಿವೆ ಕಳೆದ ವರ್ಷಗಳಲ್ಲಿ ಸಾಕಷ್ಟು ಪ್ರಗತಿಯಾಗಿದೆ. ಮುಂದೆ ಪಂಚ ವಾರ್ಷಿಕ ಯೋಜನೆಯಲ್ಲಿ ನಾವು ಏನು ಪ್ರಗತಿಯನ್ನು ಸಾಧಿಸಲಿದ್ದೇವೆ ಎಂಬ ಬಗ್ಗೆ ಅಂಕಿ ಅಂಶಗಳನ್ನು ನಮಗೆ ಒದಗಿಸಿದ್ದಾರೆ. ಈ ಸಹಕಾರ ಇಲಾಖೆ ಬಹಳ ದೊಡ್ಡ ಇಲಾಖೆ. ಇದರಲ್ಲಿ ಸುಮಾರು 680 ಕೋಟಿ ರೂಪಾಯಿ ಬಂಡವಾಳವನ್ನು ಹೂಡಿ ದೇಶದ ಹಳ್ಳಿ ಹಳ್ಳಿಯಲ್ಲೂ ಕೂಡ ಕೆಲಸ ಮಾಡತಕ್ಕಂಥಾದ್ದಾಗಿದೆ. ಇದು ಕೇವಲ ಸಣ್ಣ ಇಲಾಖೆಯೆಂದು ಯಾರೂ ಕೂಡ ಭಾವಿಸಬಾರದು ಎಂದು ನಾನಾದರೂ ಕೂಡ ಕೇಳಿಕೊಳ್ಳುತ್ತೇನೆ. ಇಂಥ ಇಲಾಖೆಯನ್ನು ಒಂದೇ ದಿವಸದಲ್ಲೇ, ಒಂದೇ

(ಶ್ರೀ ಬಿ. ಬೈರಪ್ಪಾಜಿ)

ರಾತ್ರಿಯಲ್ಲಿ ಎಲ್ಲವನ್ನೂ ಕೂಡ ಸರಿಯಾಗಿ ಮಾಡುತ್ತೇವೆ ಎಂದು ಯಾವ ಸರಕಾರವೂ ಕೂಡ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಸಹಸ್ರಾರು ಜನ, ಅನೇಕ ಅಧಿಕಾರಿಗಳು, ಅಧಿಕಾರೇತರರು ಕೆಲಸ ಮಾಡುತ್ತಾ ಇರತಕ್ಕಂಥ ಸಂಘ ಸಂಸ್ಥೆಗಳು ಇವೆ. ಎಲ್ಲಾ ಸಂಘ ಸಂಸ್ಥೆಗಳೂ ಕೂಡ ಒಂದೇ ರೀತಿ ಅಚ್ಚುಕಟ್ಟಾಗಿ ಕೆಲಸ ಮಾಡುವುದು ಕಷ್ಟ. ಪ್ರಾಮಾಣಿಕವಾಗಿ, ನಿಸ್ಪೃಹತೆಯಿಂದ, ದಕ್ಷತೆಯಿಂದ ಕೆಲಸ ಮಾಡುವವರ ಸಂಖ್ಯೆ ದಿನೇ ದಿನೇ ಕಡಿಮೆ ಆಗುತ್ತಾ ಬರುತ್ತಿದೆ; ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸರ್ಕಾರವೂ ಕೂಡ ಯಾವುದೇ ಕ್ರಮವನ್ನೂ ತೆಗೆದುಕೊಳ್ಳುವುದಕ್ಕೆ ಹಿಂದೆ ಬಿದ್ದಿಲ್ಲ. ಯಾವುದೇ ಒಂದು ಇಲಾಖೆಯು ಬಹಳ ದಕ್ಷತೆಯಿಂದ ಕೆಲಸ ಮಾಡಿ ಸಾಮಾನ್ಯ ಜನಗಳ, ಹಳ್ಳಿಗಾಡಿನ ಜನಗಳ ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳನ್ನು ಸುಧಾರಣೆ ಮಾಡಬೇಕೆಂದು ಸರ್ಕಾರ ಕೆಲಸ ಮಾಡುತ್ತಿದೆಯೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರ ಒಂದು ಪ್ರತೀಕವಾಗಿ ಕಳೆದ ಅಧಿವೇಶನದಲ್ಲಿ ನಾವು ಒಂದು ಮಸೂದೆಯನ್ನೂ ಕೂಡ ಪಾಸ್ ಮಾಡಿದ್ದೇವೆ, 2 ಟರ್ಮ್‌ಗಿಂತ ಹೆಚ್ಚು ಕಾಲ ಯಾರೂ ಕೂಡ ಇರಬಾರದು. ಈ ಒಂದು ಸಂಪ್ರದಾಯವನ್ನು ನಾವು ಬೆಳೆಸಬೇಕು, ಪಟ್ಟಭದ್ರ ಹಿತಾಇಕ್ತಿಗಳನ್ನು ತಪ್ಪಿಸಬೇಕು ಎನ್ನುವ ದೃಷ್ಟಿಯಿಂದ ಸರ್ಕಾರ ವಿವೇಚನೆ ಮಾಡಿ ಪ್ರಗತಿದಾಯಕವಾದಂಥ ಒಂದು ಸೂಚನೆಯನ್ನು ತಂದು ಅದನ್ನು ಇಲ್ಲಿ ಪಾಸ್ ಮಾಡಿದ್ದೇವೆ ಇದು ಮೇಲ್ಮನೆಯಲ್ಲೂ ಕೂಡ ಪಾಸ್ ಆಗಿ ತನ್ಮೂಲಕ ಆ ಶಾಸನ ಜಾರಿಗೆ ಬರುತ್ತದೆ. ಈ ಒಂದು ಶಾಸನ ಜಾರಿಗೆ ಬಂದ ನಂತರ ಈಗ ಪಟ್ಟಭದ್ರ ಹಿತಾರಕ್ತಿಗಳು ಏನು ಕೆಲಸ ಮಾಡುತ್ತಿದ್ದಾರೆ ಅದಕ್ಕೆ ನಾವು ವಿರಾಮ ಹಾಕಿದಂತಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಸ್ವಾಮಿ, ನಮ್ಮ ಮಾನ್ಯ ಸ್ನೇಹಿತರಾದಂಥ ಶ್ರೀಮಾನ್ ಮಂಜುನಾಥರವರು ಅನೇಕ ರೀತಿಯ ಆಪಾದನೆಗಳನ್ನು ಮಾಡಿದರು. ಅವರು ನಿರ್ದಿಷ್ಟವಾಗಿ ಯಾವುದನ್ನೂ ಹೇಳಲಿಲ್ಲ.

(Mr. Deputy Speaker in the Chair.)

ಶ್ರೀ ಟಿ. ಎಂ. ಮಂಜುನಾಥ್ :— ನಾನು ನಿರ್ದಿಷ್ಟವಾಗಿ ಹೇಳಿದ್ದೇನೆ.

ಶ್ರೀ ಬಿ ಬೈರಪ್ಪಾಜಿ:— ಮಾನ್ಯ ರಾಮೇಗೌಡರು ಹೇಳಿದಂತೆ ತತ್ವವನ್ನು ವಿರೋಧ ಮಾಡಿಲ್ಲ. ಅವರೂ ಕೂಡ ತತ್ವವನ್ನು ಒಪ್ಪಿಕೊಂಡಿದ್ದಾರೆ. ಕೆಲಸ ಕೂಡ ಆಗುತ್ತಾ ಇದೆ. ಸರ್ಕಾರ ಈ ದಿಸೆಯಲ್ಲಿ ಹಿಂದೆ ಬಿದ್ದಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಪ್ರಾಂತಮಟ್ಟದಲ್ಲಿರತಕ್ಕ ಎಪೆಕ್ಸ್ ಸಂಸ್ಥೆ

ಗಳು ಚೆನ್ನಾಗಿ ಕೆಲಸ ಮಾಡುತ್ತಾ ಇವೆ. ಒಂದಕ್ಕಿಂತ ಒಂದು ಚೆನ್ನಾಗಿ ಕೆಲಸ ಮಾಡುತ್ತಾ ಇವೆ. ಉದಾಹರಣೆಗೆ ಹೇಳುವುದಾದರೆ, ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ 30 ಕಾರ್ಯಕ್ರಮಗಳನ್ನು ಕೈಗೊಂಡು ಹಳ್ಳಿಯ ರೈತನ ಆರ್ಥಿಕ ಸಾಮಾಜಿಕ ಸ್ಥಿತಿಗತಿಗಳನ್ನು ಸುಧಾರಣೆ ಮಾಡುವ ದಿಸೆಯಲ್ಲಿ ಒಂದು ದಿಟ್ಟ ಹೆಜ್ಜೆಯನ್ನು ಇಟ್ಟಿದೆ ಎಂದು ಎಲ್ಲಾ ಕಡೆಯಿಂದಲೂ ಪ್ರಶಂಸೆ ಮಾಡಿದ್ದಾರೆ ಎಂದು ನಾನಾದರೂ ಭಾವಿಸುತ್ತೇನೆ ಇವತ್ತು ವರ್ಲ್ಡ್ ಬ್ಯಾಂಕ್ ವತಿಯಿಂದ ಸುಮಾರು 39600 ನೀರಾವರಿ ಭಾವಿಗಳನ್ನು ತೆಗೆಸಬೇಕು ಎಂದು ಪ್ರಯತ್ನ ಮಾಡಿದ್ದಾರೆ. 19000 ಇರಿಗೇಷನ್ ಪಂಪುಸೆಟ್ಟುಗಳನ್ನು ಒದಗಿಸಬೇಕು ಎಂದು ಹೇಳಿದ್ದಾರೆ. ಅದರ ಬಗ್ಗೆ ಈಗಾಗಲೇ ಸಾಕಷ್ಟು ಕಾರ್ಯಕ್ರಮಗಳನ್ನು ಕೈಗೊಂಡ ಕೆಲಸ ನಡೆದಿದೆ. ಇಂತಹ ಮಹತ್ತರವಾದ ಕಾರ್ಯ ಹಿಂದೆಂದೂ ನಡೆದಿರಲಿಲ್ಲ. ಇವತ್ತು ಅವರ ಅಧಿಕಾರ ವ್ಯಾಪ್ತಿಯಲ್ಲಿರತಕ್ಕ 175-176 ಪ್ರೈಮರಿ ಅಭಿವೃದ್ಧಿ ಬ್ಯಾಂಕುಗಳು ಕೂಡ ಪ್ರಗತಿಯ ದಿಸೆಯಲ್ಲಿ, ವೇಗದಲ್ಲಿ ನಡೆಯುತ್ತಾ ಇವೆ ಎಲ್ಲಾ ಸಹಕಾರ ಸಂಘಗಳೂ ಕೂಡ ಚೆನ್ನಾಗಿ ಕೆಲಸ ಮಾಡುತ್ತಾ ಇವೆ. ಅವುಗಳ ಪ್ರಗತಿ ಚೆನ್ನಾಗಿದೆ ಎಂದು ನಾನಾದರೂ ಹೇಳುವುದಕ್ಕೆ ಇಷ್ಟಪಡುತ್ತೇನೆ ಎಪೆಕ್ಸ್ ಸಂಸ್ಥೆಗಳು ಏನು ಇವೆ, ಕನ್‌ಸ್ಯೂಮರ್ ಕೋ ಆಪರೇಟಿವ್ ಫೆಡರೇಷನ್, ಮಾರ್ಕೆಟಿಂಗ್ ಫೆಡೆರೇಷನ್ ಎಲ್ಲಾ ಚೆನ್ನಾಗಿ ಕೆಲಸ ಮಾಡುತ್ತಾ ಇವೆ. ಮಾನ್ಯ ಮಿತ್ರರು ಹೇಳಿದ ಹಾಗೆ ಅಲ್ಲಿ ಆಡಿಟ್ ವ್ಯವಸ್ಥೆ ಚೆನ್ನಾಗಿ ಇರಲಿ ಎಲ್ಲರ ದೃಷ್ಟಿಯಿಂದ ಕ್ಷೇಮಕರ ಎನ್ನುವ ಮಾತನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಯಾರೇ ಅಧಿಕಾರದಲ್ಲಿರಲಿ, ಆ ಸಂಸ್ಥೆಗಳು ಚೆನ್ನಾಗಿ ಕೆಲಸ ಮಾಡಿಕೊಂಡು ಹೋಗಬೇಕು. ಅಲ್ಲಿ ಸ್ವಚ್ಛವಾದಂಥ ನಡವಳಿಕೆ ಇರಬೇಕು. ಆಡಳಿತ ಇರಬೇಕು ಎನ್ನುವ ದೃಷ್ಟಿಯಿಂದ ಲೆಕ್ಕಪತ್ರಗಳನ್ನು ಚಾಚೂ ತಪ್ಪದೆ ಸರಿಯಾದ ರೀತಿಯಲ್ಲಿ ನಡೆದುಕೊಳ್ಳತಕ್ಕಂಥ ವ್ಯವಸ್ಥೆ ಇರಬೇಕು ಎಂದು ನಾನಾದರೂ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಹಳ್ಳಿಮಟ್ಟದಲ್ಲಿರತಕ್ಕ, ಗ್ರಾಮ ಪಂಚಾಯಿತಿ ಮಟ್ಟದಲ್ಲಿರತಕ್ಕ ಸೇವಾ ಸಹಕಾರ ಸಂಘಗಳ ಸ್ಥಿತಿ ಚಿಂತಾಜನಕವಾಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಲ್ಲಿಯ ಕೆಲಸಕಾರ್ಯಗಳ ಪ್ರಗತಿ ಚೆನ್ನಾಗಿ ನಡೆದಿದೆ. ಆದರೂ ಕೂಡ ಸಾಲದು. ಅದರಲ್ಲಿ ಲೋಪ ಇದೆ ಎಂದು ಚೆನ್ನಾಗಿ ಕಂಡುಬಂದಿದೆ ಸಣ್ಣ ಸಣ್ಣ ಪಂಚಾಯಿತಿಗಳ ಸರಹದ್ದಿನಲ್ಲಿ ಇರತಕ್ಕ ಸೊಸೈಟಿಗಳು ಸರಿಯಾದ ರೀತಿಯಲ್ಲಿ ಕೆಲಸಮಾಡುವುದಕ್ಕೆ ಸಾಧ್ಯವಾಗಿಲ್ಲ ಎಂದು ಹೇಳುತ್ತೇನೆ. ಅದಕ್ಕೆ ಕಾರಣವಾದರೂ ಇಷ್ಟೆ. ಅಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸಮಾಡತಕ್ಕ ವಿದ್ಯಾವಂತರು ಸಾಕಷ್ಟು ಪ್ರಮಾಣದಲ್ಲಿ ಸಿಕ್ಕುವುದಿಲ್ಲ, ನಿಸ್ಪೃಹತೆಯಿಂದ ಕೆಲಸ ಮಾಡತಕ್ಕವರು ಸಿಕ್ಕುವುದಿಲ್ಲ ಜೊತೆಗೆ ನೌಕರರೂ ಸರಿಯಾದ ರೀತಿಯಲ್ಲಿ ಕೆಲಸ ಮಾಡತಕ್ಕವರು ಸಿಕ್ಕುವುದಿಲ್ಲ. ದಕ್ಷತೆಯಿಂದ ಕೆಲಸ ಮಾಡತಕ್ಕವರು ಸಿಕ್ಕುವುದಿಲ್ಲ. ಆದುದರಿಂದ ಇವುಗಳನ್ನು ಒಂದು ತಾಲ್ಲೂಕಿಗೆ ಹೋಬಳಿಗೆ

(ಶ್ರೀ ಬಿ. ಬೈರಾಪ್ಪಾಜಿ)

ಎರಡನ್ನಾದರೂ ಕೂಡ ಮಾಡಿ, ಕೊನೇ ಪಕ್ಷ ಒಂದನ್ನಾದರೂ ಕೂಡ ಮಾಡಿ ಇವುಗಳ ಒಂದು ಕಾರ್ಯಕ್ಷೇತ್ರ ಏನು ಇದೆ ಅವುಗಳನ್ನು ಹೆಚ್ಚು ಮಾಡುವ ಬದಲು, ಸಣ್ಣ ಸಣ್ಣ ಸೊಸೈಟಿಗಳನ್ನು ಮಾಡುವ ಬದಲು ಹೆಚ್ಚು ಹಳ್ಳಿಗಳನ್ನು ಸೇರಿಸಿ ಅವುಗಳು ವ್ಯವಸ್ಥಿತವಾಗಿ ಕೆಲಸ ಮಾಡುವುದಕ್ಕೆ ಒಬ್ಬ ಸರಿಯಾದ ಅಧಿಕಾರಿಯನ್ನು ಹಾಕಿ ಕೆಲಸ ಮಾಡಿಸುವುದಕ್ಕೆ ಪ್ರಯತ್ನ ಮಾಡಿ, ಹಳ್ಳಿಯ ಜನರಿಗೆ ಸೌಲಭ್ಯಗಳನ್ನು ಒದಗಿಸತಕ್ಕ ಒಂದು ವ್ಯವಸ್ಥೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಇವುಗಳ ಏಳಿಗೆಗಾಗಿ ಜಿಲ್ಲಾ ಬ್ಯಾಂಕುಗಳು ಕೆಲಸ ಮಾಡುತ್ತಾ ಇವೆ ಸುಮಾರು 4 ಬ್ಯಾಂಕುಗಳಿಗೆ ಹಣವನ್ನು ಸರ್ಕಾರ ಒದಗಿಸಿದೆ. ಹಳ್ಳಿಮಟ್ಟದಲ್ಲಿರತಕ್ಕ ಸೊಸೈಟಿಗಳು, ತಾಲ್ಲೂಕುಮಟ್ಟದಲ್ಲಿರತಕ್ಕ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳು ಸರಿಯಾಗಿ ಕೆಲಸಮಾಡಿದರೆ ಜಿಲ್ಲಾ ಬ್ಯಾಂಕುಗಳು ಕೂಡ ತಮ್ಮ ಕೆಲಸವನ್ನು ಸಮರ್ಪಕವಾಗಿ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಜನಗಳೂ ಕೂಡ ತಮ್ಮ ಭಾಗದ ಕರ್ತವ್ಯವನ್ನು ಅರಿತು ಕೆಲಸಮಾಡಬೇಕು. ಸರ್ಕಾರ ಕೋಟ್ಯಾಂತರ ರೂಪಾಯಿ ಹಣವನ್ನು ಜನರ ಆರ್ಥಿಕ ಸ್ಥಿತಿಯನ್ನು ಸುಧಾರಿಸಲಿಕ್ಕೆ ಎಂದು ಏನು ಖರ್ಚುಮಾಡುತ್ತಿದೆ. ಆದನ್ನು ಉಪಯೋಗಿಸಿಕೊಂಡು ನಂತರ ಅವರಿಗೆ ಕೊಡತಕ್ಕ ಹಣವನ್ನು ಸಕಾಲದಲ್ಲಿ ಮರುಪಾವತಿ ಮಾಡಬೇಕು, ಮತ್ತು ತಮ್ಮ ಜವಾಬ್ದಾರಿಯನ್ನು ಅರಿತು ಕೆಲಸ ಮಾಡಬೇಕು ಎಂದು ಈ ಮೂಲಕ ಜನತೆಯನ್ನೂ ಕೂಡ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕೇವಲ ಸೊಸೈಟಿಗಳದೇ ಜವಾಬ್ದಾರಿಯಲ್ಲ ಜನಗಳು, ಸಾರ್ವಜನಿಕ ಮುಖಂಡರು ಕೂಡ ತಮ್ಮ ಭಾಗದ ಕರ್ತವ್ಯವನ್ನರಿತು, ಎಲ್ಲರೂ ಅವರವರ ಕರ್ತವ್ಯವನ್ನು ಚಾಚೂ ತಪ್ಪದೆ ನಿರ್ವಹಿಸಿದರೆ ಮಾತ್ರ ಈ ಸೇವಾಸಹಕಾರಸಂಘಗಳು, ಸಹಕಾರ ಜಿಲ್ಲಾ ಬ್ಯಾಂಕುಗಳು ಎಲ್ಲಾ ರೀತಿಯಲ್ಲಿ ಸಮರ್ಪಕವಾಗಿ ಕೆಲಸಮಾಡಿ ಜನಗಳ ದುಡ್ಡನ್ನು ಕಾಪಾಡಿ ತನ್ಮೂಲಕ ಆರ್ಥಿಕವಾಗಿ ಸಾಮಾಜಿಕವಾಗಿ ಹಳ್ಳಿಯ ಜನತೆಗೆ, ರೈತಾಪಿ ಜನರಿಗೆ ಅನುಕೂಲ ಕಲ್ಪಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನೊಂದು ವಿಚಾರ ಏನೆಂದರೆ, ಆರ್ಬಿಟ್ರೇಟರುಗಳನ್ನು ನೇಮಿಸಿದ್ದೀರಿ. ಅವರು ಸಮರ್ಪಕವಾಗಿ ಕೆಲಸಮಾಡುತ್ತಾ ಇಲ್ಲ, ದೋಷ ಇದೆ, ಲೋಪ ಕಂಡು ಬರುತ್ತಾ ಇದೆ. ಈ ಬಗ್ಗೆ ತಾವು ಪುನರ್ವಿಮರ್ಶೆಮಾಡಿ ಖಾಯಂ ಅದಂಥ ಆರ್ಬಿಟ್ರೇಟರುಗಳನ್ನು ನೇಮಿಸುವುದರ ಮೂಲಕ ತೀವ್ರವಾಗಿ ದಾವಾ ದಾಖಲು ಮಾಡಿ ಹಣ ವಸೂಲಾವತಿಯ ಬಗ್ಗೆ ವಿಳಂಬವಾಗುತ್ತಿರುವುದನ್ನು ತಪ್ಪಿಸಬೇಕು ಎಂದು ನಾನು ಒತ್ತಾಯ ಮಾಡುತ್ತಾ ಇದ್ದೇನೆ.

ಇನ್ನು ಷೆಡೂಲ್ಡ್ ಕ್ಯಾಸ್ಟ್ ಷೆಡ್ಯೂಲ್ಡ್ ಟ್ರೈಬ್ಸ್ ಸೊಸೈಟಿಗಳು ಅನೇಕ ಕಡೆ ಚೆನ್ನಾಗಿ ಕೆಲಸ ಮಾಡುತ್ತಿದ್ದವು. ದೇಶದಲ್ಲಿ ಸಾವಿರಾರು ಮನೆಗಳನ್ನು ಕಟ್ಟಿಸಿದೆ. ಆದರೂ ಕೂಡ $3\frac{1}{2}$ ಕೋಟಿ ರೂಪಾಯಿ ಎಲ್. ಐ. ಸಿ. ಯಿಂದ ಕೊಡಿಸಿದ ಹಣ ಖರ್ಚಾದ ನಂತರ ವಾಪಸ್ ಬಂದಿಲ್ಲ. ಆದುದರಿಂದ ಈ ಸ್ಕೀಮನ್ನು ನಿಲ್ಲಿಸತಕ್ಕ ವ್ಯವಸ್ಥೆ ಮಾಡಿದಿರಿ. ಇದು ಸರಿಯಾದುದಲ್ಲ. ಯಾವು ದಾದರೂ ಮೂಲದಿಂದ ಈ ಸೊಸೈಟಿಗಳಿಗೆ ಹಣವನ್ನು ಒದಗಿಸಿ ಮತ್ತೆ ಈ ಸೊಸೈಟಿ ಗಳು ಕೆಲಸಮಾಡುವ ರೀತಿಯಲ್ಲಿ ಏರ್ಪಾಟುಮಾಡಿ, ಹರಿಜನ ಗಿರಿಜನರಿಗೆ ಹೆಚ್ಚಿನ ಸೌಲಭ್ಯವನ್ನು ಒದಗಿಸಿಕೊಡಬೇಕು, ಈ ಸೊಸೈಟಿಗಳು ಅರ್ಧಂಬರ್ಧ ಕೆಲಸಮಾಡಿ ನಿಲ್ಲಿಸುವಂಥ ವ್ಯವಸ್ಥೆ ಮಾಡಬಾರದು ಎಂದು ಸರ್ಕಾರದಲ್ಲಿ ವಿನಂತಿಮಾಡಿಕೊಂಡು ಇಷ್ಟು ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

‡ ಶ್ರೀ ಬಿ. ವಿ. ಕಕ್ಕಿಲ್ಲಾಯ (ಬಂಟ್ವಾಳ್) :— ಸನ್ಮಾನ್ಯ ಅಧ್ಯಕ್ಷರೇ, ಸಹಕಾರ ಸಂಘಗಳ ಬೇಡಿಕೆ ಬಗ್ಗೆ ಈಗಾಗಲೇ ಕಾಗೋಡು ತಿಮ್ಮಪ್ಪನವರು ಮಾತನಾಡಿದರು. ಇದಕ್ಕೆ ನಾನು ಸಂಪೂರ್ಣವಾದ ಬೆಂಬಲವನ್ನು ಕೊಡುತ್ತಾ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಆಡಿಟ್ ಆಗಿ ದುರ್ವ್ಯವಹಾರಗಳು ನಡೆದಿರುವ ಬಗ್ಗೆ ಸಾಕಷ್ಟು ಮಾಹಿತಿ ಸಿಕ್ಕಿದ ಮೇಲೂ ತನಿಖೆ ನಡೆಸಿದಂಥ ಅಧಿಕಾರಿಗಳು, ಸಂಘದ ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಇತರ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ವರದಿ ಮಾಡಿದ ಮೇಲೂ ಕೂಡ ಆ ವರದಿಗಳನ್ನು ಮುಚ್ಚಿಟ್ಟು, ಯಾವ ರೀತಿಯಾದ ಕಾರ್ಯಕ್ರಮವನ್ನೂ ಕೂಡ ತೆಗೆದುಕೊಳ್ಳದೇ ಇರತಕ್ಕ ಸಂದರ್ಭಗಳು ನಮ್ಮ ಗಮನಕ್ಕೆ ಬಂದಿವೆ. ಉದಾಹರಣೆಗೆ ಹೇಳುವುದಾದರೆ, ಮಂಗಳೂರಿನಲ್ಲಿ ಜನತಾ ಬಜಾರು ಇದೆ. ಇದರ ಬಗ್ಗೆ ಎರಡು ವರ್ಷಗಳಿಂದ ಈ ಸದನದಲ್ಲಿ ಇದೇ ಇಲಾಖೆಯ ಬಜೆಟ್ಟಿನ ಬಗ್ಗೆ ಚರ್ಚೆ ಮಾಡುವ ಸಂದರ್ಭದಲ್ಲಿ ನಾನು ಪ್ರಸ್ತಾಪ ಮಾಡಿದ್ದೇನೆ ಇದರ ಬಗ್ಗೆ ತನಿಖೆ ನಡೆಸಿ, ಲಕ್ಷಾಂತರ ರೂಪಾಯಿ ಅವ್ಯವಹಾರ ನಡೆ ದಿರುವ ಬಗ್ಗೆ ಅಧಿಕಾರಿಗಳು ಸರಕಾರಕ್ಕೆ ವರದಿ ಕೊಟ್ಟಿದ್ದರೂ ಕೂಡ ಅದರ ಬಗ್ಗೆ ಇನ್ನೂ ಯಾವುದೇ ರೀತಿಯ ಕ್ರಮವನ್ನೂ ತೆಗೆದುಕೊಂಡಿಲ್ಲ ಇಷ್ಟು ಮಾತ್ರ ವಲ್ಲ, ಒಬ್ಬ ದೊಡ್ಡ ವ್ಯಾಪಾರಸ್ಥರು ಯಾರು ಜನತಾ ಬಜಾರು ವಿರುದ್ಧ ಪೈಪೋಟಿ ನಡೆಸಿದಂತವರು, ಅವರು ಕೈಗೆ ಇವತ್ತಿನ ದಿವಸ ಅಧಿಕಾರ ಕೊಟ್ಟಿದ್ದಾರೆ. ಸಂಘದ ತಾತ್ಕಾಲಿಕ ಅಧ್ಯಕ್ಷರಾಗಿ ಅವರು ಅದನ್ನು ನಡೆಸುತ್ತಿದ್ದಾರೆ ಎಂಬುದನ್ನು ಇವತ್ತಿನ ದಿವಸ ನಾನು ಸರಕಾರದ ಗಮನಕ್ಕೆ ತರಬೇಕಾಗಿದೆ. ಇಂಥವರಿಗೆ ನಿಜವಾಗಿಯೂ ಸಹಕಾರ ಸಂಘಗಳಲ್ಲಿ ಯಾವುದೇ ಸ್ಥಾನ ಕೊಡಬಾರದು. ಆದರೆ, ಇವತ್ತಿನ ದಿವಸ ಅಂಥವರನ್ನು ಅಧ್ಯಕ್ಷರನ್ನಾಗಿ ನೇಮಿಸಿ, ಅವರ ಕೈಯಲ್ಲಿ ಈ ಸಂಘವನ್ನು ನಡೆಸುತ್ತಿದ್ದಾರೆ. ಆದುದರಿಂದ, ಇದರ ಬಗ್ಗೆ ಕೂಡಲೇ ಗಮನ ಹರಿಸಿ ಸರ

(ಶ್ರೀ ಬಿ. ವಿ ಕಕ್ಕಿಲಾಯ)

ಕಾರದವರು ಅವರನ್ನು ತೆಗೆಯಬೇಕು ಎಂದು ಹೇಳುತ್ತೇನೆ. ಹಿಂದೆ, ಸಹಕಾರ ಸಂಘದಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ ಬಂದಿರುವ ವರದಿ ಮೇರೆಗೆ ಸಂಬಂಧ ಪಟ್ಟವರ ಮೇಲೆ ಸರಕಾರದವರು ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ ಇವತ್ತಿನ ದಿವಸ ಈ ಸಹಕಾರ ಸಂಘಗಳ ಕೆಲಸ ಬಹಳಷ್ಟು ವ್ಯಾಪಕವಾಗಿದೆ; ಉತ್ತಮಗೊಂಡಿದೆ ಎಂದು ತಾವು ವರದಿಯಲ್ಲಿ ಹೇಳಿಕೊಂಡಿದ್ದೀರಿ. ಆದರೆ, ತಾವು ಅದೇ ವರದಿಯಲ್ಲಿ ಒಂದು ವಿಚಾರವನ್ನು ಹೇಳಲಿಕ್ಕೆ ಬಿಟ್ಟಿದ್ದೀರಿ ಎಂದು ನನಗೆ ಅನಿಸುತ್ತದೆ. ಇವತ್ತಿನ ದಿವಸ ಸಹಕಾರ ಸಂಘಗಳು ಗ್ರಾಮಾಂತರ ಜನತೆಗೆ ಸಾಲವನ್ನು ಒದಗಿಸುವ ಸಂಸ್ಥೆಗಳಾಗಿವೆ. ಆದರೆ, ಈ ಸಂಸ್ಥೆಗಳು ಯಾವ ಬಡ್ಡಿ ದರದಲ್ಲಿ ಅವರಿಗೆ ಸಾಲಗಳನ್ನು ಒದಗಿಸುತ್ತಿವೆ ಎಂದು ನೋಡುವುದಾದರೆ, ಅದರಿಂದ ರೈತರಿಗೆ ಬಹಳ ತೊಂದರೆಯಾಗುತ್ತಾ ಇದೆಯೇ ಹೊರತು ಅದರಿಂದ ಸಹಾಯವಾಗುತ್ತಾ ಇಲ್ಲ. ಸಾಮಾನ್ಯವಾಗಿ ಹಿಂದಿನ ಕಾಲದಲ್ಲಿ ಸಾಧಾರಣ ಭೂಮಾಲೀಕರು ಅಥವಾ ಖಾಸಗೀ ಜನರು ಸಾಲ ಕೊಡುತ್ತಾ ರೈತರಿಂದ ಹೆಚ್ಚು ಬಡ್ಡಿ ವಸೂಲು ಮಾಡುತ್ತಿದ್ದುದನ್ನು ತಡೆಗಟ್ಟುವ ಉದ್ದೇಶದಿಂದ ಈ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಿದರು. ಆದರೆ, ಈ ಸಹಕಾರ ಸಂಘಗಳೂ ಕೂಡ ಸುಮಾರು 11-12 ಪರ್ಸೆಂಟ್, ಕೆಲವು ಸಂದರ್ಭಗಳಲ್ಲಿ 13 ಪರ್ಸೆಂಟ್ ಬಡ್ಡಿಯನ್ನು ರೈತರಿಂದ ವಸೂಲು ಮಾಡುತ್ತಿವೆ. ನಿಜವಾಗಿಯೂ ಈ ಸಂಸ್ಥೆಗಳು ತಮ್ಮ ಉದ್ದೇಶಗಳನ್ನು ಮರೆತು ಕೆಲಸ ಮಾಡುತ್ತಿವೆ ಎಂದು ಈ ಸಂದರ್ಭದಲ್ಲಿ ನಾನು ವಿಷಾದದಿಂದ ಹೇಳಬೇಕಾಗಿದೆ. ಆದುದರಿಂದ, ಸರಕಾರದವರು ಇವುಗಳ ಮಧ್ಯೆ ಪ್ರವೇಶ ಮಾಡಿ, ಈ ಬಡ್ಡಿ ದರವನ್ನು ಕಡಿಮೆ ಮಾಡಿ, ಕಡಿಮೆ ಬಡ್ಡಿ ದರದಲ್ಲಿ ರೈತರಿಗೆ ಸಾಲ ಒದಗಿಸುವ ಹಾಗೆ ಸಹಕಾರ ಸಂಘಗಳ ವ್ಯವಹಾರಗಳನ್ನು ಪುನರ್‌ವಿಮರ್ಶೆ ಮಾಡಬೇಕು ಮತ್ತು ಇವುಗಳ ಬಗ್ಗೆ ಕ್ರಮ ವಹಿಸಬೇಕೆಂದು ಸಲಹೆಯನ್ನು ಕೊಡಲಿಚ್ಛಿಸುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಫ್. ಎಫ್. ಡಿ ಎ. ಮತ್ತು ಎಂ. ಎಂ. ಡಿ. ಎ. ಈ ಎರಡು ಸ್ಕೀಮ್‌ಗಳು ಎರಡು ತಾಲೂಕುಗಳಲ್ಲಿ ಮಾತ್ರ ಇವೆ. ಇವುಗಳನ್ನು ಇಡೀ ಜಿಲ್ಲಾ ಮಳೆ ವ್ಯಾಪಿಸಬೇಕೆಂದು ನಮ್ಮ ಜಿಲ್ಲಾ ಅಭಿವೃದ್ಧಿ ಕೌನ್ಸಿಲ್‌ನವರು ಸರ್ವಾನುಮತದಿಂದ ಶಿಫಾರಸು ಮಾಡಿ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ರಾಜ್ಯದಲ್ಲಿ ಭೂಸುಧಾರಣಾ ಕಾನೂನು ಜಾರಿಗೆ ಬಂದಿರುವ ಈ ಸಂದರ್ಭದಲ್ಲಿ ಸಣ್ಣ ಹಿಡುವಳಿದಾರರಿಗೆ ಮತ್ತು ಮಧ್ಯಮ ಹಿಡುವಳಿದಾರರಿಗೆ ಹಲವಾರು ರೀತಿಯ ಸಾಲಗಳನ್ನು ಈ ಎಫ್. ಎಫ್. ಡಿ. ಎ. ಮತ್ತು ಎಂ. ಎಂ. ಡಿ. ಎ. ಮೂಲಕ ಕೊಡುವುದು ಅವಶ್ಯಕವಿದೆ. ಆದುದರಿಂದ ಈ ಎರಡು ಯೋಜನೆಗಳನ್ನು ಜಿಲ್ಲೆಯ ಎಲ್ಲಾ ತಾಲೂಕುಗಳಿಗೂ ವ್ಯಾಪಿಸ

ಬೇಕೆಂದು ಈ ಸಂದರ್ಭದಲ್ಲಿ ಸರಕಾರಕ್ಕೆ ಸೂಚನೆ ಕೊಡಲು ನಾನು ಇಚ್ಛೆ ಪಡುತ್ತೇನೆ. ಇವತ್ತಿನ ದಿವಸ ನಮ್ಮ ಮುಂದೆ ಸಹಕಾರ ಸಂಘಗಳ ಒಂದು ಮಸೂದೆ ಬಂದಿದೆ. ಅದು ಈಗ ಪರಿಷತ್ತಿನಲ್ಲಿ ಇದೆ. ಅದರ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ಕಾಗೋಡು ತಿಮ್ಮಪ್ಪನವರು ಪ್ರಸ್ತಾಪ ಮಾಡಿದ್ದಾರೆ. ಈ ಮಸೂದೆಯನ್ನು ತರುವುದು ಅವಶ್ಯವಿದೆ ಎಂದು ನಾನು ಹೇಳುತ್ತೇನೆ. ಏಕೆಂದರೆ, 3—6—12 ವರ್ಷಗಳಿಂದ ಒಂದೊಂದು ಸಂಘದಲ್ಲಿ ಒಬ್ಬೊಬ್ಬರು ಅಧಿಕಾರ ಸ್ಥಾನದಲ್ಲಿ ಕುಳಿತುಕೊಂಡು, ಸಹಕಾರ ಇಲಾಖೆಯನ್ನು ಭ್ರಷ್ಟಾಚಾರದ ತವರು ಮನೆ ಮತ್ತು ರಾಜಕಾರಣದ ಒಂದು ಕ್ಷೇತ್ರವನ್ನಾಗಿ ಪರಿವರ್ತನೆ ಮಾಡಿದ್ದಾರೆ. ಆದುದರಿಂದ ಇದನ್ನು ಶುದ್ಧೀಕರಿಸುವ ಇಚ್ಛೆ ಸರಕಾರಕ್ಕೆ ಇದ್ದರೆ, ಈ ಒಂದು ಮಸೂದೆಯನ್ನು ಶೀಘ್ರವೇ ಜಾರಿಗೆ ತರಬೇಕೆಂದು ಈ ಸಂದರ್ಭದಲ್ಲಿ ಸರಕಾರವನ್ನು ಒತ್ತಾಯ ಮಾಡುತ್ತೇನೆ. ಈ ಮಸೂದೆ ಬಗ್ಗೆ ಇನ್ನೂ ಚರ್ಚೆ ನಡೆಯುತ್ತಾ ಇರುವಾಗಲೇ ಈ ಸದನದಲ್ಲಿ ಇನ್ನೊಂದು ಸೂಚನೆ ಒಂದಿತು. ಅದೇನೆಂದರೆ ಸಹಕಾರ ಸಂಘಗಳಲ್ಲಿ ಕೆಲಸ ಮಾಡುವಂಥ ನೌಕರರುಗಳಿಗೆ ಹಿತ ರಕ್ಷಣೆ ಮಾಡುವಂಥ ಯಾವುದೇ ಒಂದಂಶ ಈ ಮಸೂದೆಯಲ್ಲಿ ಸೇರಿಸಿಲ್ಲ ಎಂಬುದು. ಹಿಂದೆ ಮಾನ್ಯ ಸದಸ್ಯರಾದ ಎಂ. ಎಸ್. ಕೃಷ್ಣನ್ ಅವರು ಒಂದು ಖಾಸಗೀ ಮಸೂದೆಯನ್ನು ಇದರ ಬಗ್ಗೆ ತಂದಿದ್ದರು. ಹಿಂದಿನ ಸಚಿವರು ಅದರ ಬಗ್ಗೆ ವಿರೋಧ ಕೂಡ ಮಾಡಿದ್ದರು. ಸಹಕಾರ ಸಂಘಗಳ ನೌಕರರನ್ನು ಕೆಲಸದಿಂದ ತೆಗೆದು ಅವಮಾನತ್ತು ಮಾಡಿದ್ದರೆ, ಸಬ್‌ಸ್ಟಾನ್ಶಿಯೇಟ್ ಅಲೋಯನ್ಸ್ ಕೊಡುವುದು ಮತ್ತು ನ್ಯಾಯ ದೊರಕಿಸಿಕೊಳ್ಳುವುದಕ್ಕೆ ನ್ಯಾಯಾಲಯದಲ್ಲಿ ಇಂಡಸ್ಟ್ರೀಸ್ ಡಿಸ್ಪ್ಯೂಟ್ ಆ್ಯಕ್ಟ್ ಪ್ರಕಾರ, ಮತ್ತು ಇತರ ಕಾನೂನುಗಳ ಪ್ರಕಾರ ತಮ್ಮ ನ್ಯಾಯವನ್ನು ಪ್ರತಿಪಾದಿಸುವುದಕ್ಕೆ ಅವಕಾಶ ಕಲ್ಪಿಸಿಕೊಡುವ ಬಗ್ಗೆ ಒಂದು ಖಾಸಗೀ ಮಸೂದಾ ಕಾನೂನನ್ನು ಮಾನ್ಯ ಸದಸ್ಯರು ತಂದಿದ್ದರು. ಆದರೆ, ಅದು ಅಂದು ಬಿದ್ದು ಹೋಯಿತು. ಆದುದರಿಂದ, ಇವತ್ತಿನ ದಿವಸ ಪರಿಷತ್ತಿನಲ್ಲಿರುವ ಮಸೂದೆಗೆ ಈ ಅಂಶಗಳನ್ನು ಸೇರಿಸಿ, ಸಹಕಾರ ಸಂಘಗಳಲ್ಲಿ ಕೆಲಸ ಮಾಡುವಂಥ ನೌಕರರ ಹಿತರಕ್ಷಣೆ ಮಾಡುವಂಥ ಒಂದು ಕ್ಲಾಸನ್ನು ಅದರಲ್ಲಿ ಸೇರಿಸಬೇಕೆಂದು ಈ ಸಂದರ್ಭದಲ್ಲಿ ಸರಕಾರಕ್ಕೆ ಸೂಚನೆ ಕೊಡಬಯಸುತ್ತೇನೆ.

ಇನ್ನು, ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜಾತಿಯ ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿಗಳು ರಾಜ್ಯದ ಎಲ್ಲಾ ಕಡೆಗಳಲ್ಲೂ ಕೂಡ ನಿಷ್ಕ್ರಿಯವಾಗಿವೆ. ತಾವು ವರದಿಯಲ್ಲಿ ಹೇಳಿದ ಹಾಗೆ, ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕುಗಳಲ್ಲಿನ ಓವರ್‌ಡ್ಯೂ ಸಾಲಗಳನ್ನು ರೈಟ್‌ಆಫ್ ಮಾಡುವುದಕ್ಕೆ ಕೆಲವು ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೀರಿ. ಹಾಗೆ ಮಾಡುವುದು ಇದ್ದರೆ, ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕುಗಳಲ್ಲಿ ಪರಿಶಿಷ್ಟ ವರ್ಗ ಮತ್ತು

(ಶ್ರೀ ಬಿ. ವಿ. ಕಕ್ಕಿಲಾಯ)

ಪರಿಶಿಷ್ಟ ಜಾತಿ ಜನರಿಗೆ ಏನು ಸಾಲ ಕೊಟ್ಟಿದ್ದೀರಿ ಆ ಸಾಲವನ್ನು ವಸೂಲು ಮಾಡುವುದು ಬಹಳ ಕಷ್ಟ ಇದೆ. ತೀರಾ ಬಡ ಜನರು ಯಾರಿಂದ ವಸೂಲು ಮಾಡುವುದಕ್ಕೆ ಸಾಧ್ಯವಿಲ್ಲ, ಅಂಥವರನ್ನು ರೈಟ್ ಆಫ್ ಮಾಡಿಯಾದರೂ ಈ ಸಂಘಗಳಿಗೆ ಜೀವದಾನ ಕೊಟ್ಟು ಅವುಗಳ ಮೂಲಕ ಮನೆಗಳನ್ನು ಕಟ್ಟಿಸಿ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ ಭೂಸುಧಾರಣಾ ಕಾಯಿದೆ ನಮ್ಮ ರಾಜ್ಯದಲ್ಲಿ ಪೂರ್ಣವಾಗಿ ಜಾರಿಗೆ ಬರುವವರೆಗೂ, ಚಾಲ್ತೇಣಿ ರೈತರಿಗೆ ಸಹಕಾರ ಸಂಘಗಳಿಂದ ಮಧ್ಯಮಾವಧಿ ಸಾಲ ಮತ್ತು ಅಲ್ಪಾವಧಿ ಸಾಲಗಳು ದೊರೆಯುವುದಕ್ಕೆ ಅಡಚಣೆ ಇದೆ. ಕೋ-ಅಪರೇಟಿವ್ ಆ್ಯಕ್ಟ್ ಮತ್ತು ರೂಲ್ಸ್ ಪ್ರಕಾರ ಅವರಿಗೆ ಸಾಲಗಳನ್ನು ಇವತ್ತಿನ ದಿವಸ ಅವರು ಸಾಲಗಳನ್ನು ಪಡೆಯಲಿಕ್ಕೆ ಸಾಧ್ಯವಿಲ್ಲ ಭೂ ಅಭಿವೃದ್ಧಿ ಬ್ಯಾಂಕಿನವರಿಂದ ಪಡೆಯುವಂಥ ಸಾಲ ಲಾಂಗ್‌ಟರ್ಮ್ ಸಾಲಗಳು ಮಾತ್ರ. ಈ ಸಾಲಗಳು ಕೂಡ ಆ ರೈತರಿಗೆ ಸಿಕ್ಕುವ ರೀತಿ ಕಾನೂನಿನಲ್ಲಿ ಅವಶ್ಯ ತಿದ್ದುಪಡಿ ಮಾಡಿ ಈ ಸಣ್ಣ ಹಿಡುವಳಿದಾರರಿಗೆ ಸಾಲ ಸಿಕ್ಕುವ ವ್ಯವಸ್ಥೆ ಮಾಡಬೇಕೆಂದು ಸರಕಾರಕ್ಕೆ ಸೂಚನೆ ಕೊಡಬಯಸುತ್ತೇನೆ.

ಇವತ್ತಿನ ದಿವಸ ಬಂದರಿನ ಸಮೀಪದಲ್ಲಿ ಒಂದು ಮಾರ್ಕೆಟ್ ಯಾರ್ಡ್‌ನ್ನು ಕಟ್ಟುವುದಕ್ಕೆ ಅಲ್ಲಿರತಕ್ಕ ಜಮೀನನ್ನು ಮಾರ್ಕೆಟಿಂಗ್ ಕಮಿಟಿಯವರು ಅಕ್ವೈರ್ ಮಾಡಿಕೊಳ್ಳುತ್ತಾ ಇದ್ದಾರೆ. ಇದನ್ನು ಮಾಡುವುದರ ಪರಿಣಾಮವಾಗಿ, ಅಲ್ಲಿರತಕ್ಕ ನೂರಾರು ಜನ ರೈತರು ಆ ಸ್ಥಳವನ್ನು ಬಿಟ್ಟು ಹೋಗುವ ಪರಿಸ್ಥಿತಿ ಬಂದಿದೆ. ಆದರೆ, ಅವರ ಜಮೀನಿಗೆ ಸಲ್ಲುವ ಪರಿಹಾರ ಅವರಿಗೆ ಸಿಕ್ಕುತ್ತಾ ಇಲ್ಲ, ಪರಿಹಾರದ ಹಣವೆಲ್ಲಾ ಜಮೀನುದಾರರಿಗೆ ಹೋಗುತ್ತಿದೆ. ಬಂದರಿಗಾಗಿ ಜಮೀನು ವಶಪಡಿಸಿಕೊಂಡಾಗ, ಆ ಜಮೀನಿನ ಜನರಿಗೆ ಅಲ್ಲಿ ಮನೆಯನ್ನು ಕಟ್ಟಿಕೊಳ್ಳುವುದಕ್ಕೆ ಜಾಗ ಕೊಟ್ಟು ಸಹಾಯ ಮಾಡಿದ್ದಾರೆ. ಅದೇ ರೀತಿ ಇವರಿಗೂ ವ್ಯವಸ್ಥೆಯನ್ನು ಮಾಡಬೇಕೆಂದು ಸರಕಾರವನ್ನು ಕೇಳಿಕೊಂಡು, ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಅನಿವಾಳ ನಂಜಪ್ಪ (ಅರಸೀಕೆರೆ) :— ಮಾನ್ಯ ಅಧ್ಯಕ್ಷರೇ, ಈ ಮಾನ್ಯ ಸಭೆಯು ಅನುಮತಿಗಾಗಿ ಮಂಡಿಸಿರತಕ್ಕ ಹದಿನೇಳುಕಾಲು ಕೋಟಿ ರೂಪಾಯಿಗಳ ಈ ಮೂರು ಡಿಮ್ಯಾಂಡ್‌ಗಳನ್ನೂ ನಾನು ವಿರೋಧಿಸುತ್ತೇನೆ. ಕಾರಣವೇನೆಂದರೆ, ಈ ಮೂರು ಡಿಮ್ಯಾಂಡ್‌ಗಳ ಬಗ್ಗೆ ಖರ್ಚು ಮಾಡತಕ್ಕ

ಹದಿನೇಳುಕಾಲು ಕೋಟಿ ರೂಪಾಯಿ ಏನು ಇದೆ, ಅದನ್ನು ದಕ್ಷತೆಯಿಂದ, ಪ್ರಾಮಾಣಿಕವಾಗಿ ಖರ್ಚು ಮಾಡತಕ್ಕ ಶಕ್ತಿ ಈ ಸರಕಾರಕ್ಕೆ ಇಲ್ಲ ಎನ್ನತಕ್ಕ ಒಂದು ದೃಷ್ಟಿಯಿಂದ ಮಾತ್ರ ಇದನ್ನು ನಾನು ವಿರೋಧಿಸುತ್ತೇನೆ. ಆದರೆ, ಯಾವ ಒಂದು ತತ್ವದ ಉದ್ದೇಶಕ್ಕಾಗಿ ನಾವು ಈ ಹಣವನ್ನು ಖರ್ಚು ಮಾಡುತ್ತಿದ್ದೇವೆ. ಆ ಒಂದು ತತ್ವವನ್ನು ನಾನು ಸ್ವಾಗತಿಸುತ್ತೇನೆ; ಇದನ್ನು ವಿರೋಧಿಸುವುದಿಲ್ಲ. ಖರ್ಚು ಮಾಡತಕ್ಕ ಹಣ ಸರಿಯಾದ ರೀತಿಯಲ್ಲಿ, ವ್ಯವಸ್ಥಿತವಾಗಿ ಖರ್ಚಾಗುತ್ತಾ ಇಲ್ಲ; ಸಾರ್ವಜನಿಕರಿಗೆ ಪ್ರಯೋಜನ ಇದರಿಂದ ಲಭ್ಯವಾಗುತ್ತಾ ಇಲ್ಲ ಎನ್ನುವ ದೃಷ್ಟಿಯಿಂದ ಮಾತ್ರ ಇದನ್ನು ನಾನು ವಿರೋಧಿಸುತ್ತೇನೆ. ಈ ಒಂದು ಸಹಕಾರ ಕ್ಷೇತ್ರ ನಮ್ಮ ದೇಶದಲ್ಲಿ ಕಳೆದ ಒಂದು ದಶಕದಲ್ಲಿ ಬಹಳ ಮಟ್ಟಿಗೆ ಅಭಿವೃದ್ಧಿಯಾಗಿದೆ; ವ್ಯಾಪಕವಾಗಿ ಬೆಳೆದಿದೆ. ಎಲ್ಲಾ ಕ್ಷೇತ್ರಗಳಲ್ಲೂ ಕೂಡ ಸಹಾಯ ಮಾಡತಕ್ಕ ಒಂದು ಧೋರಣೆಯನ್ನು ಇಟ್ಟು ಕೊಂಡು ಕೆಲಸ ಮಾಡಿಕೊಂಡು ಬಂದಿದೆ. ಇಡೀ ನಮ್ಮ ರಾಷ್ಟ್ರದಲ್ಲೇ ನಾಲ್ಕನೇ ಸ್ಥಾನವನ್ನು ಪಡೆದುಕೊಂಡಿರತಕ್ಕದ್ದು ಈ ಸಹಕಾರ ಕ್ಷೇತ್ರ. ಈ ಕ್ಷೇತ್ರದಲ್ಲಿ ಮಾಡಬೇಕಾದ ಕೆಲಸಗಳು ಬಹಳ ಇವೆ, ಆದರೆ, ಇದರಲ್ಲಿ ಲೋಪದೋಷಗಳೂ ಇವೆ. ಆದರೂ ಕೂಡ ಕಳೆದ ಒಂದು ದಶಕದಲ್ಲಿ ನಮ್ಮ ಕರ್ನಾಟಕ ದೇಶದಲ್ಲಿ ಈ ಸಹಕಾರೀ ಕ್ಷೇತ್ರ ಅಭಿವೃದ್ಧಿಯಾಗಿದೆ. ದೇಶ ಮಟ್ಟದಲ್ಲಿರತಕ್ಕ ಸಂಸ್ಥೆಗಳಾದ ಅಪೆಕ್ಸ್ ಬ್ಯಾಂಕ್, ಮಾರ್ಕೆಟಿಂಗ್ ಫೆಡರೇಷನ್ ಮುಂತಾದ ಸಂಸ್ಥೆಗಳು ಬಹಳ ಚೆನ್ನಾಗಿ ಕೆಲಸ ಮಾಡಿಕೊಂಡು ಬಂದಿದೆ. ಕಳೆದ ಹತ್ತು ವರ್ಷಗಳಿಂದ ನಾನು ಈ ಎಲ್ಲಾ ಸಂಸ್ಥೆಗಳಲ್ಲೂ ಕೂಡ ಸದಸ್ಯನಾಗಿದ್ದೆ. ಆಗ ನಡೆಯುತ್ತಿದ್ದಂಥ ಕಾರ್ಯಭಾರಗಳಿಗೂ ಈಗ ನಡೆಯುತ್ತಾ ಇರುವ ಕೆಲಸಕಾರ್ಯಗಳಿಗೂ ಹೋಲಿಸಿ ನೋಡಿದರೆ, ಈ ಸಂಸ್ಥೆಗಳು ಬಹಳ ಮಟ್ಟಿಗೆ ಉತ್ತಮವಾದ ಕೆಲಸವನ್ನು ನಮ್ಮ ದೇಶದಲ್ಲಿ ಸಾಧಿಸಿವೆ ಎಂದರೆ ಅದು ತಪ್ಪಾಗುವುದಿಲ್ಲ ಸಾಧಿಸಿದಂಥ ಕೆಲಸವನ್ನು ನಾವು ಹೇಳಲೇಬೇಕಾಗಿದೆ. ಈ ಸಹಕಾರೀ ಕ್ಷೇತ್ರದಲ್ಲಿ ಲೋಪದೋಷಗಳು ಇಲ್ಲವೆಂದಲ್ಲ; ಇಲ್ಲೂ ಲೋಪದೋಷಗಳು ಇವೆ. ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ಗಾದೆಯನ್ನು ಹೇಳುತ್ತಾರೆ. ಅದೇನೆಂದರೆ, ದನಗಳನ್ನು ಕಾಯುವ ಕೂಲಿ ಕೇಳಬೇಡ; ತಪ್ಪಿಸಿಕೊಂಡು ಹೋದ ದನಗಳನ್ನು ಹುಡುಕಬೇಡ ಎಂಬ ಗಾದೆ ತತ್ವದಂತೆ, ಸಹಕಾರ ಸಂಘಗಳ ಮೇಲ್ವಿಚಾರಣೆಯ ಪದ್ಧತಿ ಇರುತ್ತೆ. ಇದೇ ರೀತಿ ಸಹಕಾರಿ ಕ್ಷೇತ್ರ ಖಾಸಗಿ ಜನರ ಆಡಳಿತದಲ್ಲಿ ನಡೆಯುತ್ತಾ ಇವೆ.

6-30 P. M.

ಈಗ ಅಲ್ಲಿ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಗೌರವಧನ ಸಂಭಾವನೆ ಪಡೆಯುತ್ತಾ ಇರುವುದರಿಂದ ಅವರು ಸಂಬಳವನ್ನು ಕೇಳುವುದಿಲ್ಲ, ಆ ಸಂಸ್ಥೆಗಳಲ್ಲಿ ಆಗುವ ಲೋಪದೋಷಗಳನ್ನು ಕೂಡ ಯೋಚನೆ ಮಾಡುವುದಿಲ್ಲ, ಈ

(ಶ್ರೀ ಅನಿಮುಳದ ನಂಜಪ್ಪ)

ಒಂದು ದೃಷ್ಟಿಯಿಂದ ಆ ಗಾದೆ ಏನು ಇದೆ ಅದು ಸತ್ಯವಾಗಿದೆ. ಅದನ್ನು ಹೀಗೆ ಬಿಟ್ಟರೆ ಸಹಕಾರ ಕ್ಷೇತ್ರ ನಾಶವಾಗುತ್ತದೆ. ಈ ಸಹಕಾರ ತತ್ವದಲ್ಲಿ ನಂಬಿಕೆ ಜನಗಳಲ್ಲಿ ಹೋಗುತ್ತದೆ, ಈ ಒಂದು ದೃಷ್ಟಿಯಿಂದ ಸಹಕಾರ ಕ್ಷೇತ್ರ ಬಹಳ ಉತ್ತಮವಾಗಿ, ದಕ್ಷತೆಯಿಂದ ಆಡಳಿತ ಮಾಡಬೇಕಾದ್ದು ಬಹಳ ಮುಖ್ಯ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಂತರ ಈ ವ್ಯವಸ್ಥಿತ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕ ಅಪೆಕ್ಸ್ ಬ್ಯಾಂಕ್, ಹಾಗೂ ಜಿಲ್ಲಾ ಬ್ಯಾಂಕ್ ಮತ್ತು ಸೇವಾ ಸಹಕಾರ ಬ್ಯಾಂಕುಗಳವರು ಏನು ತಿಳಿದುಕೊಂಡಿದ್ದಾರೆ ಎಂದರೆ ನಮ್ಮ ಒಂದು ಶಕ್ತಿಯಿಂದ, ನಮ್ಮ ಒಂದು ಕಷ್ಟದಿಂದ ನಾವು ಲಾಭ ಮಾಡುತ್ತಿದ್ದೇವೆ ಅದರಿಂದ ಇದು ನಡೆಯುತ್ತಿದೆ ಎಂದು ಹೇಳುತ್ತಿದ್ದಾರೆ. ಅಂತಹ ಭಾವನೆಗಳು ನಿಜವಾಗಿಯೂ ಕೂಡ ಈ ಅಪೆಕ್ಸ್ ಬ್ಯಾಂಕ್ ಮತ್ತು ಇತರ ಬ್ಯಾಂಕುಗಳವರ ಆಡಳಿತ ಮಂಡಳಿಗಳಲ್ಲಿ ಇರಬಾರದು. ದೇಶದಲ್ಲಿರತಕ್ಕ ಸಾವಿರಾರು ಸೇವಾ ಸಹಕಾರ ಸಂಘಗಳು ಉತ್ತಮವಾಗಿ ಕೆಲಸ ಮಾಡಿದರೆ ಲಾಭ ಬರುತ್ತದೆ, ತನ್ಮೂಲಕ ಅಪೆಕ್ಸ್ ಬ್ಯಾಂಕಿನಿಂದ ಕೆಲಸ ನಡೆಯುತ್ತಿದೆ ಎಂದು. ಹೀಗಿದ್ದೂ ಕೂಡ ರಾಷ್ಟ್ರಮಟ್ಟದಲ್ಲಿರತಕ್ಕ ಅಪೆಕ್ಸ್ ಇನ್‌ಸ್ಟಿಟ್ಯೂಷನ್‌ಗಳು ತಮ್ಮದೇ ಅದಂಥ ಭೋಗಣೆಯಿಂದ ಹೆಚ್ಚು ಖರ್ಚುಮಾಡುತ್ತಿದ್ದಾರೆ, ಬಹಳ ದುಂದು ವೆಚ್ಚ ಮಾಡುತ್ತಿದ್ದಾರೆ. ಸಾಮಾನ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಸೇವಾ ಸಹಕಾರ ಸಂಘದಿಂದ ಬಂದಿರತಕ್ಕ ಹಣವನ್ನು ವಿವೇಚನೆ ಇಲ್ಲದೇ ತಮ್ಮದೇ ಆದ ದೃಷ್ಟಿಯಿಂದ ಆಡಂಬರದ ಆಡಳಿತ ನಡೆಸಿಕೊಂಡು ಬರುತ್ತಿದ್ದಾರೆ, ಇದು ತಪ್ಪಬೇಕು ಎಂದು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಇನ್ನು ಮಾರ್ಕೆಟಿಂಗ್ ಸೊಸೈಟಿಗಳ ವಿಚಾರ ತೆಗೆದುಕೊಂಡರೆ, ಈಗ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿ ಏನು ಇದು ಅದು ನಿಜವಾಗಿಯೂ ಕೂಡ ಒಂದು ತತ್ವದ ಪ್ರಕಾರ ಕೆಲಸ ಮಾಡತ್ತಾ ಇಲ್ಲ ಎಂದು ಹೇಳಬೇಕಾಗಿದೆ. ವ್ಯವಸಾಯದ ಉತ್ಪನ್ನಗಳನ್ನು ಮಾರಾಟ ಮಾಡುವುದಕ್ಕೆ ಸರಿಯಾದ ವ್ಯವಸ್ಥೆ ಇಲ್ಲ, ಬರೀ ಸಿಮೆಂಟ್, ಗೊಬ್ಬರ, ಸಕ್ಕರೆ ಹಂಚುವುದರಲ್ಲಿಯೇ ತಲ್ಲೀನರಾಗಿದ್ದಾರೆಯೇ ಹೊರತು, ವ್ಯವಸಾಯೋತ್ಪನ್ನ ಪದಾರ್ಥಗಳನ್ನು ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳಲ್ಲಿ ಮಾರಾಟ ಮಾಡುವುದಕ್ಕೆ ಗಮನ ಕೊಟ್ಟಿಲ್ಲ, ಅದರ ಬಗ್ಗೆ ಯೋಚನೆ ಮಾಡಿಲ್ಲ, ಅದು ಆ ರೀತಿ ಆಗಬಾರದು, ಸರಿಯಾದ ಒಂದು ವ್ಯವಸ್ಥಿತ ರೀತಿಯಲ್ಲಿ ಕೆಲಸ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಬಳಕೆದಾರರ ಚಳುವಳಿ ತೆಗೆದುಕೊಂಡರೆ ನಮ್ಮ ದೇಶದಲ್ಲಿರತಕ್ಕ ಕನ್‌ಸ್ಯೂಮರ್ ಕೋಆಪರೇಟಿವ್ ಸೊಸೈಟಿಗಳು, ಗ್ರಾಮಾಂತರ ಪ್ರದೇಶಗಳಲ್ಲಿ ಜನತಾ ಬಜಾರ್‌ಗಳಿಗಾಗಿ ಸ್ಥಾಪನೆಯಾಗಿವೆ, ಈಗ ನಮ್ಮ ದೇಶದಲ್ಲಿ 20 ಜನತಾ ಬಜಾರ್‌ಗಳು ಕೆಲಸ ಮಾಡುತ್ತಿವೆ, ಈಗ ನನಗೆ

ತಿಳಿದಮಟ್ಟಿಗೆ ಈ ಜನತಾ ಬಜಾರ್‌ಗಳು ಮಾಯಾಬಜಾರ್‌ಗಳಾಗಿವೆ ಎಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ಈಗ ಬೆಂಗಳೂರು ನಗರದಲ್ಲಿ ಇರತಕ್ಕ ಜನತಾ ಬಜಾರ್ ಒಂದು ಬಿಟ್ಟರೆ ಇನ್ನು ಮಿಕ್ಕ ಎಲ್ಲಾ ಜನತಾ ಬಜಾರ್‌ಗಳು ಎಲ್ಲಾ ನಷ್ಟದಲ್ಲಿ ಇವೆ ಎಂದು ಹೇಳಬೇಕಾಗಿದೆ. ಈಗ ಪ್ರತಿಯೊಂದು ಜನತಾ ಬಜಾರ್‌ಗಳಲ್ಲಿ ಸ್ಟಾಕ್ ಕ್ಲಿಯರೆನ್ಸ್ ಮಾಡುವುದಕ್ಕೆ ಪ್ರಯತ್ನ ಮಾಡಿದರೆ ನೂರಕ್ಕೆ ಐವತ್ತರಷ್ಟು ನಷ್ಟವಾಗಿರುವುದು ಕಂಡುಬರುತ್ತದೆ, ಈಗ ಇರತಕ್ಕ ಕ್ಲೋಸಿಂಗ್ ಸ್ಟಾಕ್‌ಗೆ ಹೆಚ್ಚಿನ ಧಾರಣೆಯನ್ನು ಇಟ್ಟುಕೊಂಡು ಹೆಚ್ಚು ಲಾಭ ದೊರಕಿಸಿಕೊಂಡಿರಬಹುದು. ಆದರೆ ಲಾಭ ಇಲ್ಲದೇ ಇರತಕ್ಕ ಜನತಾ ಬಜಾರ್‌ಗಳು ಎಂಟು–ಹತ್ತು ಇವೆ. ಈಗ ಉದಾಹರಣೆಗೆ ಹೇಳುವುದಾದರೆ ಶಿವಮೊಗ್ಗ ಜನತಾ ಬಜಾರ್‌ನಲ್ಲಿ ಲೆಕ್ಕ ಸಿಕ್ಕಿಲ್ಲ. ಅಲ್ಲಿ ಆಡಿಟ್ ಆಗಿಲ್ಲ. ಸರಿಯಾದ ಲೆಕ್ಕ ಸಿಕ್ಕದೆ ಕ್ಲೋಸಿಂಗ್ ಸ್ಟಾಕ್ ಎಷ್ಟು ಇದೆ ಎಂದು ಗೊತ್ತಾಗಿಲ್ಲ, ಕಾರಣ ಏನು ಎಂದರೆ ಎಲ್ಲಾ ಸ್ವಾರ್ಥ ದೃಷ್ಟಿಯಿಂದ ನಡೆಯುತ್ತಿದೆ. ಈಗ ಜನತಾ ಬಜಾರ್‌ಗಳಲ್ಲಿ ಸ್ವಾರ್ಥಾಭಿಮಾನದಿಂದ ಕೆಲಸ ಮಾಡತಕ್ಕವರು ಇದ್ದಾರೆ. ಇವರು ಪದಾರ್ಥಗಳು ಎಲ್ಲಿ ತಯಾರಾಗುತ್ತವೆ ಅಲ್ಲಿ ಖರೀದಿ ಮಾಡತಕ್ಕ ಸಂಪ್ರದಾಯ ಬಹಳ ಕಡಿಮೆಯಾಗಿದೆ, ಹೋಲ್‌ಸೇಲ್ ಸ್ಟೋರ್‌ಗಳಿಂದ, ಖಾಸಗಿ ವ್ಯಾಪಾರಸ್ಥರುಗಳಿಂದ ಖರೀದಿ ಮಾಡಿ ಯಾವುದೋ ಕಮಿಷನ್‌ಗೆ ಹೆಚ್ಚಿನ ದರ ನಿಗದಿ ಮಾಡುತ್ತಾರೆ. ಅನೇಕ ಸಂದರ್ಭಗಳಲ್ಲಿ ಖಾಸಗಿ ವಾಣಿಜ್ಯೋದ್ಯಮಿಗಳ ಬೆಲೆಗಳಿಗಿಂಥ ಈ ಜನತಾ ಬಜಾರ್‌ಗಳಲ್ಲಿ ಬೆಲೆ ಜಾಸ್ತಿ ಇರುತ್ತದೆ; ಅಲ್ಲದೇ ಪದಾರ್ಥಗಳು ಕೂಡ ಉತ್ತಮ ಮಟ್ಟದಲ್ಲಿ ಇರುವುದಿಲ್ಲ. ಈಗ ಸರ್ಕಾರದವರು ಸುಮಾರು ಕೋಟ್ಯಾಂತರ ರೂಪಾಯಿಗಳನ್ನು ಈ ಜನತಾ ಬಜಾರ್‌ಗಳಲ್ಲಿ ತೊಡಗಿಸಿದ್ದಾರೆ, ಈಗಲೇ ಅದನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳದೇ ಹೋದರೆ ನಷ್ಟವಾಗುವುದಕ್ಕೆ ಕಾರಣವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಅಲ್ಲದೇ ಅನ್‌ಸೋಲ್ಡ್ ಆರ್ಟಿಕಲ್ಸ್ ಎಲ್ಲಾ ಜನತಾ ಬಜಾರ್‌ಗಳಲ್ಲೂ ಕೂಡ ಬೇಕಾದಷ್ಟು ಉಳಿದಿವೆ. ಅದನ್ನು ಸೇಲ್ ಮಾಡುವುದಕ್ಕೆ ಹೋದರೆ ಎಲ್ಲಾ ನಷ್ಟವಾಗುತ್ತದೆ. ಅದರ ಬಗ್ಗೆ ಸರ್ಕಾರದವರು ಹೆಚ್ಚು ನಿಗಾ ಕೊಡಬೇಕು ಎಂದು ಅಪೇಕ್ಷೆ ಪಡುತ್ತೇನೆ. ಹಾಗೆ ಸಹಕಾರ ಸಂಘಗಳ ಆಡಿಟ್ ಏನು ಇದೆ, ನಿಜವಾಗಿಯೂ ಕೂಡ ಅದು ಸರಿಯಾದ ರೀತಿಯಲ್ಲಿ ಆಡಿಟ್ ಆಗುತ್ತಾ ಇಲ್ಲ, ಪ್ರತಿ ವರ್ಷ ಕೂಡ ಪ್ರತಿಯೊಂದು ಸಂಸ್ಥೆಗಳನ್ನು ಆಡಿಟ್ ಸೆಲ್ ಮಾಡುವ ಮುಖಾಂತರ ಸರಿಯಾದ ವ್ಯವಸ್ಥೆ ಮಾಡದೇ ಹೋದರೆ ನಮ್ಮ ದೇಶದಲ್ಲಿರತಕ್ಕ ಸಹಕಾರ ಸಂಘಗಳು ಉಳಿಯುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಜಿಲ್ಲಾ ಬ್ಯಾಂಕುಗಳ ವಿಷಯ ತೆಗೆದುಕೊಂಡರೆ ಸುಸ್ತಿ ಸಾಲ ಜಾಸ್ತಿಯಾಗುತ್ತಾ ಇದೆ, ಇನ್ನು ಕೆಲವು ಬ್ಯಾಂಕುಗಳಲ್ಲಿ ಕರಡು ಸಾಲ ನಿಂತಿದೆ. ವಸೂಲು ಮಾಡುವುದಕ್ಕೆ ಆಗದೇ ಇರತಕ್ಕ ಸಾಲಗಳು ಇದೆ. ಇದಕ್ಕೆ ಕಾರಣ ಏನು ಎಂದರೆ ಬೆಳೆ ಸಾಲಗಳನ್ನು ಮಂಜೂರು ಮಾಡುವಾಗ, ಮಂಜೂರಾದ ಸಾಲವನ್ನು ವಿತರಣೆ ಮಾಡುವಾಗ ಲೋಪ

(ಶ್ರೀ ಅನಿವಾಳ ನಂಜಪ್ಪ)

ಇರುವುದನ್ನು ಸರಿಪಡಿಸದೇ ಇರುವುದರಿಂದ ಈ ತರಹ ಆಗುತ್ತದೆ, ಈ ತರಹ ಆಗುತ್ತಿರುವ ಲೋಪವನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಹಾಸನ ಜಿಲ್ಲಾ ಬ್ಯಾಂಕ್ ಬೆಳವಾಡಿ ಸೊಸೈಟಿಯಲ್ಲಿ ಎರಡು ಲಕ್ಷ ರೂಪಾಯಿ ಕರಡು ಸಾಲ ಇದೆ, ಇದಕ್ಕೆ ಕಾರಣ ಏನು ಏನೆಂದರೆ ಅಲ್ಲಿ ಅಧ್ಯಕ್ಷರು ಮತ್ತು ಸಹಕಾರ ಇಲಾಖೆ ಅಧಿಕಾರಿಗಳು ಸಾಮೀಲು ಇರುವುದರಿಂದ ಈ ರೀತಿ ಆಗುತ್ತದೆ, ರೈತರ ಸ್ಥಿತಿಯನ್ನು ಆಧಾರ ಮಾಡಿಕೊಂಡು ಸೆಕ್ಯೂರ್ಡ್ ಲೋನ್ ಕೊಟ್ಟಿರುವುದು, ಸೆಕ್ಯೂರ್ಡ್ ಲೋನ್ ಸಾಲ ಕರಡು ಆಗುವುದಕ್ಕೆ ಪ್ರಮೇಯವಿಲ್ಲ, ಈ ರೀತಿ ಪ್ರಮೇಯ ಆಗುವುದಕ್ಕೆ ಕಾರಣ ಏನು ಎಂದರೆ ರೆಕಾರ್ಡ್ ಮಾಡುವುದರಲ್ಲಿ ಲೋಪದೋಷಗಳು ಇರುತ್ತದೆ, ಮತ್ತು ಮಂಜೂರು ಆಗಿ ವಿತರಣೆ ಮಾಡುವ ಕಾಲದಲ್ಲಿ ಲೋಪದೋಷಗಳು ಆಗುತ್ತವೆ, ಅದನ್ನು ಸರಿಪಡಿಸಬೇಕು ಎಂದು ಹೇಳುತ್ತೇನೆ. ಇನ್ನು ಸಹಕಾರ ಇಲಾಖೆ ನಿಜವಾಗಿ ಕೂಡ ಈ ಒಂದು ಇಡೀ ನಮ್ಮ ರಾಜ್ಯದಲ್ಲಿರತಕ್ಕ ಎಲಾ ಇಲಾಖೆಗಳಿಗಿಂತಲೂ ಬಹಳ ಮುಖ್ಯವಾದದ್ದು, ಈ ಇಲಾಖೆ ಅಷ್ಟೇ ದೊಡ್ಡ ಇಲಾಖೆ ಅದು ಸರಿಯಾದ ರೀತಿಯಲ್ಲಿ ಕೆಲಸ ಮಾಡದೇ ಹೋದರೆ ನಮ್ಮ ದೇಶದ ಒಂದು ಸಾರ್ವಜನಿಕ ಜನಜೀವನ ಉತ್ತಮ ಮಟ್ಟಕ್ಕೆ ಬರುವುದಿಲ್ಲ, ಆದ ದರಿಂದ ಈ ಇಲಾಖೆ ದಕ್ಷತೆಯಿಂದ ನಿರ್ವಹಿಸುವುದಕ್ಕೆ ಒಂದು ವ್ಯವಸ್ಥೆ ಆಗದೇ ಹೋದರೆ ಅದು ದೇಶಕ್ಕೆ ದ್ರೋಹ ಮಾಡಿದಂತಾಗುತ್ತದೆ. ಈ ಒಂದು ದೃಷ್ಟಿಯಿಂದ ಸರ್ಕಾರವನ್ನು ನಾನು ಕೇಳಿಕೊಳ್ಳುವುದು ಏನು ಎಂದರೆ ಇನ್ನು ಮೇಲಾದರೂ ಈ ಇಲಾಖೆ ಚೆನ್ನಾಗಿ ಕೆಲಸ ಮಾಡುವುದಕ್ಕೆ ಎಲ್ಲಾ ವಿಧವಾದಂಥ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಈ ಒಂದು ಇಲಾಖೆಯ ಅದಕ್ಷತೆ ಎನ್ನುವುದಕ್ಕೆ ಒಂದು ಉದಾಹರಣೆ ಹೇಳುತ್ತೇನೆ, ಇಡೀ ದಕ್ಷಿಣ ಇಂಡಿಯಾದಲ್ಲಿ, ಇಡೀ ಕರ್ನಾಟಕದಲ್ಲಿ ಬಹಳ ಪ್ರಾಶಸ್ತ್ಯವನ್ನು ಪಡೆದಂಥ ಮಂಡ್ಯ ರೈತ ಸಂಘ, ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿ ಏನು ಇದೆ ಅದನ್ನು ಹೊರದೇಶದವರು ಹೊಗಳುತ್ತಿದ್ದರು, ಆದರೆ ಇವೊತ್ತು ಅದರ ಸ್ಥಿತಿ ಏನಾಗಿದೆ, ಅದು ಸೂಪರ್ ಸೀಡ್ ಆಗಿದೆ, ಇದರಲ್ಲ ಎಷ್ಟೋ ದುರ್ವ್ಯವಹಾರಗಳು ನಡೆದಿದೆ. ಸುಮಾರು 53 ಲಕ್ಷ ರೂಪಾಯಿ ಷೇರುಧನ ಸಬ್ಸಿಡಿಯಾಗಿ ಕೊಟ್ಟಿದ್ದಾರೆ, ಇದು ವರೆಗೂ ಇಪ್ಪತ್ತೊಂದು ಕಾಲು ಲಕ್ಷ ರೂಪಾಯಿ ನಷ್ಟವಾಗಿದೆ. 1973ರಲ್ಲಿ ಏಳೂ ವರೆ ಲಕ್ಷ ರೂಪಾಯಿ ಸಬ್ಸಿಡಿ ಕೊಟ್ಟಿದ್ದಾರೆ. ಇಷ್ಟಾದರೂ ಕೂಡ ಅಲ್ಲಿ ಸರಿ ಯಾದ ಲೆಕ್ಕಪತ್ರಗಳಿಲ್ಲ ಮತ್ತು ಅವು ನಷ್ಟದಲ್ಲಿ ಇವೆ. ಇದರಿಂದಾಗಿ ಇಡೀ ಸಹಕಾರ ಕ್ಷೇತ್ರಕ್ಕೆ ಕೆಟ್ಟ ಹೆಸರು ತಂದಿದ್ದಾರೆ ಇದಕ್ಕೆ ಕಾರಣ ಏನು ಎಂದರೆ ಅಲ್ಲಿ ಸರಿಯಾದ ರೀತಿಯಲ್ಲಿ ದಕ್ಷತೆಯಿಂದ ಕೆಲಸ ಮಾಡದೇ ಇರುವುದು ಕಾರಣ ವಾಗಿದೆ. ಹೀಗೆ ದೇಶದಲ್ಲಿ ಸಹಕಾರ ತತ್ವದ ಪ್ರಚಾರ ಮತ್ತು ಶಿಕ್ಷಣಕ್ಕೋಸ್ಕರ

ಸಹಕಾರ ಯೂನಿಯನ್ ಸರಿಯಾಗಿ ಕೆಲಸ ಮಾಡುತ್ತಿದೆಯೋ ಎಂದರೆ ಸಹಕಾರ ಯೂನಿಯನ್ ಹೆಸರಿಗೆ ಮಾತ್ರ ಇದೆಯೇ ಹೊರತು ಅದು ಸರಿಯಾಗಿ ಕೆಲಸ ಮಾಡುತ್ತಿಲ್ಲ ಹಾಗೆ ಸಂಘದಲ್ಲಿ ಇರತಕ್ಕ ಆರ್ಥಿಕ ಮಟ್ಟಕ್ಕೆ ಅನುಗುಣವಾಗಿ ಕೆಲಸ ಮಾಡಿಕೊಂಡು ಬಂದಿವೆ. ಈ ಸರ್ಕಾರದವರು ಜಿಲ್ಲಾ ಮತ್ತು ದೇಶ ಮಟ್ಟದಲ್ಲಿರತಕ್ಕ ಯೂನಿಯನ್‌ಗೆ ಉತ್ತಮವಾದ ಆರ್ಥಿಕ ವ್ಯವಸ್ಥೆ ಮಾಡಬೇಕು. ಇದಕ್ಕೆ ಒಂದು ಏಜನ್ಸಿ ಇಲ್ಲದೇ ಹೋದರೆ ತತ್ವ ಪ್ರಚಾರ ಮತ್ತು ಸಹಕಾರ ಶಿಕ್ಷಣಕ್ಕೆ ಧಕ್ಕೆಯಾಗುತ್ತದೆ, ಅದನ್ನು ಯೋಚನೆ ಮಾಡಬೇಕು. ಹಾಗೆ ಈ ಯೂನಿಯನ್‌ಗೆ ಇವೊತ್ತಿನ ದಿವಸ ದೇಶದಲ್ಲಿರತಕ್ಕ ಸಂಸ್ಥೆಗಳು ತಾವು ಪಡೆದಂತ ಲಾಭದಲ್ಲಿ ಇಷ್ಟು ಪರ್ಸೆಂಟ್ ಕಡ್ಡಾಯವಾಗಿ ಕೊಡಬೇಕು ಎಂದು ನಿಗಧಿ ಯಾಗಿದೆ, ಕೊಡದೇ ಹೋದರೆ ಏನು ಕ್ರಮ ತೆಗೆದುಕೊಳ್ಳಬೇಕು ಎಂದು ಕಾನೂನಿ ನಲ್ಲಿ ಇಲ್ಲ, ಈಗ ನಿಗಧಿಯಾಗಿರತಕ್ಕದ್ದು ಏನು ಇದೆ, ಅದು ಬಹಳ ಕಡಿಮೆ, ಕೊನೇಪಕ್ಷ ಮೂರು ಅಥವಾ ನಾಲ್ಕು ಪರ್‌ಸೆಂಟ್ ಆದರೂ ಕೊಡಬೇಕು ಅದನ್ನು ಕೊಡದೇ ಹೋದರೆ ಶಿಸ್ತಿನ ಕ್ರಮ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆಯಾಗಬೇಕು ಎಂದು ಈ ಸಂಧರ್ಭದಲ್ಲಿ ಹೇಳುತ್ತೇನೆ. ಇನ್ನು ಸಹಕಾರಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಾ ಇರತಕ್ಕ ನೌಕರರಿಗೆ ವೇತನಶ್ರೇಣಿ ಏನು ಇದೆ, ಇತರೇ ನೌಕರರ ಶ್ರೇಣಿಯ ಜೊತೆಗೆ ಹೋಲಿಸಿದರೆ ಬಹಳ ಕಡಿಮೆ ಇದೆ, ನಿಜವಾಗಿ ಅವರಿಂದ ಉತ್ತಮ ಕೆಲಸ ಅಪೇಕ್ಷೆ ಮಾಡುತ್ತೇವೆ. ದಕ್ಷತೆ ಕೆಲಸ ಅಪೇಕ್ಷೆ ಮಾಡುತ್ತೇವೆ. ಪ್ರಾಮಾಣಿಕವಾದಂಥ ಕೆಲಸ ಅಪೇಕ್ಷೆ ಮಾಡುತ್ತೇವೆ, ಆದರೆ ಅವರಿಗೆ ಈ ವೇತನ ಶ್ರೇಣಿಯಲ್ಲಿ ಬಹಳ ಹಿಡಿತ ಮಾಡಿದ್ದೇವೆ. ಆದರಿಗೆ ಸರಿಯಾದ ಸಂಬಳ ಕೊಡದೇ ಹೋದರೆ ಹೇಗೆ ಆಗುತ್ತದೆ ಆದುದರಿಂದ ಆದಷ್ಟು ಜಾಗ್ರತೆ ಪೇ ಕಮಿಷನ್ ನೇಮಕಮಾಡಿ ಆ ಕ್ಷೇತ್ರದಲ್ಲಿ ಇರತಕ್ಕವರಿಗೆ ಉತ್ತಮವಾದ ಸಂಬಳ ಬರುವುದಕ್ಕೆ ವ್ಯವಸ್ಥೆ ಆಗಬೇಕು ಎಂದು ಸರ್ಕಾರವನ್ನು ಒತ್ತಾಯ ಮಾಡಿ ಇದುವರೆಗೂ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ

*ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು (ಶಾಂತಿನಗರ) : - ಸನ್ಮಾನ್ಯ ಅಧ್ಯಕ್ಷರೇ, 1975-76ನೇ ಸಾಲಿಗೆ ಸಂಬಂಧಪಟ್ಟ ಸಹಕಾರ ಇಲಾಖೆ, ಯುವಜನ ಮತ್ತು ಪ್ರಚಾರ ಇಲಾಖೆಗಳಿಗೆ ಸಂಬಂಧಪಟ್ಟ ಬೇಡಿಕೆಗಳನ್ನು ಸ್ವಾಗತಿಸುತ್ತಾ ಈ ಸಂದರ್ಭದಲ್ಲಿ ನಾಲ್ಕು ಮಾತುಗಳನ್ನು ಹೇಳಲು ಇಷ್ಟಪಡುತ್ತೇನೆ. ಅನೇಕ ಮಾನ್ಯ ಮಿತ್ರರು ಮಾತನಾಡಿರತಕ್ಕಂಥ ಸಂದರ್ಭದಲ್ಲಿ ಅತ್ಯಾಚಾರ ಮತ್ತು ಭ್ರಷ್ಟಾಚಾರದ ಬಗ್ಗೆ ಹೇಳಿದ್ದಾರೆ ನಾನು ಕೇಳುತ್ತೇನೆ. ಹಿಂದಿನಿಂದಲೂ ಸಹಕಾರ ತತ್ವ 60-70 ವರ್ಷಗಳಿಂದ ನಮ್ಮ ಸಂಸ್ಥಾನದಲ್ಲಿದೆ. ಈ ಸಂದರ್ಭದಲ್ಲಿ ಮಾನ್ಯ ಕೆ. ಹೆಚ್. ರಾಮಯ್ಯನವರು ಮತ್ತು ಮಾಳೆ ಶಿವರಾವ್ ಅವರನ್ನು ನೆನಸ ಬೇಕಾಗುತ್ತದೆ. ಈ ತತ್ವ ಕೃಷಿಗಾಗಲಿ, ವ್ಯವಸಾಯ ಕ್ಷೇತ್ರಕ್ಕಾಗಲಿ,

(ಶ್ರೀ ಕೆ. ಆರ್. ಶ್ರೀನಿವಾಸಲು)

ಕೈಗಾರಿಕೆಗಾಗಲಿ, ವಿದ್ಯಾಭ್ಯಾಸಕ್ಕಾಗಲಿ ಸಮಾಜಸೇವೆಗಾಗಲಿ ಈಗಿರತಕ್ಕಂಥ ಕಾಲದಲ್ಲಿ ಏನು ಕೋ ಆಪರೇಟಿವ್ ಫೆಡರೇಷನ್ ಅಪೆಕ್ಸ್ ಸಂಘಗಳಲ್ಲಿ ಏನೇನು ತಪ್ಪುಗಳು ಇವೆ ಅವುಗಳನ್ನು ನೋಡಿದರೆ ಕೇವಲ ದುಡ್ಡು ನುಂಗುವುದ ಒಂದು ಸಾಧನವಾಗಿದೆ. ಇದನ್ನು ಸರಿಮಾಡಲು ಬೇಸಿಕ್ ನ್ಯಾಷನಲ್ ಕ್ಯಾರೆಕ್ಟರ್ ಸಹಕಾರ ಕ್ಷೇತ್ರದಲ್ಲಿ ಬರದೇ ಹೋದರೆ ಅಷ್ಟು ಸುಗಮವಾಗಿ ಸಹಕಾರಿ ಕ್ಷೇತ್ರ ನಡೆಯುವುದಿಲ್ಲವೆಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ಕೋ ಆಪರೇಟೀವ್ ದೃಷ್ಟಿಯಿಂದ ಇನ್ನಷ್ಟು ಜಿಲ್ಲಾಮಟ್ಟದಲ್ಲಿ ಕೋ ಆಪರೇಟೀವ್ ಕಲೆಕ್ಟೀವ್ ಫಾರ್ಮ್ಸ್ ಗಳು ಆಗಬೇಕು ಲ್ಯಾಂಡ್ ರೀಫಾರ್ಮ್ಸ್‌ಗೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು. ಸಹಕಾರಿ ಸಂಘಗಳು ಏನು ಪಟ್ಟಣಗಳಲ್ಲಿ ಇವೆ ಅವು ಡಿಸ್ಟ್ರಿಕ್ಟ್ ಹೆಡ್‌ಕ್ವಾಟರ್ಸ್‌ಗಳಲ್ಲಿ ಜಾಸ್ತಿಯಾಗಬೇಕು ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಜಾಸ್ತಿಯಾಗಿ ಅಲ್ಲಿನ ಜನತೆಗೆ ಸಹಾಯ ದೊರಕುವಂತೆ ಮಾಡಬೇಕೆಂದು ಹೇಳುತ್ತೇನೆ. ಪಟ್ಟಣಗಳಲ್ಲಿ ವಿದ್ಯಾವಂತರು ಸರ್ಕಾರಿ ನೌಕರರು ಬೇಕಾದಷ್ಟು ಮಾಡಿದ್ದಾರೆ. ಆದ್ದರಿಂದ ಎಲ್ಲಾ ಸೌಕರ್ಯಗಳು ಇವರಿಗೆ ದೊರೆಯುತ್ತಿವೆ ಇದೇ ರೀತಿ ಸರ್ಕಾರದ ವತಿಯಿಂದ ರೂರಲ್ ಕೋ ಆಪರೇಟೀವ್ ಡೆವಲಪ್‌ಮೆಂಟ್‌ಗೆ ರೂರಲ್ ಕೋ ಆಪರೇಟೀವ್‌ಸ್‌ಗೆ ಉತ್ತೇಜನ ಕೊಡಬೇಕೆಂದು ಹೇಳುತ್ತೇನೆ. ಇನ್ನು ರೆಗ್ಯೂಲೇಟೆಡ್ ಮಾರ್ಕೆಟ್‌ಗಳು ಏನು ಇವೆ ಅವಕ್ಕೆ ಕೇಂದ್ರದಿಂದ ನೆರವು ಬರುತ್ತಾ ಇದೆ. ಅಲ್ಲಿ ರೈತನಿಗೆ ತಂಗಲು ಅವಕಾಶ ಇರಬೇಕು ಮತ್ತು ಆತನ ಎತ್ತು ಗಾಡಿಗಳನ್ನು ನಿಲ್ಲಿಸುವುದಕ್ಕೆ ಅವಕಾಶ ಇರಬೇಕು ಆದ್ದರಿಂದ ಅಲ್ಲಿ ರೈತಭವನಗಳನ್ನು ಕಟ್ಟಬೇಕೆಂದು ಒತ್ತಿ ಹೇಳುತ್ತೇನೆ. ಇನ್ನು ಆಡಿಟ್ ಬಗ್ಗೆ ಹಲವಾರು ಮಾನ್ಯ ಸ್ನೇಹಿತರು ಹೇಳಿದ್ದಾರೆ. ಅದು ಮಾಮೂಲಿಯಾಗಿ ಬಿಟ್ಟಿದೆ, ಆಡಿಟ್‌ನವರೇ ಹೇಳುತ್ತಾರೆ ಯಾವ ರೀತಿ ಓಚರ್ಸ್ ಮಾಡಬೇಕು ಬಿಲ್ಲು ಯಾವರೀತಿ ಬರೆಯಬೇಕು ಎಂದು ಇಂಥ ಆಡಿಟ್ ಜನರು ಯಾರು ಸಿಕ್ಕುವುದಿಲ್ಲವೆಂದು ಮರೆಯಬಾರದು. ಇನ್ನು ಮುಂದೆ ನಮ್ಮ ಯುವಕರಿಗೇ ಸರಿಯಾದ ಉತ್ತೇಜನ ಕೊಡಬೇಕು. ಇಂದಿನ ಯುವಕರೇ ಮುಂದಿನ ಆಶಾಕಿರಣ ಇವರ ಬಗ್ಗೆ ಹೆಚ್ಚಿನ ರೀತಿಯಲ್ಲಿ ಆಸಕ್ತಿ ವಹಿಸಬೇಕೆಂದು ಹೇಳುತ್ತೇನೆ. ಇನ್ನು ಶ್ರೀಮಾನ್ ಗುಂಡೂರಾವ್‌ರವರು ಇದ್ದಾರೆ ಅವರ ಕಾಲದಲ್ಲಿ ಸೋಷಿಯಲ್ ಎಕನಾಮಿಕ್ ಜಸ್ಟೀಸ್ ಕೊಟ್ಟು ಒಂದು ಮಾರ್ಗದರ್ಶನದ ಜೀವನವನ್ನು ಮಾಡಬೇಕಾಗುತ್ತದೆ. ಪಟ್ಟಣಗಳಲ್ಲಿ ಆಟಗಳಿಗೆ ಬಹಳ ಪ್ರಾಶಸ್ತ್ಯವಿದೆ ಅಂದರೆ ಕ್ರಿಕೆಟ್, ಹಾಕಿ, ಫುಟ್‌ಬಾಲ್ ಮುಂತಾದ ಸೌಕರ್ಯಗಳು ಇವೆ. ಆದರೆ ಗ್ರಾಮಾಂತ ಪ್ರದೇಶಗಳಲ್ಲಿ ಇಂತಹ ಕ್ರೀಡೆಗಳು ಯಾವುವೂ ಇರವುದಿಲ್ಲ. ಅಲ್ಲಿನ ಯುವಕರಿಗೆ ವ್ಯಾಯಾಮಗಳಿಗೆ, ಪ್ರಾಮುಖ್ಯತೆಯನ್ನು ಕೊಡಬೇಕು. ಬಾಲಭವನಗಳನ್ನು ಕಟ್ಟಿಸಿ ಉತ್ತೇಜನ ಕೊಡಬೇಕು ಎಂದು ಹೇಳುತ್ತೇನೆ. ಇನ್ನು ಫಿಲಮ್ ಯೂನಿಟ್‌ಗಳನ್ನು ಮಾಡಿ ಹಳ್ಳಿಯ ಜನರಿಗೆ

ಮನರಂಜನೆಗೆ ಅವಕಾಶ ಮಾಡಿ ಅವರಿಗೆ ಒಂದು ರೀತಿಯಿಂದ ನಾಗರಿಕತೆಯನ್ನು ಅರಿಯಲು ಅವಕಾಶ ಮಾಡಿಕೊಟ್ಟರೆ ಗ್ರಾಮಾಂತರ ಜನತೆಗೆ ಒಂದು ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಜಿಲ್ಲಾ ಮಟ್ಟದಲ್ಲಿ ಮಿನಿ ಥಿಯೇಟರ್‌ಗಳನ್ನು ಮಾಡಬೇಕೆಂದು ಹೇಳುತ್ತೇನೆ. ಇನ್ನು ಇನ್‌ಫರಮೇಷನ್ ಮತ್ತು ಪಬ್ಲಿಸಿಟಿ ಬಗ್ಗೆ ಎಷ್ಟು ಹಣ ಖರ್ಚು ಮಾಡಿದರೂ ಸಾಲುವುದಿಲ್ಲ. ಅದು ಕಡಿಮೆಯೆಂದು ಕಾಣುತ್ತದೆ. ಇನ್ನು ಸಣ್ಣ ಪತ್ರಿಕೆಗಳಿಗೆ ಉತ್ತೇಜನ ಕೊಡಬೇಕೆಂದು ಹೇಳುತ್ತೇನೆ. ಏತಕ್ಕೆಂದರೆ ದೊಡ್ಡ ದೊಡ್ಡ ಪತ್ರಿಕೆಗಳನ್ನು ನೋಡಿದರೆ ಅದರಲ್ಲಿ ಬಹಳಷ್ಟು ಭಾಗ ಕೇವಲ ಅಡ್ವೆರ್‌ಟೈಸ್‌ಮೆಂಟ್ ಬಂದಿರುತ್ತದೆ. ಆದ್ದರಿಂದ ಸಣ್ಣ ಸಣ್ಣ ವೃತ್ತ ಪತ್ರಿಕೆಗಳಿಗೆ ಪ್ರೋತ್ಸಾಹ ಕೊಡತಕ್ಕದ್ದು ಒಳ್ಳೆಯದೆಂದು ಹೇಳಿ ಮಾನ್ಯ ಅಧ್ಯಕ್ಷರು ನಾಲ್ಕು ಮಾತುಗಳನ್ನು ಹೇಳಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಸಿ. ಬೈರೇಗೌಡ (ವೇಮಗಲ್) :—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಏನು ಬೇಡಿಕೆಗಳನ್ನು ಇಟ್ಟಿದ್ದಾರೆ ಅದರಲ್ಲಿ ಸಹಕಾರ ಇಲಾಖೆಗೆ ಸಂಬಂಧಪಟ್ಟ ಬೇಡಿಕೆ, ಯುವಜನಶಾಖೆ ಮತ್ತು ಪ್ರಚಾರ ಶಾಖೆಗಳಿಗೆ ಸಂಬಂಧಪಟ್ಟ ಬೇಡಿಕೆಗಳನ್ನು ವಿರೋಧಿಸಬೇಕಾಗಿದೆ. ಮೊಟ್ಟಮೊದಲನೆಯದಾಗಿ ಸಹಕಾರ ಇಲಾಖೆಯಲ್ಲಿ ಇವೊತ್ತು ಹಣ ಯಾವರೀತಿ ದುರುಪಯೋಗವಾಗುತ್ತಿದೆ ಎಂದು ಹೇಳಬೇಕಾದರೆ ಉದಾಹರಣೆಯನ್ನು ಕೊಡಲು ಬಯಸುತ್ತೇನೆ. ನನ್ನ ಹತ್ತಿರ ಹೆಚ್ಚಿನ ಮಾಹಿತಿ ಇದ್ದರೂ ಕೂಡ ಕೆಲವೇ ಉದಾಹರಣೆಗಳನ್ನು ಕೊಡಬೇಕೆಂದು ಇಚ್ಛೆಪಡುತ್ತೇನೆ. ಕೋಲಾರ ಜಿಲ್ಲೆಯ ಕೇಂದ್ರ ಬ್ಯಾಂಕಿನಲ್ಲಿ ಶ್ರೀ ಎ ಕೆ. ಚನ್ನಪ್ಪ ಎಂಬುವರು 1-7-67 ರಿಂದ 3-11-67ರ ವರೆಗೆ ಸುಮಾರು 97.815-10 ಪೈಸೆ ಹಣವನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಇವರ ಮೇಲೆ ಇಲ್ಲಿಯವರೆಗೆ ಸರ್ಕಾರದವರು ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ಪೋಲೀಸರು ಕೂಡ ಯಾವ ಕ್ರಮ ತೆಗೆದುಕೊಳ್ಳದೆ ಎಲ್ಲರೂ ಬೇಜವಾಬ್ದಾರಿಯಿಂದ ಇದ್ದಾರೆಂದರೆ ಇದಕ್ಕೆ ಏನು ಹೇಳಬೇಕು. ದುರುಪಯೋಗವಾಗಿರುವುದು 67ರಲ್ಲಿ ಪೋಲೀಸರಿಗೆ ಕಂಪ್ಲೈಂಟ್ ಕೊಟ್ಟಿರುವುದು 1970ರಲ್ಲಿ ಸುಮಾರು 3 ವರ್ಷಗಳು ಪೋಲೀಸ್‌ಗೆ ಕಂಪ್ಲೈಂಟ್ ಕೊಡುವುದಕ್ಕೆ ಕಾಲಾವಕಾಶ ಬೇಕಾಗಿದೆ. ಇದರ ಮೇಲೆ ಸರ್ಕಾರದಿಂದಲೂ ಯಾವ ಕ್ರಮ ತೆಗೆದುಕೊಂಡಿಲ್ಲ. ಪೋಲೀಸ್ ಕಂಪ್ಲೈಂಟ್ ಕೊಟ್ಟ ಮೇಲೂ 70ನೇ ಇಸವಿಯಲ್ಲಿ ಕಂಪ್ಲೈಂಟ್ ಕೊಟ್ಟರೂ ಪೋಲೀಸರು 1974ನೇ ಇಸವಿಯಲ್ಲಿ ಚಾರ್ಜಷೀಟ್ ಹಾಕಿದ್ದಾರೆಂದರೆ ಅಧ್ಯಕ್ಷರೇ ಸುಮಾರು 5-6 ವರ್ಷಗಳ ಕಾಲ 97.815-10 ದುರುಪಯೋಗವಾಗಿ ಇಲ್ಲಿಯವರೆಗೆ ಯಾವ ಕ್ರಮವನ್ನು ತೆಗೆದುಕೊಂಡಿಲ್ಲವೆಂದರೆ ಸರ್ಕಾರ ತನ್ನ ಕರ್ತವ್ಯದಲ್ಲಿ ಎಷ್ಟು ಜವಾಬ್ದಾರಿಯಿಂದ ನಡೆದುಕೊಂಡಿದೆ ಎನ್ನುವುದು ಅರ್ಥವಾಗುತ್ತದೆ. ಅದೇ ಬ್ರಾಂಚಿನಲ್ಲಿ ಒಬ್ಬರು ಕರೇತಿಮ್ಮಯ್ಯ ಎಂಬುವರು 1,12,923-45 ದುರುಪಯೋಗವಾಗಿದ್ದರೂ ಕೂಡ ಸರ್ಕಾರ

(ಶ್ರೀ ಸಿ. ಬೈರೇಗೌಡ)

ವೇ ಆಗಲಿ ಪೋಲೀಸರೇ ಆಗಲಿ ಯಾವ ವಿಧವಾದ ಕ್ರಮ ತೆಗೆದುಕೊಂಡಿಲ್ಲ. ಇನ್ನು ಕೋಲಾರ ಜಿಲ್ಲಾ ಬ್ಯಾಂಕ್‌ನಲ್ಲಿ ಶೇರು ಹಾಕಿದರೆ ಬೇನಾಮಿ ಲೋನ್ಸ್ ಅವರಿಗೆ ಬೇಕಾದವರಿಗೆ ಕೊಟ್ಟಿರುವುದು ತಿಳಿದು ಬಂದಿದೆ. ಒಂದೇ ಜಿಲ್ಲಾ ಬ್ಯಾಂಕಿನಲ್ಲಿ 50 ಲಕ್ಷ ರೂಪಾಯಿ ಲೆಕ್ಕಕ್ಕೆ ಸಿಕ್ಕದಂತೆ ಇರತಕ್ಕಂಥ ಸನ್ನಿವೇಶವಿದೆ. ಸಾರ್ವಜನಿಕ ಹಣ ಪೋಲು ಆಗಿದೆ ಇದಕ್ಕೆ ಕಾರಣ ಯಾರು ಎಂದರೆ ಅಲ್ಲಿ ಅಧಿಕಾರ ಗದ್ದುಗೆಯಲ್ಲಿ ಕೂತಿದ್ದಾರಲ್ಲ ಅವರು ಶಾಮೀಲಾಗಿ ಅಧಿಕಾರಿಗಳ ಮೇಲೆ ಒತ್ತಡ ತಂದು ಸಾರ್ವಜನಿಕ ಹಣವನ್ನು ಲೂಟಿ ಮಾಡಿದ್ದಾರೆ. ಇದೇ ರೀತಿಯಲ್ಲಿ ಅನೇಕ ಸಂದರ್ಭಗಳಲ್ಲಿ ಸರ್ಕಾರದವರು ಶಾಮೀಲಾಗಿದ್ದಾರೆ. ಇನ್ನು ಇನ್‌ಫರ್‌ಮೇಷನ್ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಗುಂಡುರಾಯರನ್ನು ಯಾರೂ ನೋಡದೆ ಇದ್ದಾರೆ ಅವರ ವಿಷಯದಲ್ಲಿ ಒಂದು ಅಂಶವನ್ನು ಪ್ರಸ್ತಾಪ ಮಾಡಬೇಕೆಂದು ಇದ್ದೇನೆ. ನನಗೆ ತಿಳಿದಮಟ್ಟಿಗೆ ಜರ್ನಲಿಸಮ್‌ನಲ್ಲಿ ಯಾರು ದಕ್ಷತೆಯಿಂದ ಕೆಲಸಮಾಡುತ್ತಾರೆ ಅವರಿಗೆ ಈ ಇಲಾಖೆಯಲ್ಲಿ ಕಂಟ್ರಾಕ್ಟ್ ತೆಗೆದುಕೊಂಡು ಅವರಿಗೆ ಎನ್‌ಕರೇಜ್‌ಮೆಂಟ್ ಕೊಡಬೇಕೆನ್ನುವ ಮಾತ್ರ ಸ್ಥಾನಮಾನಗಳನ್ನು ಕೊಡಬೇಕೆಂದು ಒಂದು ಯೋಜನೆ ಇದೆ. ಅದು ಬಂದು ಐದಾರು ವರ್ಷಗಳಾದರೂ ಸಹ ಇಲ್ಲಿಯವರೆಗೂ ಸರ್ಕಾರ ಅವರ ಬಗ್ಗೆ ಯಾವ ನಿಲುವನ್ನೇ ಆಗಲೀ ಅಥವಾ ಸೂಕ್ತ ಕ್ರಮವನ್ನೇ ಆಗಲೀ ತೆಗೆದುಕೊಂಡಿಲ್ಲ. ಯಾರೋ ಒಬ್ಬರನ್ನು ತೆಗೆದುಕೊಂಡಿದ್ದಾರೆ. ಪೋಲೀಸಿನವರ ಹಾವಳಿ ಅಲ್ಲಿ ಹೆಚ್ಚಾಗಿದೆ. ಅವರು ಅಲ್ಲಿಯೂ ಇರಬೇಕು. ಇನ್‌ಫರ್‌ಮೇಷನ್ ಇಲಾಖೆಯಲ್ಲಿಯೂ ಪೋಲೀಸಿನವರು ಇರಬೇಕು. ಚಿತ್ರದುರ್ಗದಿಂದ ಯಾರೋ ಒಬ್ಬ ಪೋಲೀಸ್ ಸೂಪರಿಂಟೆಂಡೆಂಟರನ್ನು ತಂದು ಈ ಇಲಾಖೆಯ ಮುಖ್ಯಾಧಿಕಾರಿಯನ್ನಾಗಿ ಮಾಡುವುದಕ್ಕೆ ಸರ್ಕಾರ ಆಲೋಚನೆ ಮಾಡುತ್ತಿದೆಯೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಜರ್ನಲಿಜಂಗೂ ಸರ್ಕಾರ ಈಗ ಏನೇನೋ ಮಾಡುತ್ತಿದೆನ್ನುವುದನ್ನು ತಿಳಿಸುವುದಕ್ಕೆ ನಾನು ಇಚ್ಛೆಪಡುತ್ತೇನೆ. ಪೋಲೀಸಿನವರು ಅಲ್ಲಿ ಏಕೆ? ಸರ್ಕಾರದವರು ಏಕೆ ಈ ರೀತಿಯಾಗಿ ಮಾಡುತ್ತಿದ್ದಾರೆಂಬುದನ್ನು ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ನನಗೆ ತಿಳಿಸಬೇಕು. ಪೋಲೀಸ್ ಇಲಾಖೆಗೂ ಮತ್ತು ಇನ್‌ಫರ್‌ಮೇಷನ್ ಡಿಪಾರ್ಟ್‌ಮೆಂಟಿಗೂ ಏನೂ ಸಂಬಂಧವಿಲ್ಲ. ಏಕೆಂದರೆ ಪೋಲೀಸ್ ಇಲಾಖೆಯ ಕೆಲಸಕಾರ್ಯಗಳೇ ಬೇರೆ, ಇನ್‌ಫರ್‌ಮೇಷನ್ ಡಿಪಾರ್ಟ್‌ಮೆಂಟಿನ ಕೆಲಸಕಾರ್ಯಗಳೇ ಬೇರೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಏನು ಆಲೋಚನೆ ಮಾಡಿದೆಯೋ ಅದು ಸರಿಯಾದುದಲ್ಲವೆಂದು ನಾನು ಅಭಿಪ್ರಾಯ ಪಡುತ್ತೇನೆ

ನನಗೆ ಅಧ್ಯಕ್ಷರು ಕಡಿಮೆ ವೇಳೆಯನ್ನು ಕೊಟ್ಟಿದ್ದಕ್ಕಾಗಿ, ಹೆಚ್ಚು ವಿಚಾರ

ಗಳನ್ನು ಹೇಳುವುದಕ್ಕೆ ಅವಕಾಶ ಸಾಕಷ್ಟು ಇಲ್ಲದೇ ಇರುವುದರಿಂದ, ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

‡ ಶ್ರೀ ಎಸ್. ಬಂಗಾರಪ್ಪ (ಸೊರಬ) :— ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ವಿರೋಧಿಸಿ ಮಾತನಾಡುವುದಕ್ಕೆ ಇಚ್ಛೆ ಪಡುತ್ತೇನೆ. ಮೊಟ್ಟಮೊದಲನೆಯದಾಗಿ ಮಾನ್ಯ ಸಚಿವರಾದಂಥ ಶ್ರೀ ಗುಂಡೂ ರಾವ್ ಅವರಿಗೆ ಸಂಬಂಧಪಟ್ಟ ಇನ್‌ಫರ್‌ಮೇಷನ್ ಡಿಪಾರ್ಟ್‌ಮೆಂಟಿಗೆ ಹೆಚ್ಚಿಗೆ ಹಣವನ್ನು ಕೊಡುವುದು ಒಳ್ಳೆಯದು ಸಬ್ಸಿಡಿ ರೂಪದಲ್ಲಿ ಸರ್ಕಾರದವರು ಕಪ್ಪು ಮತ್ತು ಬಿಳುಪು ಚಲನಚಿತ್ರಗಳಿಗೆ ಒಂದು ಲಕ್ಷ ರೂಪಾಯಿಗಳನ್ನೂ ಹಾಗೆಯೇ ಬಣ್ಣದ ಚಲನಚಿತ್ರಗಳಿಗೆ ಒಂದೂವರೆ ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದು ಬಹಳ ಸಂತೋಷಕರವಾದ ಸಂಗತಿ ಎಂಬುದಾಗಿ ಹೇಳು ತ್ತೇನೆ. ಹಾಗೆಯೇ ಮಿನಿ ಥಿಯೇಟರ್ಸ್ ಮಾಡುವುದಕ್ಕೆ ಒಂದು ಯೋಜನೆ ಮಾಡಿ ದ್ದಾರೆ. ಫಿಲಂ ಯೋಜನೆಯ ಬಗ್ಗೆ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕು ಅದಕ್ಕಾಗಿ ಹಣವನ್ನು ಬಡ್ಜೆಟ್ಟಿನಲ್ಲಿ ಅತಿಯಾಗಿ ಇಡಬೇಕು. ಎಷ್ಟು ಸಾಧ್ಯವೋ ಅಷ್ಟು ಹಣವನ್ನು ಈ ಬಾಬಿಗೆ ಬಡ್ಜೆಟ್ಟಿನಲ್ಲಿಟ್ಟು ಆತ್ಮಕಡೆಗೆ ಸರ್ಕಾರ ಹೆಚ್ಚಿನ ಗಮನ ಕೊಡುವುದು ಒಳ್ಳೆಯದು. ಆದರೆ ಒಳ್ಳೆ ಒಳ್ಳೆಯ ಚಲನಚಿತ್ರಗಳನ್ನು ತಯಾರಿಸುವುದಕ್ಕೆ ಅವಕಾಶವನ್ನು ಹೆಚ್ಚಿಗೆ ಕೊಡಬೇಕು ಅಂತಹ ಚಲನಚಿತ್ರ ಗಳನ್ನು ತಯಾರಿಸುವ ಯೋಜನೆಯನ್ನು ಸರ್ಕಾರದವರು ಕೈಗೊಳ್ಳಬೇಕು. ಚಲನಚಿತ್ರಗಳನ್ನು ತಯಾರಿಸುವುದಕ್ಕೆ ಹೆಚ್ಚಿಗೆ ಪ್ರೋತ್ಸಾಹ ಕೊಡಲು ಕಡ್ಡಾಯ ವಾಗಿ ಚಲನಚಿತ್ರಗಳಲ್ಲಿ ಇದರ ಬಗ್ಗೆ ಸಿನಿಮಾ ಥಿಯೇಟರ್‌ಗಳಲ್ಲಿ ಪ್ರದರ್ಶನ ಮಾಡ ಬೇಕು.

ಶ್ರೀ ಕೋಣಂದೂರು ಲಿಂಗಪ್ಪ :— ಹೊಸದಾಗಿ ಬಂದಿರುವ ರಾಜಾ ವಿಕ್ರಮ....

ಶ್ರೀ ಆರ್ ಗುಂಡೂರಾವ್ :— ಆ ಚಿತ್ರವನ್ನು ಫಿಲಂ ಕಾರ್ಪೊರೇಷನ್ ಮೂಲಕ ತೆಗೆದದ್ದು.

ಶ್ರೀ ಎಸ್. ಬಂಗಾರಪ್ಪ :—ಈಗ ಸರ್ಕಾರದಲ್ಲಿ ಆ ಒಂದು ಯೋಜನೆ ಇದೆ. ಆದ್ದರಿಂದ ಅದನ್ನು ಸರಿಯಾಗಿ ಕಾರ್ಯರೂಪಕ್ಕೆ ತೆಗೆದುಕೊಂಡು ಬನ್ನಿ. ಎಷ್ಟೇ ಮಾಡಿದರೂ ಬ್ಲಾಕ್‌ಮನಿ ಇರತಕ್ಕವರು ಪೂರ್ತಿಯಾಗಿ ಹಣವನ್ನು ದೋಚಿಕೊಂಡು ಹೋಗುತ್ತಿದ್ದಾರೆ.

ಎರಡನೆಯದಾಗಿ ಸೊಸೈಟಿಗಳ ವ್ಯವಹಾರ ಬಗ್ಗೆ ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಬೇಕಾಗಿದೆ. ಕಳೆದ ಸಾರಿ ನಾನು ಒಂದು ವಿಚಾರವನ್ನು

(ಶ್ರೀ ಎಸ್. ಬಂಗಾರಪ್ಪ)

ಹೇಳುತ್ತೇನೆ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೆ ರಮಣ ರೈಸ್ ಮಿಲ್ ಎಂಬುದಾಗಿ ಒಂದಿದೆ. ಅಲ್ಲಿಒಂದು ಕೊಅಪರೇಟಿವ್ ಸೊಸೈಟಿ ಮೂಲಕ 722 ಕ್ವಿಂಟಾಲ್ ಚಿಲ್ಲರೆ ಭತ್ತವನ್ನು ಪರ್ಚೇಜ್ ಮಾಡಿ ಕಳ್ಳತನದಲ್ಲಿ ಇ ರೈಸ್ ಮಿಲ್ಲಿನ ಗೊಡೌನಿನಲ್ಲಿ 1966ರಲ್ಲಿ ಸ್ಟಾಕ್ ಮಾಡಿದ್ದರು. ಬೆಳ್ಳಗಾರಿ ಹಳ್ಳಿಯಲ್ಲಿ ನೀಲಕಂಠೇಶ್ವರ ರೈಸ್ ಮಿಲ್ ಎಂಬುದಾಗಿ ಈಗ ಅದಕ್ಕೆ ಹೆಸರು ಬಂದಿದೆ. ಆ ಕಾರ್ಖಾನೆಯಲ್ಲಿ ಒಂದು ರಾತ್ರಿ ಭತ್ತ ಸ್ಟಾಕ್ ಇದ್ದಾಗ ಕಳ್ಳತನದಲ್ಲಿ ಆ ಕಡೆಯಿಂದ ಬೇರೆ ಸೊಸೈಟಿಗೆ ಆ 722 ಕ್ವಿಂಟಾಲ್ ಚಿಲ್ಲರೆ ಭತ್ತ ಹೊರಟು ಹೋಯಿತು. ಅಲ್ಲಿ ಹಣ ದುರುಪಯೋಗವಾಗಿದೆ. ಆನಂತರ ಸರ್ಕಾರದ ರೇಟ್‌ನಲ್ಲಿ ಹಣವನ್ನು ಅದರ ಬಗ್ಗೆ ವಸೂಲು ಮಾಡಬೇಕೆಂದಾಗ ಸುಮಾರು ಒಂದು ಕ್ವಿಂಟಾಲಿಗೆ 44 ಅಥವಾ 45 ರೂ. ಗಳಂತೆ ದರವನ್ನು ಫಿಕ್ಸ್ ಮಾಡಿದರು. ಹೊರಗಡೆ ಆಗ ಒಂದು ಕ್ವಿಂಟಾಲಿಗೆ 87 ರಿಂದ 90 ರೂಪಾಯಿಗಳವರೆಗೆ ಇತ್ತು. ಅವನ್ನು ಆಮೇಲೆ ಹರಾಜು ಮಾಡಿಕೊಂಡರು. ಅದನ್ನು 40 ರಿಂದ 45 ರೂಪಾಯಿಗಳಂತೆಯೂ ವಸೂಲು ಮಾಡಲಿಲ್ಲ. ಇದರ ಬಗ್ಗೆ ಪೋಲೀಸ್ ರಿಪೋರ್ಟ್ ಕೂಡ ಮಾಡಿದರು. ಇಲ್ಲಿಯವರೆಗೂ ಕೂಡ ಅದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ನನ್ನ ಹತ್ತಿರ ಡೆಪ್ಯುಟಿ ಕಮಿಷನರ್ ಅವರ ಫೈಲ್ ನಂಬರ್ ಎಲ್ಲವೂ ಇವೆ. ಈ ರೀತಿಯಾಗಿ ಅಷ್ಟು ಕ್ವಿಂಟಾಲಿನ ಬತ್ತದ ಬೆಲೆಯನ್ನು ಅಂದರೆ ಒಂದೂವರೆ ಲಕ್ಷ ರೂಪಾಯಿಗಳನ್ನು ಅದನ್ನು ಪಡೆದವನಿಂದ ವಸೂಲು ಮಾಡುವುದಕ್ಕಾಗಲಿಲ್ಲ. ಅದು ಜನತಾ ವಸ್ತು, 722 ಕ್ವಿಂಟಾಲ್ ಚಿಲ್ಲರೆ ಬತ್ತ. ಅದರ ಬೆಲೆಯನ್ನು ಪೂರ್ತಿಯಾಗಿ ಇವರು ಏಕೆ ವಸೂಲು ಮಾಡಲಿಲ್ಲ ವೆಂಬುದನ್ನು ನನಗೆ ತಿಳಿಸಬೇಕು. ಈ ರಮಣ ರೈಸ್ ಮಿಲ್ ಬಗ್ಗೆ ಇನ್ನೂ ಅನೇಕ ಆಪಾದನೆಗಳಿವೆ. ಇನ್ನೊಂದು ವಿಷಯ ಸೊರಬ ತಾಲ್ಲೂಕ್ ಕೃಷಿ ಉತ್ಪನ್ನ ಮಾರ ಕಟ್ಟೆ ಸಂಘದ ಬಗ್ಗೆ ಅನೇಕ ಆಪಾದನೆಗಳು ಇವೆ. ಹಿಂದೆಯೂ ಕೂಡ ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಈ ಸಂಘ ನ್ಯಾಷನಲ್ ಸೀಡ್ ಕಾರ್ಪೊರೇಷನ್ನಿನವರಿಂದ ಬೀಜಗಳನ್ನು ಕೊಂಡ ಬಗ್ಗೆ ಕೆಲವು ಅಕ್ರಮಗಳಾದ ವಿಚಾರವನ್ನು ಈ ಸದನದಲ್ಲಿ ಕೇಳಿದ್ದಾರೆ. 12 ಸಾವಿರ ರೂಪಾಯಿಗಳಷ್ಟು ಬೀಜವನ್ನು ತಮ್ಮ ಸಂಬಂಧಿಕರ ಹೆಸರಿನಲ್ಲಿ ಖರೀದಿ ಮಾಡಿದ್ದಾರೆ. ಇವತ್ತು ಕಾಂಗ್ರೆಸ್ ಅಧ್ಯಕ್ಷರು ಎಂದು ಹೇಳಿ ಅವನ್ನು ಮಾರಿಕೊಂಡಿದ್ದಾರೆ. ಇವತ್ತಿನವರೆಗೂ ಕೂಡ ಅವರ ಬಗ್ಗೆ ಸರ್ಕಾರದವರು ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ಜೊತೆಗೆ ಖಾಲಿ ಚೀಲಗಳನ್ನು ಖರೀದಿಮಾಡಿ ಅವುಗಳನ್ನು 70 ಸಾವಿರ ರೂಪಾಯಿಗಳಿಗೆ ಮಾರಿದ್ದಾರೆ. ಅವೆಲ್ಲವೂ ಈಗ ತೂತು ಬಿದ್ದಿದೆ. ಅವನ್ನು ಈಗ ಖರೀದಿಮಾಡುವುದಕ್ಕಾಗುವುದಿಲ್ಲವೆಂದು ರೈಸ್ ಮಿಲ್ಲಿನವರು ಅವನ್ನು ಹಿಂದಕ್ಕೆ ಕಳುಹಿಸಿದ್ದಾರೆ. ಅಲ್ಲಿನ ಸಂಘದ ಸೆಕ್ರೆಟರಿಯವರು ಮೋಟಾರ್ ಬೈಸಿಕಲ್ಲನ್ನು ಖರೀದಿಮಾಡಲು 6 ಸಾವಿರ ರೂಪಾಯಿಗಳನ್ನು ಅಡ್ವಾನ್ಸ್ ಮಾಡುವುದಕ್ಕೆ ಇವರಿಗೆ ಅಧಿಕಾರವಿದೆಯೇ?

ಇಲ್ಲದಿದ್ದರೆ ಆ ರೀತಿಯಾಗಿ ಅವರಿಗೆ ಅಷ್ಟು ಹಣವನ್ನು ಹೇಗೆ ಕೊಟ್ಟರಿ ಎಂಬದನ್ನು ದಯಮಾಡಿ ಈ ಸಭೆಗೆ ತಿಳಿಸಬೇಕು. ಅದರ ಔಚಿತ್ಯವಾದರೂ ಏನು ? ಇಂತಹ ದುರ್ವ್ಯವಹಾರ ಅಲ್ಲಿ ನಡೆದಿದೆ. ಇನ್ನೂ ಹೆಚ್ಚು ವಿಷಯಗಳನ್ನು ವಿವರವಾಗಿ ಇದರ ಬಗ್ಗೆ ಹೇಳಬೇಕೆಂದಿದ್ದೆ ಅದಕ್ಕೆ ಹೆಚ್ಚಿಗೆ ಕಾಲಾವಕಾಶವಿಲ್ಲ. ಕೊನೆಯದಾಗಿ ಪ್ರಾಮುಖ್ಯವಾದ ಒಂದೆರಡು ವಿಷಯಗಳನ್ನು ಪ್ರಸ್ತಾಪವಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಈಗ ಕೋಅಪರೇಟಿವ್ ಬೇಡಿಕೆಗಳ ಬಗ್ಗೆ ಚರ್ಚೆ ಬಂದಿರುವುದರಿಂದ ಪ್ರಾಮುಖ್ಯವಾಗಿ ಮಾನ್ಯ ಶ್ರೀ ಕೆ. ಎಚ್. ಪಾಟೀಲ್ ಅವರಿಗೆ ಸಂಬಂಧಪಟ್ಟ ವಿಷಯದಲ್ಲಿ ಇವತ್ತು ಈ ಮಾನ್ಯ ಸಭೆಯ ಗಮನಕ್ಕೆ ತರಬಯಸುತ್ತೇನೆ, ಇದರ ಬಗ್ಗೆ ಹೇಳತಕ್ಕ ವಿಷಯಗಳು ಹೆಚ್ಚಿಗೆ ಇದ್ದರೂ ಎಲ್ಲವನ್ನೂ ಹೇಳುವುದಕ್ಕೆ ಕಾಲವಿಲ್ಲ. ಅಧ್ಯಕ್ಷರು ಗಂಟೆ ಬಾರಿಸಿಬಿಡುತ್ತಾರೆ. ನಾನು ಈಗ ರೆಡ್ಡಿ ಬ್ಯಾಂಕಿನ ವ್ಯವಹಾರದ ಬಗ್ಗೆ ಹೇಳುತ್ತೇನೆ ಹುಲುಕೋಟಿ ಮಿಲ್ಸ್‌ಗೆ ಸಂಬಂಧಪಟ್ಟದ್ದು. ಇನ್ನೊಮ್ಮೆ ಈ ಸದನ ಒಪ್ಪಿ ಕಾಲವನ್ನು ನಿಗದಿಮಾಡಿದರೆ ಅದಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಆಧಾರವಾಗಿಟ್ಟುಕೊಂಡು ಈ ಸದನದ ಒಪ್ಪಿಗೆಗೋಸ್ಕರ ಸತ್ಯಾಂಶಗಳನ್ನು ಇಡುತ್ತೇನೆಂಬ ಮಾತನ್ನು ತಮ್ಮ ಮೂಲಕ ಈ ಸದನಕ್ಕೆ ತಿಳಿಸುತ್ತಿದ್ದೇನೆ. ಇನ್ನೊಂದು ಆರೋಪವನ್ನು ಮಾನ್ಯ ಶ್ರೀ ಕೆ ಎಚ್. ಪಾಟೀಲ್ ಅವರ ಮೇಲೆ ಹೊರಿಸಬೇಕಾಗಿದೆ. ಹನುಮನಮಟ್ಟಿ ರೂರಲ್ ಯೂನಿವರ್ಸಿಟಿ ಎಂದಿದೆ. ಅದಕ್ಕೆ ಮಾನ್ಯ ಶ್ರೀ ಕೆ ಎಚ್. ಪಾಟೀಲ್ ಅವರು ಕಾರ್ಯದರ್ಶಿಯಾಗಿದ್ದರು. 1961ರಲ್ಲಿ ಅದಕ್ಕೆ ರೆಕಗ್ನಿಷನ್ ಬಂತು. 80 ಲಕ್ಷ ರೂಪಾಯಿಗಳ ಪ್ರಾಜೆಕ್ಟ್ ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಂ. ಅದಕ್ಕೆ ರೆಕಗ್ನಿಷನ್ ಬಂದಮೇಲೆ 1960-61ನೇ ಬಡ್ಜೆಟ್ಟಿನಲ್ಲಿ ಮೊದಲನೆ ಕಂತಾಗಿ 4ಲಕ್ಷ ರೂಪಾಯಿಗಳು ಚಿಲ್ಲರೆಯಷ್ಟು ಹಣವನ್ನು ಯೂನಿವರ್ಸಿಟಿಗೆ ರಿಲೀಜ್ ಮಾಡಿದರು. ಹನುಮನಮಟ್ಟಿ ಜಾಗದಲ್ಲಿ ವಾಸಿಸುತ್ತಾ ಇರತಕ್ಕ ಜನರಿಗೆ ಅನುಕೂಲಗಳನ್ನು ಒದಗಿಸಲು ಅಲ್ಲಿನ ಕೆಲವು ಹರಿಜನ ಹೌಸಿಂಗ್ ಸೊಸೈಟಿ, ಬ್ಯಾಕ್‌ವರ್ಡ್ ಕ್ಲಾಸ್ ಸೊಸೈಟಿ ಮತ್ತು ಇನ್ನೂ ಇತರ ಸೊಸೈಟಿಗಳ ಮೂಲಕ ಅಲ್ಲಿ ಬೋರ್‌ವೆಲ್ಸ್, ವೆಲ್ಸ್ ಸೌಕರ್ಯಗಳನ್ನು ಕೊಡಲು ಈ ಹಣವನ್ನು ಖರ್ಚು ಮಾಡಬೇಕೆಂದು ಕೇಂದ್ರ ಸರ್ಕಾರದವರು ಅಲಾಟ್ ಮಾಡಿದ್ದರು. ಅಲ್ಲಿ ಈ ಸೌಕರ್ಯಗಳನ್ನು ಕೊಡುವಾಗ ಕೆಲವು ಕಡೆಗಳಲ್ಲಿ ತೆರಿಗೆಗಳನ್ನೂ ಸಹ ಹಾಕಿದ್ದರು. ಅಲ್ಲಿ ಕಾಟೇಜ್ ಅಂಡ್ ವಿಲೇಜ್ ಇಂಡಸ್ಟ್ರೀಸ್ ಅನ್ನು ಸಹ ಸ್ಥಾಪನೆ ಮಾಡುವ ಯೋಜನೆಯನ್ನೂ ಹಾಕಿದ್ದರು. ಅದಕ್ಕಾಗಿ 1960-61ರಲ್ಲಿ ಸೆಂಟ್ರಲ್ ಗವರ್ನ್‌ಮೆಂಟಿನವರು ಅವರ ಬಡ್ಜೆಟ್ಟಿನಲ್ಲಿ 4 ಲಕ್ಷ ರೂಪಾಯಿಗಳನ್ನು ಈ ಬಾಬಿಗಾಗಿ ಅಲಾಟ್ ಮಾಡಿದ್ದರು. This is the first of its kind in our state. ಈ ಹಣ 1961ನೇ ಬಡ್ಜೆಟ್ ವರ್ಷದ ಕೊನೆಯ ತಿಂಗಳು ಅಂದರೆ ಮಾರ್ಚ್‌ನಲ್ಲಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಯಿತು. ಕೇವಲ ಒಂದು ವಾರದಲ್ಲಿಯೇ ಇಷ್ಟು ಕೆಲಸಗಳನ್ನು ಮಾಡಿಸಿದ್ದಾರೆ. ಅಲ್ಲಿ ಹಣ ದುರುಪಯೋಗವಾಗಿದ್ದರಿಂದ, ಸೆಂಟ್ರಲ್ ಗವರ್ನ್‌ಮೆಂಟ್ ಪೋಲೀಸಿನವರು

(ಶ್ರೀ ಎಸ್. ಬಂಗಾರಪ್ಪ)

ಅದರ ಬಗ್ಗೆ ರಿಪೋರ್ಟನ್ನು ಕಳಿಸಿದ್ದಾರೆ. This matter was completely investigated by the Delhi Special Police. ಅಡಿಟ್ ಅಬ್‌ಜಕ್ಷನ್, ಸ್ಪಾಟ್ ಇನ್ಸ್‌ಪೆಕ್ಷನ್ ರಿಪೋರ್ಟ್ ಇವಷ್ಟೂ ಇನ್‌ವೆಸ್ಟಿಗೇಷನ್ ಮಾಡಿಸಿದ ಮೇಲೆ ಶ್ರೀ ಕೆ. ಹೆಚ್. ಪಾಟೀಲರ ಮೇಲೆ ಇಲ್ಲಿನ ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಕೇಸ್ ಹಾಕಿದ್ದಾರೆ.

ಇಂಡಿಯನ್ ಪಿನಲ್‌ಕೋಡ್ ಪ್ರಕಾರ ಫಾಲ್ಸಿಫಿಕೇಷನ್ ಆಫ್ ಅಕೌಂಟ್ಸ್ ಫೋರ್ಜರಿ ಆಗುತ್ತದೆ. The case went on in the Court of the City Magistrate, Bangalore, and in that case Sri *K*. H. Patil nodoubt was acquitted. × × ×

6-00 P. M.

ಇದು ಆದ ಮೇಲೆ ರಾಜ್ಯ ಸರ್ಕಾರದವರು 350 ಎಕರೆ ಜಮೀನನ್ನು ಅವರಿಗೆ ಕೊಟ್ಟಿದ್ದಾರೆ. Though a person is acquitted from the criminal liability, civil liability, so far as other matters are concerned, continues.

MR. DEPUTY SPEAKER.—Is there a civil liability also?

SRI S. BANGARAPPA.—I want the state to initiate civil action.

MR. DEPUTY SPEAKER.—If there is an acquittal, the matter ends.

SRI KAGODU THIMMAPPA.—*No*, *No*.

MR. DEPUTY SPEAKER.—I know what is criminal and what is civil. Since it has ended in an acquittal, leave the matter at that. The hon. member cannot attribute any motive to a Court of Law.

SRI S. BANGARAPPA.—I am dealing with the civil liability.

---

xxx Expunged as ordered by the Chair.

MR. DEPUTY SPEAKER.—The hon. member himself is not clear. He just started criticising the acquittal itself.

SRI S. BANGARAPPA.—Sir, I am very clear.

SRI KAGODU THIMMAPPA.—Sir, he was just referring to the matter of acquittal. He said "however; he has been acquitted" The manner in which he was stating was not in the line of attributing motives.

SRI S. BANGARAPPA.—Sir, as lawyers we know that we cannot say anything against the judgement of the Court. Though a person is acquitted from criminal liability, from civil liability that person is not exonerated. There might be some other reason for having come to that conclusion. The State Government has got full powers to go deep into the matter. Therefore, I demand, through you, Sir, let there be a Judical enquiry to go into all these matters.

ಶ್ರೀ ಬಿ. ಬೈರಪ್ಪಾಜಿ.—1962ನೇ ಇಸವಿಯಲ್ಲಿ ನಡೆದಂತಹ ಪ್ರಕರಣ ಕೋರ್ಟಿನಲ್ಲಿ ಅಕ್ವಿಟ್ ಆಗಿದೆ ಎಂದು ಅವರು ಹೇಳುತ್ತಾರೆ. ಹಾಗಾದರೆ ಒಬ್ಬ ಗೌರವಾನ್ವಿತ ಸದಸ್ಯರನ್ನು ಅಪಮಾನ ಮಾಡತಕ್ಕದ್ದು ಸರಿಯಾದ್ದಲ್ಲ. ಅದನ್ನು ಎಕ್ಸ್‌ಪಂಜ್ ಮಾಡಿಸಬೇಕು.

ಶ್ರೀ ಎಚ್. ಡಿ. ದೇವೇಗೌಡ.....ಕೋ-ಆಪರೇಟೀವ್ ಡಿಪಾರ್ಟ್‌ಮೆಂಟಿನಲ್ಲಿ ಹಣ ದುರುಪಯೋಗ ಆಗಿರುವುದು ಇದು ಒಂದೇ ಅಲ್ಲ. ಅನೇಕ ಉದಾಹರಣೆಗಳು ಇವೆ. He is quoting one instance. There are several cases wherein large sums of money has been involved and on the charge-sheets filed by the police Department acquittal has taken place. ಇಂಥಾ ಕೇಸುಗಳಲ್ಲಿ ಡಿಪಾರ್ಟ್‌ಮೆಂಟ್ ಅಕ್ಷನ್ ತೆಗೆದುಕೊಳ್ಳುವುದರಲ್ಲಿ ಸರ್ಕಾರ ವಿಮುಖವಾದರೆ ಆ ಹಣಕ್ಕೆಲ್ಲಾ ತಿಲಾಂಜಲಿಯನ್ನು ಅರ್ಪಿಸಬೇಕಾಗುತ್ತದೆ. Civil liability must be taken, ಇವೊತ್ತು ರಾಜ್ಯದಲ್ಲಿ ಈ ಒಂದು ಸಹಕಾರಿ ರಂಗದಲ್ಲಿ ಇಷ್ಟೊಂದು ಹಣವನ್ನು ತೊಡಗಿಸಿರುವಾಗ ಕ್ರಿಮಿನಲ್ ಮೊಕದ್ದಮೆಗಳು ಹೋಗಿ ಎಂದು ಸಿವಿಲ್ ಪ್ರಕಾರವೆ ಕ್ರಮ ಮುಂದುವರಿಸದೆ ಅದನ್ನು ಕೈಬಿಡುತ್ತೇವೆ ಎಂದರೆ ಪೂರ್ಣವಾಗಿ ಹಣವನ್ನು ಕಳೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಸಿವಿಲ್ ಲಯಬಿಲಿಟಿ ನಿಗದಿ ಮಾಡಿ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ಬಿ ಬೈರಪ್ಪಾಜಿ.—ಇದು 1961ನೇ ಇಸ್ವಿಯಲ್ಲಿ ನಡೆದಂಥ ಪ್ರಕರಣ. ಇಲ್ಲಿಯುವರೆಗೆ ಎಷ್ಟೋ ಸರ್ಕಾರಗಳು ಉರುಳಿಹೋಗಿವೆ. ಇಲ್ಲಿಯುವರೆಗೂ ಆ ಸರ್ಕಾರಗಳು ಏನು ಮಾಡುತ್ತಿದ್ದವು ? ಅದನ್ನು ತಾವು ಸ್ವಲ್ಪ ಆಲೋಚನೆ ಮಾಡಬೇಕು.

MR. DEPUTY SPEAKER.—I shall have to be careful in alloting time. The hon. member Sri Bangarappa committed himself that he would not take more than two minutes. The Hon. Leader of the Opposition had also told me that the hon. member shou'd be given time. We will have to allot party-wise time and that is the spirit of Parliamentary democracy. I think the hon. member has finished his speech.

SRI S. BANGARAPPA.—Not yet Sir. I will take only one or two minutes more.

MR. DEPUTY SPEAKER.—His sentences may be short ~~and~~ he may finish it within two minutes. Is the hon. member going to use only short sentences ?

SRI S. BANGARAPPA.—This is very difficult to answer.

ಮಾನ್ಯ ಅಧ್ಯಕ್ಷರೇ, ನನ್ನ ಅಭಿಪ್ರಾಯ ಇಷ್ಟೇನೆ. ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರಾದ ಮಾನ್ಯ ದೇವೇಗೌಡರವರು ಹೇಳಿದ ಹಾಗೆ ಹಲವಾರು ಕಡೆ ಇಂಥ ಘಟನೆಗಳು ನಡೆದಿವೆ. ಕಾನೂನು ಪ್ರಕಾರ ಸಿವಿಲ್ ಲಯಬಿಲಿಟಿ ಬಿಟ್ಟು ಬಿಟ್ಟರೆ ಲಕ್ಷಾಂತರ ರೂಪಾಯಿ, ಕೋಟ್ಯಾಂತರ ರೂಪಾಯಿಗಳನ್ನು ಕಳೆದುಕೊಳ್ಳಬೇಕಾಗುತ್ತದೆ. Please take that stand. I am not very particular about this case. ಸಂದರ್ಭ ಬಂದಾಗ ಇದನ್ನು ಯೋಚನೆ ಮಾಡಬೇಕಾಗುತ್ತದೆ ಇದು ಸರ್ಕಾರದವರ ಪ್ರಶ್ನೆಯಾಗಿದೆ. ದಯವಿಟ್ಟು ತಾವು ಇದನ್ನು ತೆಗೆದುಕೊಳ್ಳಬೇಕು. ಇವತ್ತು ಅಧಿಕಾರದಲ್ಲಿ ತಾವೇ ಇರಲಿ ಮತ್ತೊಬ್ಬರೇ ಇರಲಿ ಒಂದು ಕಾನೂನು ಇಟ್ಟುಕೊಳ್ಳಿ, ಒಂದು ಸೆಕ್ಷನ್ ಇಟ್ಟುಕೊಂಡು ವಿಚಾರ ಮಾಡಿ. ಕ್ರಿಮಿನಲ್ ಜಡ್ಜ್‌ಮೆಂಟ್ ಕೊಟ್ಟ ಮೇಲೆ ಸಿವಿಲ್ ಹೊಣೆ ಬಗ್ಗೆ ಸರ್ಕಾರದವರೇ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆದುದರಿಂದ ಮಾನ್ಯ ಅಧ್ಯಕ್ಷರೇ ಮೊನ್ನೆ ಕೂಡ ನಾನು ಒಂದು ವಿಷಯ ಹೇಳುತ್ತಿದ್ದೆ. ದಾವಣಗೆರೆಯಲ್ಲಿ ಪ್ರಾಪರ್ಟಿಯನ್ನು ಖರೀದಿ ಮಾಡಿದಾಗ, Conversion of this black money into white

ಹೇಗೆ ನಡೆದಿದೆ ಎಂದು ಹೇಳಿದಾಗ ಡಾಕ್ಯುಮೆಂಟ್ ಕೊಡಿ ಎಂದು ಹೇಳಿದರು. ಅನೇಕ ವಿಷಯಗಳನ್ನು ಇಲ್ಲಿ ಈ ಸದನದಲ್ಲಿಯೇ ಹೇಳುವುದಕ್ಕೆ ಆಗುವುದಿಲ್ಲ. ಅದಕ್ಕೋಸ್ಕರ ತಮ್ಮ ಮೂಲಕ ಕೇಳಿಕೊಳ್ಳುವುದೇನೆಂದರೆ ಸರಿಯಾಗಿ ವಿಚಾರಣೆಯನ್ನು ನಡೆಸಲು ಒಂದು ಜುಡಿಶಿಯಲ್ ಸಮಿತಿ ಮಾಡಿ, ಅಲ್ಲಿ ನಾವು ಎಲ್ಲಾ ವಿಷಯಗಳನ್ನು ಇಡುವುದಕ್ಕೆ ಸಿದ್ಧರಿದ್ದೇವೆ. ಅಲ್ಲಿ ತೀರ್ಮಾನ ಕೊಟ್ಟು ಮಾನ್ಯ ಪಾಟೀಲ್‌ರವರು ನಿರ್ದೋಶಿ ಎನ್ನತಕ್ಕಂಥದ್ದನ್ನು ಹೇಳಿದರೆ ನಾನು ಒಪ್ಪುತ್ತೇನೆ. ಅಲ್ಲಿಯವರೆಗೆ ಚಾರ್ಜ್‌ಸ್‌ಗಳು ಇರುತ್ತವೆ He is answerable and Government is answerable for having not taken any action about civil liabilities ಇಷ್ಟು ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

‡ ಶ್ರೀ ಆರ್. ಗುಂಡೂರಾವ್ (ವಾರ್ತಾ ಮತ್ತು ಯುವಜನ ಸೇವಾ ಶಾಖೆಗಳ ರಾಜ್ಯ ಮಂತ್ರಿಗಳು) :—ಮಾನ್ಯ ಅಧ್ಯಕ್ಷರೇ ಮೊಟ್ಟಮೊದಲನೆಯದಾಗಿ ನಮ್ಮ ಸನ್ಮಾನ್ಯ ಸದಸ್ಯರೆಲ್ಲರನ್ನೂ ನಾನು ಅಭಿನಂದಿಸಬೇಕಾಗಿದೆ. ಏತಕ್ಕೆಂದರೆ ಮಾತನಾಡಿದಂಥ ಎಲ್ಲಾ ಸದಸ್ಯರೂ ಸಹಕಾರ ಇಲಾಖೆಯ ಮೇಲೆ ಮಾತನಾಡುತ್ತಾ ನನ್ನ ಕ್ಷೇತ್ರವಾದ ಈ ಯುವಜನ ಸೇವೆ ಮತ್ತು ವಾರ್ತಾ ಇಲಾಖೆಯ ಬಗ್ಗೆ ಯಾರೂ ಟೀಕೆ ಮಾಡಲಿಲ್ಲ ಎರಡನೆಯದಾಗಿ ಕೆಲವು ಸದಸ್ಯರು ಕೆಲವೊಂದು ಒಳ್ಳೆಯ ಸಲಹೆಗಳನ್ನೂ ಕೊಟ್ಟಿದ್ದಾರೆ. ಯುವಜನ ಸೇವೆಯ ಬಗ್ಗೆ ಎರಡು ಮಾತುಗಳನ್ನಾಡಿ ಆಮೇಲೆ ವಾರ್ತಾ ಇಲಾಖೆಗೆ ಬರುತ್ತೇನೆ. ಈ ಯುವಜನ ಸೇವೆಯ ವಿಷಯದಲ್ಲಿ ಹೇಳುವುದಾದರೆ ಎಲ್ಲಾ ಸಂಪತ್ತುಗಳಿಗಿಂತಲೂ ಹೆಚ್ಚಿನ ಸಂಪತ್ತು ಎಂದರೆ ಈ ಯುವಜನ ಸೇವೆ ಅದರಲ್ಲೂ ಯುವಕರು ಎಂದರೆ ಅವರು ಮುಂದೆ ಈ ದೇಶದ ಹೆಚ್ಚಿನ ಜವಾಬ್ದಾರಿಯನ್ನು ಹೊರುವಂಥವರು, ಅವರಿಗೆ ನಾವು ಸಾಕಷ್ಟು ಸಹಾಯ ಮಾಡಬೇಕಾಗಿದೆ. ಹಾಗೂ ಸರ್ಕಾರ ಎಲ್ಲಾ ತರಹದ ಬೆಂಬಲವೂ ನೀಡಬೇಕಾಗಿದೆ.

ಶ್ರೀ ಕೋಣಂದೂರು ಲಿಂಗಪ್ಪ ;—ಅದೇ ಕೈಯಲ್ಲಿ ಸೈಕಲ್ ಚ್ಯೆನು, ಚಾಕು ಚೂರಿ....

ಶ್ರೀ ಆರ್. ಗುಂಡೂರಾವ್ :—ಅದನ್ನೇ ನೀವು ಮಾಡಿಸಿದ್ದಿರಿ, ಅದನ್ನು ತಪ್ಪಿಸಬೇಕು ಎಂದು ಈ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಕೈಯಲ್ಲಿ ಚಾಕು ಚೂರಿ ಸೈಕಲ್ ಚೈನ್ ಹಿಡಿದಿದ್ದಂಥವರ ಕೈಗೆ ಹಾಕಿ, ಕ್ರಿಕೆಟ್, ವಾಲಿ ಬಾಲ್, ಬ್ಯಾಡ್‌ಮಿಂಟನ್ ಕೊಟ್ಟು ಅವರ ಮನಸ್ಸನ್ನು ಬೇರೆ ಕಡೆಗೆ ಒಂದು ರಚನಾತ್ಮಕವಾದ ಕಡೆಗೆ ತೆಗೆದುಕೊಂಡು ಹೋಗುವುದೇ ಈ ಯುವಜನ ಸೇವಾದ

(ಶ್ರೀ ಆರ್. ಗುಂಡೂರಾವ್)

ಮುಖ್ಯ ಉದ್ದೇಶ. ಕಳೆದ ಒಂದು ವರ್ಷದಿಂದ ಬಹುಶಃ ಹಿಂದಿನ ಎಲ್ಲಾ ವರ್ಷಗಳಿಗಿಂತಲೂ ಸಾಕಷ್ಟು ಸಾಧಿಸಿದ್ದೇವೆಂದು ಬಹಳ ಹೆಮ್ಮೆಯಿಂದ ತಮ್ಮ ಮುಂದೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಜೊತೆಗೆ ಇನ್ನೊಂದು ದೊಡ್ಡ ಸಂತೋಷದ ಸಂಗತಿ ಅದನ್ನು ತಾವು ಒಪ್ಪಿಕೊಳ್ಳುತ್ತೀರಿ. ಅದರಲ್ಲಿ ಯಾರದೂ ಭಿನ್ನಾಭಿಪ್ರಾಯವಿರಲಾರದೆಂದು ಕಾಣುತ್ತದೆ. ಮೊನ್ನೆ ತಾನೇ ನಡೆದಂಥ ನಮ್ಮ ಅಖಿಲಭಾರತ ಕುಸ್ತಿ ಪಂದ್ಯದಲ್ಲಿ ಗೆದ್ದಂಥ ನಮ್ಮ ಬೆಳಗಾಂ ನ ಶ್ರೀ ಚಂಬಾ ಮುತ್ತನಾಳ್‌ರವರ ತಂದೆತಾಯಿಗಳಿಗೆ 5 ಸಾವಿರ ರೂಪಾಯಿ ನಗದು ಬಹುಮಾನದ ಜೊತೆಗೆ 20 ಎಕರೆ ಜಮೀನು ಬೆಳಗಾಂನಲ್ಲಿ ಕೊಡಬೇಕೆಂದು ಸರ್ಕಾರ ಈಗಾಗಲೇ ತೀರ್ಮಾನವನ್ನು ತೆಗೆದುಕೊಂಡಿದೆ. ಇದರ ಜೊತೆಗೆ ಈ ದಿನ ನಿಮಗೆ ಇನ್ನೊಂದು ಸಂತೋಷದ ವಿಷಯ ಹೇಳುವುದಕ್ಕೆ ಇಚ್ಛೆಪಡುತ್ತೇನೆ ನಮ್ಮ ಭಾರತದ ಹಾಕಿ ಚಾಂಪಿಯನ್ಸ್ ವಿಶ್ವದಲ್ಲಿಯೇ ಹಾಕಿಪಂದ್ಯದಲ್ಲಿ ಗೆದ್ದು ಬಂದಿದ್ದಾರೆ, ಆ ಟೀಮಿನಲ್ಲಿರತಕ್ಕಂಥ ಆಟಗಾರರ ತಂದೆತಾಯಿಗಳಿಗೆಲ್ಲಾ 2 ಸಾವಿರ ಬಹುಮಾನವನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಇದರ ಜೊತೆಗೆ ವಿಶ್ವದ ಹಾಕಿ ಪಂದ್ಯದಲ್ಲಿ ಆಡಿದಂಥವರು ಯಾರಿದ್ದಾರೆ ಅವರನ್ನು ಬೆಂಗಳೂರಿಗೂ ಕರೆಸಿ ಇಲ್ಲಿ ಒಂದು ಟೆಸ್ಟ್ ಮ್ಯಾಚನ್ನು ಆಡಿಸಿ ನಮ್ಮ ಕರ್ನಾಟಕದವರೂ ಆ ಒಂದು ಆಟವನ್ನು ನೋಡುವಂಥ ಅವಕಾಶವನ್ನು ಕಲ್ಪಿಸಿ ಕೊಟ್ಟು ಆ ಒಂದು ಸಮಯದಲ್ಲಿಯೇ ಅವರಿಗೆ ಆ ಬಹುಮಾನವನ್ನು ಅವರಿಗೆ ಕೊಡಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ.

Madam Speaker in the Chair

ಅಧ್ಯಕ್ಷರೇ ನಗರಗಳಲ್ಲಿ ಆಟಗಳ ಪ್ರಗತಿ ಆಗುವುದಕ್ಕಿಂತ ಹೆಚ್ಚಾಗಿ ಗ್ರಾಮಗಳಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಈ ಆಟೋಟಗಳು ಹೆಚ್ಚಾಗಿ ಆಗಬೇಕಾಗಿದೆ. ಅದರಲ್ಲೂ ನಾವು ನಿರೀಕ್ಷಿಸಿದಷ್ಟು ಮಟ್ಟದ ಪ್ರಗತಿಯನ್ನು ನಿಧಾನವಾಗಿ ಸಾಧಿಸುತ್ತಿದ್ದೇವೆ. ಹೆಚ್ಚಿನ ಮಟ್ಟದಲ್ಲಿ ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧ್ಯವಾಗಿಲ್ಲ. ಆದರೂ ಸಹ ಜಿಲ್ಲಾಮಟ್ಟದಲ್ಲಿ ಯುವಜನ ಮಂಡಳಿಯ ಜಿಲ್ಲಾಧಿಕಾರಿಗಳು, ಅಧ್ಯಕ್ಷರಾಗಿದ್ದಾರೆ ಅವರಿಗೆ ಅಲ್ಲಿ ಯುವಜನ ಕ್ಲಬ್‌ಗಳಿಗೆ ಸಾಕಷ್ಟು ಧನಸಹಾಯವನ್ನು, ಅವರಿಗೆ ಅಲ್ಲಿಯ ಯಾವುದೇ ತರಹದ ಆಟವಾಡಲಿ, ವಾಲಿಬಾಲ್, ಬ್ಯಾಡ್ಮಿಂಟನ್, ಕ್ರಿಕೆಟ್ ಯಾವುದೇ ಆಟವಾಡಲಿ ಅವರಿಗೆ ಹೆಚ್ಚಿನ ಸಹಾಯ ಮಾಡಬೇಕಾಗಿದೆ. ಮತ್ತು ಆಟೋಟಗಳ ಸಾಮಗ್ರಿಗಳನ್ನೂ ಸಹ ಒದಗಿಸಿ ಕೊಡಬೇಕಾಗಿದೆಯೆಂದು ಹೇಳುವಂಥ ಯೋಜನೆಗಳನ್ನು ಈಗಾಗಲೇ ಹಾಕಿಕೊಂಡಿದ್ದೇವೆ. ಸಾಧಾರಣವಾಗಿ 6 ಸಾವಿರ ಈ ತರಹದ ಕ್ಲಬ್‌ಗಳು ನಮ್ಮ ರಾಜ್ಯದಲ್ಲಿವೆ. ನಮಗೆ

ನಿಮಗೆ ಗೊತ್ತಿರುವ ಹಾಗೆ ಹಣಕಾಸಿನ ಪರಿಸ್ಥಿತಿ ಸ್ವಲ್ಪ ಕಷ್ಟದ ಪರಿಸ್ಥಿತಿ ಇದೆ. ನಾವು ಏನು ಯೋಜನೆಗಳನ್ನು ಮಾಡಿದ್ದೇವೆ ಆ ರೀತಿ ಸಹಾಯ ಮಾಡುವುದಕ್ಕೆ ಆಗದೇ ಹೋದರೂ ಅವರಿಗೆ ಕಟ್ಟಡವನ್ನು ಕಟ್ಟುವುದಕ್ಕೋಸ್ಕರ 4 ನೂರು ರೂಪಾಯಿಗಳನ್ನು ಕೊಡುವುದರ ಜೊತೆಗೆ ಆಟದ ಸಾಮಗ್ರಿಗಳನ್ನು ಕೂಡ ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಒದಗಿಸಿ ಕೊಡಲು ಕಾರ್ಯಕ್ರಮವನ್ನು ಹಾಕಿ ಕೊಂಡಿದ್ದೇವೆ. ಈಗಾಗಲೇ ಬೇಕಾದಷ್ಟು ಸಹಾಯವನ್ನು ಮಾಡುತ್ತಿದ್ದೇವೆ. ಜೊತೆಗೆ ಈ ಯುವಜನರು ಯಾರೇ ಆಗಲೀ ಕರ್ನಾಟಕದಲ್ಲಿ, ಅವರು ರಾಜ್ಯಮಟ್ಟದಲ್ಲಿ, ರಾಷ್ಟ್ರಮಟ್ಟದಲ್ಲಿಯಾಗಲೀ ಒಳ್ಳೆಯ ಹೆಸರನ್ನು ಪಡೆದು ಕರ್ನಾಟಕಕ್ಕೆ ಕೀರ್ತಿಯನ್ನು ತರುತ್ತಾರೆ ಅಂಥ ಆಟಗಾರರಿಗೂ ಸಹ ಒಂದು ಸಾವಿರ ರೂಪಾಯಿಗಳ ಬಹುಮಾನವನ್ನು ರಾಜ್ಯ ಸರ್ಕಾರದವರು ಕೊಡಬೇಕೆಂದು ಮಾಡಿದೆ. ಅವರ ಉದ್ದೇಶ ಯಾವುದೇ ಒಂದು ದೇಶ ಐಶ್ವರ್ಯವಂತ ರಾಷ್ಟ್ರವಾಗಿರಲಿ, ಎಷ್ಟೇ ಕಾರ್ಖಾನೆಗಳು, ಎಷ್ಟೇ ಅಭಿವೃದ್ಧಿ ಹೊಂದಿದ್ದರೂ ಆ ದೇಶ ಆರೋಗ್ಯದ ದಿಶೆಯಲ್ಲಿ, ಆಟಪಾಠಗಳಲ್ಲಿ ಹೇಗೆ ಮುಂದುವರಿದಿದೆ ಎನ್ನುವುದನ್ನು ನೋಡಬೇಕಾಗುತ್ತದೆ. ಅಮೇರಿಕಾ ದೇಶದವರು ಎಷ್ಟೇ ಮುಂದುವರಿದಿದ್ದರೂ ಸ್ಪೋರ್ಟ್ಸ್‌ಗಳಲ್ಲಿ ಅವರ ಕಣ್ಣು, ರಷ್ಯಾ, ಜಪಾನ್ ಮತ್ತಿತರ ದೇಶಗಳ ಮೇಲೆ ಇರುತ್ತದೆ ಏತಕ್ಕೆಂದರೆ ಹೆಚ್ಚಿನ ರೀತಿಯಲ್ಲಿ ಈ ದೇಶಗಳು ಆಟಗಳಲ್ಲಿ ಭಾಗವಹಿಸುತ್ತಾರೆ ಮತ್ತು ಅತಿ ಹೆಚ್ಚಿನ ಬಹುಮಾನಗಳನ್ನು ಪಡೆಯುತ್ತಿದ್ದಾರೆ ಇದರಿಂದ ಅವರು ಶಕ್ತಿವಂತರಾಗಿ, ಆರೋಗ್ಯವಂತರಾಗಿ 100-150 ವರ್ಷಗಳ ಕಾಲ ಬದುಕಿರುತ್ತಾರೆ. ಆದರೆ ನಾವು 50 ವರ್ಷಗಳ ಕಾಲ ಕಳೆದ ಮೇಲೆ ಯಾವುದಾದರೂ ವಿಧಾನ ಸಭೆಯಲ್ಲಿ, ಅಂಗಡಿಯಲ್ಲಿ, ಮಾರ್ಕೆಟ್‌ನ ಹತ್ತಿರ ಹೋಗಿ ಆರೋಗ್ಯವನ್ನು ಸಂಪಾದನೆ ಮಾಡಿಕೊಂಡು ಬರುತ್ತೇವೆಂದರೆ ಅದು ಸಾಧ್ಯವಾಗುವುದಿಲ್ಲ.

ಆರೋಗ್ಯವನ್ನು ಸಂಪಾದನೆ ಮಾಡಬೇಕಾದರೆ ಅದು ಯುವಕರ ವಯಸ್ಸಿನಲ್ಲಿ ಮಾತ್ರ ಸಾಧ್ಯ. ಯುವಕರಿಗೆ ಆರೋಗ್ಯ ಚೆನ್ನಾಗಿರುತ್ತದೆ. ಅವರು ಯಾವ ಕೆಲಸಗಳನ್ನು ಮಾಡಲಿ ಯಾವ ಕೆಲಸಗಳನ್ನು ಬೇಕಾದರೂ ಮಾಡುವಂಥ ಧೈರ್ಯ, ಶಕ್ತಿ ಅವರಲ್ಲಿರುತ್ತದೆ. ಇಂಥ ಒಂದು ಆರೋಗ್ಯ ಬರಬೇಕಾದರೆ ಅದು ಚಿಕ್ಕ ವಯಸ್ಸಿನಲ್ಲಿ, ವಿದ್ಯಾರ್ಥಿ ದೆಸೆಯಲ್ಲಿ ಬರಬೇಕೇ, ಹೊರತು ಯಾವುದೋ ಒಂದು ಸಮಯದಲ್ಲಿ ನಾನು ಆರೋಗ್ಯವನ್ನು ಸಂಪಾದನೆ ಮಾಡುತ್ತೇನೆಂದರೆ ಸಾಧ್ಯವಿಲ್ಲ. ಆದ್ದರಿಂದಲೇ ಇಂಥ ಒಂದು ಆರೋಗ್ಯವನ್ನು ಸಂಪಾದನೆ ಮಾಡಬೇಕಾದರೆ ಯುವಕರಿಗೆ ಹೆಚ್ಚಿನ ಬೆಂಬಲ, ಸ್ಫೂರ್ತಿಯನ್ನು ನಾವು ಕೊಡಬೇಕು. ಈ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರು ಹೇಳಿರುವುದು ಹೇಳಿದರೆ ತಪ್ಪಾಗಲಿಕ್ಕಿಲ್ಲ. "When wealth is lost nothing is lost. When health is lost some thing is lost. When character is lost ever-thing is lost" ಅಂತ ಹೇಳಿದ್ದಾರೆ ಆದರೆ ನನ್ನ ದೃಷ್ಟಿಯಲ್ಲಿ Even when character is lost ಅದನ್ನು ತಿದ್ದಿಕೊಳ್ಳಬಹುದು. ಏನೋ ಒಂದು

(ಶ್ರೀ ಆರ್. ಗುಂಡೂರಾವ್)

ಸಮಯದಲ್ಲಿ ಗೊತ್ತಿಲ್ಲದೆ ತಪ್ಪು ಮಾಡಿದ್ದರೆ ಅದನ್ನು ನಾವು ತಿದ್ದಿಕೊಳ್ಳಬಹುದು. ಅದರೆ When health is lost everything is lost. Health is more important. ಯಾವ ಮನುಷ್ಯನ ಆರೋಗ್ಯ ಕೆಟ್ಟು ಹೋಯಿತು, ಆತನಿಗೆ ಮಗ ಬೇಕಿಲ್ಲ, ಹೆಂಡತಿಗೆ ಗಂಡ ಬೇಕಿಲ್ಲ, ಗಂಡಗೆ ಹೆಂಡತಿ ಬೇಕಿಲ್ಲ. ಏಕೆಂದರೆ, Health is more important. ಆರೋಗ್ಯವನ್ನು ಸಂಪಾದಿಸಬೇಕಾದರೆ, ಯೂತ್ ಮೂವ್‌ಮೆಂಟ್ ಬಹಳ ಮುಖ್ಯವಾದುದು. ಯುವಕರಿಗೆ ಚಾಕು, ಚೈನು ಮುಂತಾದುವುಗಳನ್ನು ಕೊಡುವುದು ಅಲ್ಲ. ಕ್ರಿಕೆಟ್, ಫುಟ್‌ಬಾಲ್ ಕುಸ್ತಿ ಮುಂತಾದ ಆಟಗಳನ್ನು ಆಡಿಸಿ ಒಳ್ಳೆಯ ಯುವಕರನ್ನು ತಯಾರು ಮಾಡಿದರೆ ಯುವಕರಲ್ಲಿ ಒಂದು ಶಿಸ್ತು ಬರುತ್ತದೆ, ಅಗ ದೇಶವೂ ಸುಭದ್ರವಾಗಿರುತ್ತದೆ. ನಾಳೆ ಮಾನ್ಯ ಲಿಂಗಪ್ಪನವರ ಮಕ್ಕಳು ಆಟದಲ್ಲಿ ಗೆದ್ದರೆ ಎಷ್ಟು ಸಂತೋಷ ಪಡುತ್ತಾರೆ? ಆದ್ದರಿಂದಲೇ ಆರೋಗ್ಯವನ್ನು ಚೆನ್ನಾಗಿ ಬೆಳೆಸಿಕೊಳ್ಳುವುದಕ್ಕೋಸ್ಕರ ಯುವಜನ ಸೇವೆಯ ಮೂಲಕ ಯುವಕರಿಗೆ ಸ್ಫೂರ್ತಿಯನ್ನು ಒದಗಿಸಲು ಸಾಧ್ಯವಾಗುತ್ತದೆ. ಈ ದಿಸೆಯಲ್ಲಿ ನಮ್ಮ ಸರ್ಕಾರದವರು ಬಡ್ಜೆಟ್ಟಿನಲ್ಲಿ ಈ ಒಂದು ಬಾಬಿಗೆ ಎಷ್ಟು ಹಣವನ್ನು ಒದಗಿಸಿದ್ದಾರೆ ಅದು ತೀರಾ ಕಡಿಮೆ. ಎಲ್ಲಾ ಇಲಾಖೆಗಳಿಗಿಂತ ಹೆಚ್ಚಾಗಿ ಇದಕ್ಕೆ ಹಣ ಒದಗಿಸಬೇಕು. ವಿದ್ಯಾ ಇಲಾಖೆಗೆ ಸರ್ಕಾರದವರು 80 ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ, ಜನರಲ್ ಅಡ್ಮಿನಿಸ್ಟ್ರೇಷನ್ ಇಲಾಖೆಗೆ ಹಲವಾರು ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ದೇಶದ ಭವಿಷ್ಯದ ದೃಷ್ಟಿಯಿಂದ ರಾಜ ಮಹಾರಾಜರುಗಳ ಕಾಲದಿಂದಲೂ ಈ ಆಟಪಾಠಗಳಿಗೆ ಪ್ರೋತ್ಸಾಹ ಕೊಟ್ಟು ಕುಸ್ತಿ ಆಟ, ಪಂದ್ಯಗಳನ್ನು ಏರ್ಪಾಡು ಮಾಡುತ್ತಿದ್ದರು ಅನೇಕ ಜನರನ್ನು ಆಹ್ವಾನ ಮಾಡುತ್ತಿದ್ದರು. ಅವರಿಗೆ ಸಾಕಷ್ಟು ಬಹುಮಾನಗಳನ್ನು, ಹುಂಬಳಿಗಳನ್ನು ಕೊಡುತ್ತಿದ್ದರು. ಇದರ ಉದ್ದೇಶ, ದೇಶದಲ್ಲಿ ಒಳ್ಳೆಯ ಶಕ್ತಿಯುತವಾದ ಜನರು ಹೆಚ್ಚಾಗಬೇಕು, ಯುವಕರು ಆರೋಗ್ಯವಂತರಾಗಿರಬೇಕು ಅವರು ಎಲ್ಲಾ ತರಹದ ಕೆಲಸಗಳನ್ನು ಮಾಡಲಿಕ್ಕೆ ಸಾಧ್ಯ ಎನ್ನುವುದು. ಈ ಬಗ್ಗೆ ಮಾನ್ಯ ಸದಸ್ಯರುಗಳು ಏನು ಸಲಹೆಗಳನ್ನು ಕೊಟ್ಟಿದ್ದಾರೆ ಅದನ್ನು ಈಗಾಗಲೇ ನಮ್ಮ ಕಾರ್ಯಕ್ರಮದಲ್ಲಿ ಹಾಕಿಕೊಂಡಿದ್ದೇವೆ. ಕರ್ನಾಟಕಕ್ಕೆ ಒಳ್ಳೆಯ ಹೆಸರು ಬರಬೇಕು. ಕರ್ನಾಟಕದವರು ಈಗತಾನೆ ರಾಷ್ಟ್ರೀಯ ಕಬಾಡಿ ಪಂದ್ಯದಲ್ಲಿ ಗೆದ್ದು ಬಂದಿದ್ದಾರೆ. ಈ ಎಲ್ಲಾ ಆಟಗಳು ನಮ್ಮ ದೇಶದಲ್ಲಿ, ಗ್ರಾಮಾಂತರ ಪ್ರದೇಶದ ಜನ ಆಡುತ್ತಿದ್ದಂಥ ಆಟಗಳು. ಕ್ರಿಕೆಟ್ ಆಟ, ಇದನ್ನು ಹಿಂದೆ ನಮ್ಮ ಜನ ಲಗ್ಗೆ ಆಟ ಎಂದು ಆಡುತ್ತಿದ್ದರು. ಹಾಕಿ ಇದೂ ಕೂಡ ಗ್ರಾಮಾಂತರದಲ್ಲಿ ಕೋಲನ್ನು ಹಿಡಿದುಕೊಂಡು ಜನರು ಆಟವಾಡುತ್ತಿದ್ದರು. ಜನರಲ್ಲಿ ಆರ್ಥಿಕ ಪರಿಸ್ಥಿತಿ ಮುಂದುವರಿದ ಹಾಗೆ ಪರದೇಶದ ಮಾದರಿಯಲ್ಲಿ

ನಮ್ಮ ಆಟಗಳನ್ನೇ ಆಡುತ್ತಿದ್ದೇವೆ. ಹಾಕಿ ಚಾಂಪಿಯನ್‌ಷಿಪ್, ಭಾರತಕ್ಕೆ ಇಲ್ಲವೇ ಪಾಕಿಸ್ತಾನಕ್ಕೆ ಹೋಗುತ್ತಿದೆ. ಬೇರೆ ಯಾವ ರಾಷ್ಟ್ರದವರು ಇದನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಇಂಥ ಆಟಗಳಿಗೆ ನಾವು ಬೆಂಬಲ ಕೊಟ್ಟು ಯುವಕರನ್ನು ಬಲಿಷ್ಟರನ್ನಾಗಿ ಮಾಡಬೇಕಾಗಿದೆ. ಮಾನ್ಯ ಹನುಮೇಗೌಡರಿಗೆ ಗೊತ್ತು ಹಾಸನ ಜಿಲ್ಲೆಯಲ್ಲಿ ವಾಲೀಬಾಲನ್ನು ಎಷ್ಟರ ಮಟ್ಟಿಗೆ ಆಡುತ್ತಾರೆಂದು ನಿಜವಾಗಿಯೂ ಅವರಿಗೆ ಸರಿಯಾದ ತರಬೇತಿ ಕೊಟ್ಟು ಬೆಂಬಲ ನೀಡುವುದು ಒಳ್ಳೆಯದು. ಇಲ್ಲದೇ ಹೋದರೆ ಅವರು ರಾಜ್ಯಮಟ್ಟದಲ್ಲಿ, ರಾಷ್ಟ್ರಮಟ್ಟದಲ್ಲಿ ಈ ಆಟಗಳಲ್ಲಿ ಭಾಗವಹಿಸಲು ಸಾಧ್ಯವಾಗಲಿಕ್ಕಿಲ್ಲ. ಶಕ್ತಿಯುತವಾಗಿ ಬಾಲನ್ನು ಹೊಡೆದರೆ ಬಾಲ್ ಬರ್ಸ್ಟ ಆಗತಕ್ಕ ರೀತಿಯಲ್ಲಿ ಹೊಡೆಯುವಂಥ ಯುವಕರು ಇದ್ದಾರೆ. ಅವರಿಗೆ ತರಬೇತಿ ಮುಖ್ಯವಾಗಿ ಬೇಕು. ಗ್ರಾಮಾಂತರಗಳಲ್ಲಿಯೂ ಹಾಗೂ ತಾಲ್ಲೂಕು ಮಟ್ಟದಲ್ಲಿ ಪಂದ್ಯಗಳನ್ನು ಏರ್ಪಡಿಸಬೇಕು. ಬೆಂಗಳೂರಿನಲ್ಲಿ ಪಂದ್ಯಗಳನ್ನು ಏರ್ಪಡಿಸಿದರೆ ಹಳ್ಳಿಯ ಜನರ ಅಲ್ಲಿಂದ ಇಲ್ಲಿಗೆ ಬಂದು ನೋಡಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಪಂದ್ಯಗಳನ್ನು ಜಿಲ್ಲಾ ಕೇಂದ್ರಗಳಲ್ಲಿ ಏರ್ಪಡಿಸುವುದು ಸೂಕ್ತ ಎಂದು ತಿಳಿದಿದ್ದೇವೆ ಇದರಿಂದ ಅಲ್ಲಿಯ ತರುಣರಿಗೆ ಬೆಂಬಲವನ್ನು ಕೊಡುವುದಲ್ಲದೆ ಅವರು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಆಟಗಳಿಗೆ ಭಾಗವಹಿಸುವುದಕ್ಕೂ ಅವಕಾಶವಾಗುತ್ತದೆ. ನಾನು ಅಂತರ ರಾಷ್ಟ್ರೀಯ ಮಟ್ಟದಲ್ಲಿ ನಡೆಯತಕ್ಕ ಕುಸ್ತಿ ಪಂದ್ಯವನ್ನು ನೋಡುವುದಕ್ಕೆ ಪರ ದೇಶಕ್ಕೆ ಹೋಗಿದ್ದಾಗ ಅಲ್ಲಿ ಎಷ್ಟು ಜನರು ಭಾಗವಹಿಸುತ್ತಾರೆ ಎನ್ನುವುದನ್ನು ನೋಡಬೇಕು. ನಮ್ಮಲ್ಲಿ ಒಂದು ಸ್ಟೇಡಿಯಂನ್ನು ಕಟ್ಟಬೇಕಾದರೆ ಸುಮಾರು 20-30 ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ಕೆಲವು ಸಂದರ್ಭಗಳಲ್ಲಿ ಅಷ್ಟು ಖರ್ಚು ಮಾಡುವುದಕ್ಕಾಗುವುದಿಲ್ಲ. ಆದರೆ ಅಲ್ಲಿ ಒಂದು ಸ್ಟೇಡಿಯಂಗೆ ಸುಮಾರು 250 ಕೋಟಿ ರೂಪಾಯಿಗಳಷ್ಟು ಖರ್ಚು ಮಾಡುತ್ತಾರೆ ಅಂಥ ಒಂದು ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ಗೆ ಖರ್ಚು ಮಾಡುವಷ್ಟು ಹಣ ನಮ್ಮ ದೇಶದ ಒಟ್ಟು ಬಡ್ಜೆಟ್ ಹಣದಷ್ಟು ಆಗಬಹುದು. ಇಂಥ ಒಂದು ಅಂತರ ರಾಷ್ಟ್ರೀಯ ಪಂದ್ಯದಲ್ಲಿ ಯಾವ ದೇಶದವರು ಸ್ಪರ್ಧಿಗಳನ್ನು ಕಳುಹಿಸುತ್ತಾರೋ, ಮತ್ತು ಯಾರು ಗೆಲ್ಲುತ್ತಾರೋ ಅವರನ್ನು ಆ ದೇಶದ ಹತ್ತು ಜನ ಇರಾನ್ ಯುವತಿಯರೊಂದಿಗೆ ಇವರನ್ನು ನಿಲ್ಲಿಸಿ, ಮೆರವಣಿಗೆಯಲ್ಲಿ ಕರೆದುಕೊಂಡು ಹೋಗುತ್ತಾರೆ.

ಯಾರು ಮೊದಲನೆಯ ಸ್ಥಾನವನ್ನು ಪಡೆಯುತ್ತಾರೋ ಮತ್ತು ಎರಡು ಮೂರನೆಯ ಸ್ಥಾನವನ್ನು ಪಡೆಯುತ್ತಾರೋ, ಅವರು ಯಾವ ರಾಷ್ಟ್ರದವರೇ ಆಗಿರಲಿ ಆ ರಾಷ್ಟ್ರದ ಧ್ವಜವನ್ನು ತಮ್ಮ ದೇಶದ ರಾಷ್ಟ್ರದ ಧ್ವಜದೊಂದಿಗೆ ಮೇಲೆ ಏರಿಸಿ ಅಲ್ಲಿ ನಾವೆಲ್ಲರೂ ಗೌರವವನ್ನು ಸಲ್ಲಿಸಬೇಕು. ಇಂಥ ಒಂದು ಸಮಯದಲ್ಲಿ ನಮ್ಮ ದೇಶದ ಧ್ವಜ ಮೇಲೆ ಹೋಗದೆ. ಚೈನಾ ದೇಶದ ಧ್ವಜ ಮೇಲೆ ಹೋಗುತ್ತದೆ, ರಷ್ಯಾ ದೇಶದ ಧ್ವಜ ಮೇಲೆ ಹೋಗುತ್ತದೆ ಎಂದರೆ ನಾವು ನಿಜ

(ಶ್ರೀ ಆರ್. ಗುಂಡೂರಾವ್)

ವಾಗಿಯೂ ತಲೆತಗ್ಗಿಸಬೇಕಾದಂಥ ಒಂದು ಸನ್ನಿವೇಶ ಬರುತ್ತದೆ. ಆದ್ದರಿಂದ ನಾವು ಆಟಕ್ಕೋಸ್ಕರ ಹೆಚ್ಚಿನ ಬೆಂಬಲ ಕೊಡಬೇಕು. ನಾವೆಲ್ಲರೂ ಇದನ್ನು ಸರಿಯಾದ ರೀತಿಯಲ್ಲಿ ಯೋಚನೆ ಮಾಡಬೇಕು. ಮಾನ್ಯ ಸದಸ್ಯರೆಲ್ಲರೂ ನನ್ನ ಖಾತೆಯ ಬಗ್ಗೆ ಯಾವ ಒಂದು ಟೀಕೆಯನ್ನೂ ಮಾಡದೆ ಬೆಂಬಲ ಕೊಟ್ಟಿದ್ದೀರಿ. ಆದ್ದರಿಂದ ಈ ಒಂದು ಡಿಮ್ಯಾಂಡನ್ನು ಸರ್ವಾನುಮತದಿಂದ ಸಭೆಯವರು ಪಾಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇದರ ಜೊತೆಯಲ್ಲಿ ನಾವು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಸುಸಜ್ಜಿತವಾದ ಸ್ಟೇಡಿಯಂ ಅನ್ನು ನಿರ್ಮಾಣ ಮಾಡಬೇಕೆಂದು ಮಾಡಿದ್ದೇವೆ. ಇಡೀ ಭಾರತದಲ್ಲಿಯೇ ಮೈಸೂರಿನ ಫುಟ್‌ಬಾಲ್ ಆಟಗಾರರು ಹೆಸರುವಾಸಿಯಾಗಿದ್ದಾರೆ. ಆದರೆ ಅವರಿಗೆ ಸರಿಯಾದಂಥ ಒಂದು ಆಟದ ಮೈದಾನ ಇಲ್ಲ ಒಂದು ಕ್ರೀಡಾಂಗಣ ಇಲ್ಲ ಕಳೆದ ಎರಡು ತಿಂಗಳ ಹಿಂದೆ ನಾನು ಮಹಾರಾಜ ಫುಟ್‌ಬಾಲ್ ಸ್ಪರ್ಧೆಯನ್ನ ನೋಡುವುದಕ್ಕೆ ಮೈಸೂರಿಗೆ ಹೋದಾಗ ಅಲ್ಲಿಗೆ ಬಂದಂಥ ಆಟಗಾರರು ಮೈದಾನವನ್ನು ನೋಡಿ ಆಟವಾಡುವುದಿಲ್ಲ ಎಂದು ಹೇಳಿದರು ಉತ್ತಮವಾದ ಆಟಗಾರರು ಇಂಥ ಮೈದಾನಗಳಲ್ಲಿ ಆಡಲಿಕ್ಕೆ ಒಪ್ಪುವುದಿಲ್ಲ, ಆಟವಾಡುವುದಕ್ಕೆ ಇಷ್ಟಪಡುವುದಿಲ್ಲ.

6-30 P.M.

ಇದು ನಿಜವಾಗಲೂ ನಾವೆಲ್ಲರೂ ವ್ಯಸನಪಡುವಂಥಾದ್ದು. ಆದುದರಿಂದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಒಂದು ಸ್ಟೇಡಿಯಂ ಅನ್ನು ನಿರ್ಮಾಣ ಮಾಡಲೇಬೇಕು. ಅದಕ್ಕಾಗಿ ಸರಕಾರದವರು ಒಂದೊಂದು ಸ್ಟೇಡಿಯಂ ಗೆ 5 ಲಕ್ಷ ರೂಪಾಯಿಗಳನ್ನು ಈಗಾಗಲೇ ಕೊಟ್ಟಿದ್ದಾರೆ. ಈಗಾಗಲೇ ಹಾಸನ, ಬೆಳಗಾಂ, ಬಿಜಾಪುರ ಮತ್ತು ಮಂಡ್ಯ ಮತ್ತು ಇನ್ನು ಎಷ್ಟೋ ಭಾಗಗಳಲ್ಲಿ ಸ್ಟೇಡಿಯಂ ಕೆಲಸ ಪ್ರಾರಂಭವಾಗಿದೆ. ಹಾಸನದಲ್ಲಿ ಈಗಾಗಲೇ 2 ತಿಂಗಳ ಹಿಂದೆ ಈ ಕಾರ್ಯ ಆರಂಭ ಮಾಡಿದೆ. ಇದಕ್ಕೆ ಸರ್ಕಾರದವರು 5 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಇನ್ನು 50 ಭಾಗ ಮುನಿಸಿಪಾಲಿಟಿಯವರು, 50 ಭಾಗ ಸಾರ್ವಜನಿಕರು ಕೊಡಬೇಕು. ಕಡಿಮೆ ಎಂದರೂ ಒಂದು ಸ್ಟೇಡಿಯಂ ಗೆ 13-14 ಲಕ್ಷ ರೂಪಾಯಿ ಖರ್ಚು ಮಾಡಿ ಉತ್ತಮ ಕ್ರೀಡಾಂಗಣವನ್ನು ಮಾಡಬೇಕು ಅನ್ನುವ ಉದ್ದೇಶ ಇದೆ ಈಗಾಗಲೇ 9 ಜಿಲ್ಲೆಗಳಲ್ಲಿ ಕೆಲಸ ಆರಂಭವಾಗಿದೆ. ಇನ್ನು ಎರಡು ತಿಂಗಳೊಳಗೆ ಇನ್ನೂ 4-5 ಜಿಲ್ಲೆಗಳಲ್ಲಿ ಕೆಲಸ ಆಗಲಿದೆ. ಒಟ್ಟಿನಲ್ಲಿ 1975ನೇ ಇಸವಿಯೊಳಗೆ ನಮ್ಮ ರಾಜ್ಯದ 19 ಜಿಲ್ಲೆಗಳಲ್ಲೂ ಕೂಡ ಸ್ಟೇಡಿಯಂ ಕಾರ್ಯ ಮುಗಿಸಬೇಕು ಅಂತ ಆಸಕ್ತಿ ವಹಿಸಿದ್ದೇನೆ. ಬಹುಶಃ ತಮ್ಮೆಲ್ಲರ ಸಹಕಾರದಿಂದ ಬಹಳ ಭಾಗ ಪೂರ್ಣಗೊಳ್ಳುತ್ತದೆ ಎನ್ನುವ ಆಸೆ ಇದೆ. ಅದಕ್ಕಾಗಿ ತಮ್ಮೆಲ್ಲರ ಸಹಕಾರವನ್ನು ಕೋರುತ್ತೇನೆ.

Karnataka Legislature Library.

ಇನ್ನು ಯುವಜನ ಸೇವೆ ಬಗ್ಗೆ ಎಲ್ಲಾ ಸದಸ್ಯರೂ ಇದಕ್ಕೆ ಹೆಚ್ಚಿನ ಹಣ ಇಡಬೇಕು ಅಂತ ಹೇಳಿದರು. ಇದರ ಬಗ್ಗೆ ಎಲ್ಲಾ ಸದಸ್ಯರು ಮಾತನಾಡುತ್ತಾರೆಂದು ಯೋಚನೆ ಮಾಡಿದ್ದೆ ಆದರೆ ಹೆಚ್ಚಿಗೆ ಯಾರೂ ಮಾತನಾಡಲಿಲ್ಲಾ. ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಹೆಚ್. ಡಿ. ದೇವೇಗೌಡರ ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ಎಷ್ಟೋ ಸಲಹೆಗಳನ್ನು ಕೊಟ್ಟಿದ್ದಾರೆ. ನಾನೂ ಕೂಡ ಅವರ ಜೊತೆಯಲ್ಲಿ ಇದ್ದೆ. ಆದರೆ ಅವರು ಈ ಇಲಾಖೆ ಬಗ್ಗೆ ಹೆಚ್ಚು ಗಮನ ಇಡಲಿಲ್ಲ. ಅವರ ಗಮನವೆಲ್ಲಾ ಶ್ರೀಮಾನ್ ಹೆಚ್. ಎಂ. ಚೆನ್ನಬಸಪ್ಪನವರ ಇಲಾಖೆಯಾದ ಪಿ. ಡಬ್ಲ್ಯು. ಡಿ. ಮೇಲೆ ಮತ್ತು ಪೋಲೀಸು ಇಲಾಖೆ ಮೇಲೆ. ಆದುದರಿಂದ ನಾನು ಅವರನ್ನು ಕೇಳಿಕೊಳ್ಳುತ್ತೇನೆ. ಇದಕ್ಕೂ ಪೂರ್ಣ ಬೆಂಬಲ ಕೊಡಬೇಕು ಎಂದು.

ಇನ್ನು ಇನ್‌ಫರ್ಮೇಷನ್ ಅಂಡ್ ಪಬ್ಲಿಸಿಟಿ ಬಗ್ಗೆ ಕೆಲವು ಸದಸ್ಯರು ಸಾಕಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಹೆಚ್ಚು ಟೀಕೆಗಳು ಇಲ್ಲ. ಶ್ರೀಮಾನ್ ಮಂಜುನಾಥರವರು ಒಂದು ಸಲಹೆ ಹೇಳಿದರು. ಎಲ್ಲ ರಾಜಕೀಯ ಮುಖಂಡರ ಫೋಟೋವನ್ನು ಈ ಸರ್ಕಾರೀ ಪತ್ರಿಕೆಯಲ್ಲಿ ಹಾಕಿಸಬೇಕು ಎಂದು ಹೇಳಿದರು. ಮತ್ತು ಧರ್ಮದ ಕೆಲಸ ಯಾರು ಮಾಡುತ್ತಾರೋ ಅವರ ಹೆಸರನ್ನೂ ಕೂಡಾ ಹಾಕಿಸಬೇಕು ಎಂದು ಹೇಳಿದರು. ಅದು ಒಳ್ಳೆಯ ಸಲಹೆ. ಅದರಂತೆ ಈವಾಗ ಡಾಕ್ಟರ್ ಮೋದಿಯವರ ಹೆಸರು ಹಾಕಿಸಿದ್ದೇವೆ. ಅಂಥಾವರ ಫೋಟೋ ಹಾಕುವುದು ಒಳ್ಳೆಯ ಸಲಹೆ. ದೇಶದಲ್ಲಿ ಅಂತಹ ಫೋಟೋವನ್ನು ಹಾಕಿಸುವುದಕ್ಕೆ ಖಂಡಿತಾ ಪ್ರಯತ್ನ ಪಡುತ್ತೇನೆ.

ಇನ್ನು ಪತ್ರಿಕೆಗಳ ಬಗ್ಗೆ ಎಲ್ಲಾ ಸದಸ್ಯರೂ ಮಾತನಾಡಿದ್ದಾರೆ. ಶ್ರೀಮಾನ್ ರುದ್ರಪ್ಪನವರು, ಶ್ರೀಮಾನ್ ನಾಯಿಡುರವರು ಮತ್ತು ಶ್ರೀಮಾನ್ ಬಂಗಾರಪ್ಪನವರು ಈ ಮೂರು ಜನರೂ ಈ ವಾರ್ತಾ ಇಲಾಖೆ ಬಗ್ಗೆ ಮಾತನಾಡಿದ್ದಾರೆ. ಈ ಸಣ್ಣ ಪತ್ರಿಕೆಗಳಿಗೆ ಸಾಕಷ್ಟು ಬೆಂಬಲ ಕೊಡಬೇಕು ಎಂದು. ಈಗಾಗಲೇ ನನ್ನ ಅಭಿಪ್ರಾಯವನ್ನೂ ಕೂಡ ತಿಳಿಸಿದ್ದೇನೆ. ಆದಷ್ಟು ಮಟ್ಟಿಗೆ ಜಿಲ್ಲಾ ಮಟ್ಟದಲ್ಲಿರುವ ಸಣ್ಣ ಪತ್ರಿಕೆಗಳಿಗೆ ಸಹಾಯವನ್ನು ಕೊಡಬೇಕು ಎನ್ನುವುದು ನನ್ನ ಅಭಿಪ್ರಾಯವಾಗಿದೆ ಮತ್ತು ಅದಕ್ಕೆ ನನ್ನ ಬೆಂಬಲ ಇದ್ದೇ ಇದೆ. ನಿಜವಾಗಿಯೂ ಪತ್ರಿಕೆಗಳಲ್ಲಿ 2-3 ತರಹ ಪತ್ರಿಕೆಗಳು ಇವೆ. ಈ ಬಗ್ಗೆ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ದೊಡ್ಡ ದೊಡ್ಡ ಪತ್ರಿಕೆಗಳು ಏನು ಇವೆ. ಪ್ರಜಾವಾಣಿ, ಕನ್ನಡಪ್ರಭಾ, ಸಂಯುಕ್ತ ಕರ್ನಾಟಕ ಈ ಪೇಪರುಗಳು ಏನು ಇವೆ. ಇವುಗಳಿಗೆ ಗ್ರಾಮಾಂತರ ಪ್ರದೇಶಗಳ ಬಗ್ಗೆ ನ್ಯೂಸ್ ಪ್ರಿಂಟ್ ಮಾಡುವುದಕ್ಕೆ ಸಾಕಷ್ಟು ಜಾಗೆ ಇರುವುದಿಲ್ಲ ಕಾರಣ ಪೇಪರ್‌ನ ತೊಂದರೆ ಇರುವುದರಿಂದ ಅನೇಕ ವಿಷಯಗಳು ಈ ದೊಡ್ಡ ಪತ್ರಿಕೆಗಳಲ್ಲಿ ಬರುವುದಿಲ್ಲ. ಯಾವ ಪೇಪರ್ ಬೆಂಗಳೂರಿನಲ್ಲಿ ಪ್ರಿಂಟ್ ಆಗು

(ಶ್ರೀ ಆರ್. ಗುಂಡೂರಾವ್)

ತ್ತದೋ ಆ ಪೇಪರ್‌ನಲ್ಲಿ ಕೊಡಗಿನ ವಿಷಯವೇ ಆಗಲಿ, ಶಿವಮೊಗ್ಗಾದ ವಿಷಯವೇ ಆಗಲಿ, ಬಿಜಾಪುರದ ವಿಷಯವೇ ಆಗಲಿ ಒಂದು ವಿಷಯವೂ ಇರುವುದಿಲ್ಲ ಏತಕ್ಕೆಂದರೆ ಅವರಿಗೆ ಕಾಗದದ ಅಭಾವ ಇರುವುದರಿಂದ ವಿಷಯಗಳನ್ನು ಹಾಕಲಿಕ್ಕೆ ತೊಂದರೆ ಇದೆ ನಿಜವಾಗಿಯೂ ಹೇಳುವುದಾದರೆ ಜಿಲ್ಲಾ ಮಟ್ಟದಲ್ಲಿ ಏನು ಪತ್ರಿಕೆಗಳು ಹೊರಡುತ್ತವೆ ಆ ಪತ್ರಿಕೆಗಳಿಂದ ಅಲ್ಲಿ ಆ ಜಿಲ್ಲಾಧಿಕಾರಿ ಏನು ಕೆಲಸ ಮಾಡುತ್ತಾನೆ, ಆ ಎಸ್. ಪಿ ಏನು ಕೆಲಸ ಮಾಡುತ್ತಾನೆ, ಅಲ್ಲಿ ತಾಲ್ಲೂಕ್ ಬೋರ್ಡ್ ಪ್ರೆಸಿಡೆಂಟರು ಏನು ಕೆಲಸ ಮಾಡುತ್ತಾರೆ ಮತ್ತು ಆ ಪುರಸಭೆಯವರು ಏನು ಕೆಲಸ ಮಾಡುತ್ತಾರೆ ಮತ್ತು ಆ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಯಾವ ತರಹ ಟ್ರೀಟ್‌ಮೆಂಟ್ ಸಿಗುತ್ತದೆ ಇವೆಲ್ಲಾ ಗೊತ್ತಾಗುತ್ತದೆ. ಇದನ್ನೆಲ್ಲಾ ಗ್ರಾಮಾಂತರ ಜನಗಳಿಗೆ ತಿಳಿಸಬೇಕಾದರೆ ಈ ಸಣ್ಣ ಪತ್ರಿಕೆಗಳು ಮಹತ್ತರವಾದಂಥ ಪಾತ್ರವನ್ನು ಆ ಜಿಲ್ಲೆಗಳಲ್ಲಿ ವಹಿಸುತ್ತದೆ ಎಂದು ಹೇಳುತ್ತೇನೆ

ಶ್ರೀ ಕೆ. ಹೆಚ್. ಹನುಮೇಗೌಡ :—ಗ್ರಾಮಾಂತರ ಪ್ರದೇಶದಲ್ಲಿ ಈ ಸಣ್ಣ ಪತ್ರಿಕೆಗಳನ್ನು ನಡೆಸಿಕೊಂಡು ಹೋಗುವುದು ಕಷ್ಟವಾಗುತ್ತದೆ.

ಶ್ರೀ ಆರ್. ಗುಂಡೂರಾವ್ :—ಈ ಸಣ್ಣ ಪತ್ರಿಕೆಗಳ ಕಷ್ಟ ಏನು ಇದೆ ಎನ್ನುವುದು ನನಗೆ ಗೊತ್ತಿದೆ ಅದಕ್ಕೆ ಸಾಕಷ್ಟು ಬೆಂಬಲ ಕೊಡಬೇಕು ಎನ್ನುವುದೂ ನನಗೆ ಗೊತ್ತಿದೆ. ಶ್ರೀಮಾನ್ ಕೆ. ಹೆಚ್. ಹನುಮೇಗೌಡರು ಹೇಳಿದ ಹಾಗೆ ಅವರಿಗೆ ನಿಜವಾಗಿಯೂ ತೊಂದರೆ ಇದೆ. ಆದುದರಿಂದ ಜಿಲ್ಲಾ ಮಟ್ಟದಲ್ಲಿ ಏನೇನು ಪಬ್ಲಿಸಿಟಿ ಕೊಡುತ್ತೇವೋ ಅದನ್ನು ಇನ್ನುಮೇಲೆ ದೊಡ್ಡ ಪತ್ರಿಕೆಗಳಿಗೆ ಕಡಿಮೆ ಮಾಡಿ ಈ ಸಣ್ಣ ಪತ್ರಿಕೆಗಳಿಗೆ ಕೊಡಬೇಕು ಎನ್ನುವ ಉದ್ದೇಶ ಇದೆ. ಅದನ್ನು ಯಾವ ರೀತಿ ಜಾರಿಗೆ ಕೊಡಬೇಕು ಎನ್ನುವುದನ್ನು ಯೋಚನೆ ಮಾಡುತ್ತಿದ್ದೇವೆ ನನಗಂತೂ ಇದರ ಬಗ್ಗೆ ಬಹಳ ಆಸಕ್ತಿ ಇದೆ. ಆದಷ್ಟು ಮಟ್ಟಿಗೆ ಈ ಜಿಲ್ಲಾ ಪತ್ರಿಕೆಗಳಿಗೆ ಬೆಂಬಲ ಕೊಡಬೇಕು ಎನ್ನುವುದನ್ನು ನಾನು ಪೂರ್ತಾ ಒಪ್ಪಿಕೊಳ್ಳುತ್ತೇನೆ ಇದು ಜಿಲ್ಲಾ ಮಟ್ಟದಲ್ಲಿ ಮಹತ್ತರವಾದ ಪಾತ್ರವನ್ನು ವಹಿಸುತ್ತದೆ. ಈಗ ಬೆಂಗಳೂರಿನಲ್ಲಿ ಪ್ರಿಂಟ್ ಆಗುವ ಪ್ರಜಾವಾಣಿಯೇ ಆಗಲಿ ಅಥವಾ ಕನ್ನಡಪ್ರಭ ಆಗಲಿ ಅದರಲ್ಲಿ ಬೆಂಗಳೂರು ವಿಷಯ ಬಂದರೆ ಇದನ್ನು ತಿಳಿದುಕೊಂಡರೆ ನನಗೇನು ಪ್ರಯೋಜನ ಎಂದು ಆ ಗ್ರಾಮಾಂತರ ಪ್ರದೇಶದ ಜನರಲ್ಲಿರುವ ಭಾವನೆ ಎಂದು ನನ್ನ ಅಭಿಪ್ರಾಯ. ಅದೇ ಗ್ರಾಮಾಂತರದ ವಿಷಯವಾದರೆ ಅದರ ವಿಷಯವೇ ಬೇರೆ. ನಮ್ಮ ಮನೆ ವಿಷಯ ಏನಾದರೂ ಹೊರಗಡೆ ಬಂದರೆ ಏನಾಗುತ್ತದೋ ಏನೋ ಜನ ಏನು ತಿಳಿದುಕೊಳ್ಳುತ್ತಾರೋ ಎನ್ನುವ ಭಾವನೆ ಬರುತ್ತದೆ, ಅದರಿಂದ ಅವರು

ತಪ್ಪು ಮಾಡಬಾರದು ಅಂತ ಪ್ರಯತ್ನ ಮಾಡುತ್ತಾರೆ. ಅದು ಸಾರ್ವಜನಿಕ ಕೆಲಸವೇ ಆಗಿರಲಿ, ಯಾವ ಕೆಲಸವೇ ಆಗಿರಲಿ ಈ ರೀತಿ ಒಂದು ಭಾವನೆ ಆ ಗ್ರಾಮಾಂತರ ಪ್ರದೇಶದ ಜನರಲ್ಲಿದೆ. ಇಂತಾ ಒಂದು ಎಚ್ಚರಿಕೆಯಿಂದ ಸಣ್ಣ ಪತ್ರಿಕೆಗಳು ಆಗಾಗ್ಗೆ ತಮ್ಮ ಸಲಹೆಯನ್ನು ನೀಡುತ್ತಾ ಇರುವುದರಿಂದ ಇದು ರಚನಾತ್ಮಕವಾದ ತಿಳುವಳಿಕೆಗೆ ಎಷ್ಟೋ ಒಳ್ಳೆಯ ಕೆಲಸವನ್ನು ಮಾಡುವುದಕ್ಕೆ ಇದು ಬೆಂಬಲವಾಗಿದೆ ಎಂದು ಹೇಳುತ್ತೇನೆ ಆದುದರಿಂದ ಈ ಬಗ್ಗೆ ಸಾಕಷ್ಟು ಬೆಂಬಲ ಕೊಡಬೇಕು ಅಂತ ಇದಕ್ಕೆ 2 ಸಾವಿರ, 3 ಸಾವಿರ, 5 ಸಾವಿರ ರೂಪಾಯಿ ಕೊಡಬೇಕು ಅಂತ ತೀರ್ಮಾನ ಮಾಡಿದ್ದೇವೆ. ಇದರಲ್ಲಿ ಇಂಥಾ ಪಕ್ಷದವರಿಗೆ ಕೊಡಬೇಕು, ಅಂಥಾ ಪಕ್ಷದವರಿಗೆ ಕೊಡಬೇಕು ಅಂತ ಏನೂ ಇಲ್ಲ. ಯಾವ ಪತ್ರಿಕೆಗಳು ನಿಜವಾಗಿಯೂ ಸರ್ಕುಲೇಷನ್‌ನಲ್ಲಿ ಇದೆ ಅದರಲ್ಲೂ ನಮ್ಮ ಮಲೆನಾಡು ಭಾಗದಲ್ಲಿ ಒಂದು ಪೇಪರ್ ಸಿಗಬೇಕಾದರೆ ಎರಡು ದಿವಸವಾಗುತ್ತದೆ ಆ ಪೇಪರ್ ನಿಜವಾಗಿಯೂ ಟೀ ಅಂಗಡಿಯವನಿಗೆ ತಲುಪಬೇಕು ಆವಾಗ ಅವನು ಜಾಗ್ರತೆಯಾಗುತ್ತಾನೆ. ವಿದ್ಯಾವಂತರಾದರೆ ತಿಳಿದುಕೊಳ್ಳುತ್ತಾರೆ, ಅಲ್ಲಿ ವಿದ್ಯಾವಂತರ ಸಂಖ್ಯೆ ಕಡಿಮೆ, ಹಾಗಿರುವಾಗ ಅವರಿಗೆ ಬೆಂಗಳೂರಿನಿಂದ ಅಥವಾ ಡೆಲ್ಲಿಯಿಂದ ಹೊರಡತಕ್ಕಂಥ ವಿಷಯದಿಂದ ಅವರಿಗೇನು ಪ್ರಯೋಜನ. ವಿದ್ಯಾವಂತರಾದರೆ ಚೆನ್ನಾಗಿ ತಿಳಿದುಕೊಳ್ಳುತ್ತಾರೆ, ರೇಡಿಯೋ ಇಟ್ಟುಕೊಳ್ಳುತ್ತಾರೆ ಅವಿದ್ಯಾವಂತರಿಗೆ ತಿಳಿಯುವುದು ಹೇಗೆ. ಆದುದರಿಂದ ಈ ಸಣ್ಣಪತ್ರಿಕೆಗಳು ಏನು ಇವೆ ಇದು ಸರ್ಕಾರೀ ಮೂಲಕವೇ ಆಗಬೇಕು ಅಲ್ಲದೇ ಚಲನಚಿತ್ರಗಳ ಮೂಲಕವೇ ಆಗಬೇಕು ಎಂದು ಹೇಳುತ್ತೇನೆ. ಇನ್ನು ಮಾನ್ಯ ಸದಸ್ಯರು ಹೇಳಿದಂತೆ ಈ ಸಣ್ಣ ಪತ್ರಿಕೆಗಳಿಗೆ ಸಾಕಷ್ಟು ಬೆಂಬಲವನ್ನು ಸರ್ಕಾರ ಕೊಡುವುದು ಒಳ್ಳೆಯದು ಎಂದು ಹೇಳುತ್ತೇನೆ.

ಇನ್ನು ಫಿಲಂ ಯೂನಿಟ್ ಬಗ್ಗೆ ಹೇಳಿದರು. ಅದರಲ್ಲಿ ಬಹಳ ವಿಷಯುಗಳನ್ನು ಚಲನಚಿತ್ರ ಮೂಲಕವೇ ನಮ್ಮ ಜನರನ್ನು ಜಾಗ್ರತಿಗೊಳಿಸುವುದಕ್ಕೆ ಸಾಧ್ಯ ಎಂದು ಹೇಳುತ್ತೇನೆ. ಹೇಗೆಂದರೆ ಈವೊತ್ತು ಕ್ರಿಕೆಟ್ ಮ್ಯಾಚ್ ನೋಡಿದರೆ ಯಾವ ಕಾರ್ಮಿಕನಿಗೇ ಆಗಲಿ, ಯಾವ ರೈತನಿಗೇ ಆಗಲಿ ಮ್ಯಾಚ್ ಎಂದರೆ ಏನು ಅಂತ ಗೊತ್ತಾಗುತ್ತದೆ. ಇಲ್ಲದೇ ಹೋದರೆ ಮ್ಯಾಚ್ ಎಂದರೆ ಏನು ಎನ್ನುವುದನ್ನು ಅವನಿಗೆ ವಿವರಿಸಬೇಕಾದರೆ ಎಷ್ಟೋ ದಿನಗಳು ಬೇಕಾಗುತ್ತದೆ. ಆದರೆ ಪ್ರತಿಯೊಬ್ಬರಿಗೂ ಕೂಡ ಸಿನಿಮಾ ನೋಡುವುದಕ್ಕೆ ಆಸೆ ಇದೆ. ನಾವೂ ಅಷ್ಟೆ. ಯಾರು ಯಾವ ಸಮಾರಂಭಕ್ಕೆ ಹೋಗಲಿ, ಯಾರು ಎಲ್ಲಿಗೇ ಹೋಗಲಿ ಅವೆಲ್ಲಾ ಚಲನಚಿತ್ರಗಳಲ್ಲಿ ಬರುತ್ತದೆ ಆದುದರಿಂದ ಅದಕ್ಕೆ ಜನಗಳಲ್ಲಿ ಬೆಂಬಲ ಇದ್ದೇ ಇದೆ, ಜನಗಳು ಕೂಡ ಆ ಸಿನಿಮಾಗಳಲ್ಲಿ ಬಹಳ ಆಸಕ್ತಿ ತೋರಿಸಿದ್ದಾರೆ. ಏತಕ್ಕೆ ಇದರಲ್ಲಿ ಜನರು ಆಸಕ್ತಿ ತೋರಿಸಿದ್ದಾರೆ ಎಂದರೆ ಅವರು ಬುದ್ಧಿ ಹೆಚ್ಚುತ್ತದೆ ಅಂತ, ಸಿನಿಮಾ ನೋಡುವುದರಲ್ಲಿ ತಪ್ಪೇನೂ ಇಲ್ಲ. ಅದಕ್ಕೋಸ್ಕರವಾಗಿ

(ಶ್ರೀ ಆರ್. ಗುಂಡೂರಾವ್)

ಸಿನಿಮಾ ನೋಡುವುದು ತಪ್ಪು ಅಂತ ಯಾರು ಹೇಳುತ್ತಾರೆ? ಸಿನಿಮಾಕ್ಕೆ ಬೆಂಬಲ ಕೊಡಬಾರದು ಅಂತ ಯಾರೂ ಹೇಳುವುದಿಲ್ಲ ನಿಜವಾಗಿಯೂ ನೋಡಿದಲ್ಲಿ ಅದರಲ್ಲಿ ಸಾಕಷ್ಟು ತಿಳುವಳಿಕೆ ಬರುತ್ತದೆ ಇಂಡಿಯನ್ ನ್ಯೂಸ್ ರೀಲ್ ರಾಷ್ಟ್ರದಲ್ಲಿ ಆಗುವಂಥ ಅನೇಕ ಕೆಲಸ ಕಾರ್ಯಗಳನ್ನು ಈ ಚಲನಚಿತ್ರಗಳ ಮೂಲಕವೇ ತಿಳಿಸುತ್ತದೆ ಆದುದರಿಂದ ಈ ಫಿಲಂ ಯೂನಿಟ್ ಮಹತ್ತರವಾದ ಕೆಲಸ ಮಾಡಬೇಕು ಎಂದು ಹೇಳುತ್ತೇನೆ ಫಿಲಂ ಯೂನಿಟ್ಟುಗಳು ಬಹಳ ಮಹತ್ತರವಾದ ಕೆಲಸಗಳನ್ನು ಮಾಡಬಹುದು ಇದಕ್ಕಾಗಿ ನಮ್ಮ ಇಲಾಖೆಯಲ್ಲಿ ಎಷ್ಟು ಚೆನ್ನಾಗಿ ಮಾಡಲು ಎಷ್ಟು ಸೌಕರ್ಯಗಳು ಇರಬೇಕೋ ಅಷ್ಟು ಸೌಕರ್ಯಗಳು ಸಾಕಷ್ಟು ಇಲ್ಲ. ಇದನ್ನು ಒದಗಿಸಿಕೊಂಡು ಇಂತಹ ಫಿಲಂ ಯೂನಿಟ್ಟುಗಳಿಗೆ ಒಂದು ಪ್ರೋಗ್ರಾಂ ಹಾಕಿಕೊಳ್ಳಲಾಗಿದೆ. ಅದರಂತೆ ಇದಕ್ಕೆ ಬೇಕಾದ ಮೆಷಿನರಿ ಹಾಗೂ ಇನ್ನಿತರ ಉಪಕರಣಗಳನ್ನು ಹೊಂದಿಸಿಕೊಂಡು ಕೆಲಸ ಮಾಡಬೇಕಾಗುತ್ತದೆ. ಇದಕ್ಕೆ ತಕ್ಕ ಹಾಲುಗಳಿರಬೇಕು ಮತ್ತು ಪ್ರಪಂಚದಲ್ಲಿ ನಡೆಯುತ್ತಿರುವ ಕಾರ್ಯಕ್ರಮಗಳನ್ನು ತಿಳಿಸಲು ಇದರಿಂದ ಅನುಕೂಲವಾಗುತ್ತದೆ. ಇಂತಹ ಫಿಲಂ ಯೂನಿಟ್ಟುಗಳನ್ನು ಇನ್ನೂ ಹೆಚ್ಚಾಗಿ ಮಾಡಿ ಮುಂದುವರಿಸಬೇಕೆಂದು ಈಗಾಗಲೇ ತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ, ಇದನ್ನು ಖಂಡಿತ ಮಾಡುತ್ತೇವೆ ಎಂದು ಇಲ್ಲಿ ಹೇಳಲು ಇಷ್ಟಪಡುತ್ತೇನೆ.

ಇನ್ನು ಶ್ರೀ ಲಿಂಗಪ್ಪನವರು ಮಿನಿ ಥಿಯೇಟರುಗಳ ಬಗ್ಗೆ ಹೇಳಿದರು. ಇದನ್ನು ಎಲ್ಲ ಕಡೆಗಳಲ್ಲೂ ಮಾಡುವುದು ಒಳ್ಳೆಯದು. ಇದಕ್ಕಾಗಿಯೇ ಫಿಲಂ ಡೆವಲಪ್‌ಮೆಂಟು ಕಾರ್ಪೊರೇಷನ್ ಎಂದು ಮಾಡಲಾಗಿದೆ. ಇವರಿಗೆ ಸಾಕಷ್ಟು ವಿದ್ಯುಚ್ಛಕ್ತಿ ಒದಗಿಸಿ ಕೊಡಬೇಕು ಹಾಗೂ ಇನ್ನಿತರ ಸಹಾಯಗಳನ್ನು ಒದಗಿಸಿ ಕೊಡಬೇಕು. ಇದರಲ್ಲಿ ಯಾರು ಪರಿಣತರಿದ್ದಾರೋ ಅಂತಹವರಿಗೆ ಇದರಲ್ಲಿ ಅವಕಾಶ ಕೊಟ್ಟು ಇದರಲ್ಲಿ ಜನತೆಗೆ ಯಾವ ರೀತಿ ಸಹಾಯ ಮಾಡಬಹುದು ಎನ್ನುವುದನ್ನೂ ಯೋಚನೆ ಮಾಡಿ ಅದರ ಬಗ್ಗೆ ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಇಷ್ಟು ಮಾತ್ರ ಹೇಳುತ್ತೇನೆ ಕೊನೆಯದಾಗಿ ಕಪ್ಪು ಫಿಲಂಗಾಗಿ ಒಂದು ಲಕ್ಷ ರೂಪಾಯಿ ಸಹಾಯ ಕೊಡುವುದು ಮತ್ತು ಕಲರು ಫಿಲಂಗಳಾದರೆ ಒಂದೂವರೆ ಲಕ್ಷ ರೂಪಾಯಿ ಸಹಾಯವನ್ನು ಕೊಡುವುದೊಳ್ಳೆಯದು ಎಂದು ಕೆಲವು ಸದಸ್ಯರೂ ಹೇಳಿದರು.

ಶ್ರೀ ಕೋಣಂದೂರು ಲಿಂಗಪ್ಪ :—ಇದನ್ನು ಕೊಡುವುದಕ್ಕೆ ಮುಂಚೆ ಯಾರು ಇಂತಹ ಫಿಲಂ ತೆಗೆಯುವರು ಎಂದು ಸರಿಯಾದ ಷರತ್ತುಗಳನ್ನು ಹಾಕಿದ್ದೀರಾ ?

ಶ್ರೀ ಆರ್. ಗುಂಡೂರಾವ್ :—ಈ ಪ್ರಶ್ನೆಗೆ ಉತ್ತರ ಕೊಡುವುದು ಕಷ್ಟ. ಸರಕಾರ ಇದರಲ್ಲಿ ಯಾರು ಪರಿಣತರಾಗಿ ಕೆಲಸ ಮಾಡಿದ್ದಾರೆ ಮತ್ತು ಅದಕ್ಕೆ ತಕ್ಕ ಅರ್ಹತೆಗಳಿವೆಯೋ ಇಲ್ಲವೇ ಎನ್ನುವುದರ ಮಾಹಿತಿಗಳನ್ನೆಲ್ಲಾ ಪಡೆದು ಆ ನಂತರ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಇದರ ಜೊತೆಗೆ ಸಾಲ ಕೊಡುವುದು ಸರಕಾರ. ಆದರೆ ಇದು ಸರಿಯಾಗಿ ಸರಕಾರಕ್ಕೆ ಮತ್ತ ವಾಪಸು ಬರುತ್ತದೆಯೋ ಎನ್ನುವುದನ್ನೂ ಖಾತರಿ ಮಾಡಿಕೊಳ್ಳಬೇಕಾಗುತ್ತದೆ ಇದು ಒಂದು ಬಹಳ ಒಳ್ಳೆಯ ಸಲಹೆ. ಖಂಡಿತ ಮಾನ್ಯ ಸದಸ್ಯರು ಸೂಚಿಸಿರುವ ಸಲಹೆಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಈ ದಿಸೆಯಲ್ಲಿ ನಿಜವಾಗಿಯೂ ಸರಿಯಾದ ಕೆಲಸಗಳನ್ನು ಮಾಡಲು ಪ್ರಯತ್ನ ಮಾಡುತ್ತದೆ ಎಂದು ಇಷ್ಟು ಮಾತ್ರ ಹೇಳುತ್ತೇನೆ. ಇಂತಹ ಫಿಲಂ ತೆಗೆಯುವ ಉದ್ಯಮಿಗಳಿಗೆ ಬ್ಯಾಂಕಿನ ಮೂಲಕ ಹಣವನ್ನು ಒದಗಿಸಿ ಕೊಡ ಬಹುದೇ ಇಲ್ಲವೇ ಎಲ್. ಐ. ಸಿ ಗ್ಯಾರಂಟಿ ಮೇಲೆ ಸಾಲ ಕೊಡಲು ತೊಂದರೆ ಇದೆಯೋ ಇವನ್ನೆಲ್ಲಾ ಸರಕಾರ ಇನ್ನೂ ಆಲೋಚನೆ ಮಾಡಬೇಕಾಗಿದೆ. ಸಾಲ ಕೊಟ್ಟ ಮೇಲೆ ಅದನ್ನು ವಾಪಸು ಪಡೆಯುವುದು ಬಹಳ ಮುಖ್ಯ ಮಾನ್ಯ ಸದಸ್ಯರು ಹೇಳುವಂತೆ ನೂರಕ್ಕೆ ಎಂಬತ್ತರಷ್ಟು ಪಾಲು ಸಾಲ ಕೊಡುವುದರಲ್ಲಿ ವಾಪಸು ಬರುವುದೇ ಕಷ್ಟ ಎನ್ನುವುದನ್ನು ನಾವು ಸ್ಪಷ್ಟವಾಗಿ ಒಪ್ಪಿಕೊಳ್ಳಲೇ ಬೇಕು. ಇಲ್ಲಿ ಒಂದು ಹಾಗೂ ಒಂದೂವರೆ ಲಕ್ಷದಷ್ಟು ಸಾಲ ಕೊಡುವಾಗ ಇದು ಯಾವ ರೀತಿ ವಾಪಸು ಬರುತ್ತದೆ ಎನ್ನುವುದರ ಕಡೆಗೂ ಯೋಚನೆ ಮಾಡ ಬೇಕಾಗುತ್ತದೆ ಕೆಲವು ವೇಳೆ ಫಿಲಂ ನಡೆಯುವಾಗ ದುಡ್ಡು ಸಾಲದೇ ಅರ್ಧಕ್ಕೆ ನಿಂತುಹೋಗಬಹುದು ಇಲ್ಲವೇ ಬೇರಾವ ಕಾರಣದಿಂದಲೋ ನಷ್ಟವಾಗಬಹುದು. ಆಗ ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಇವನ್ನೆಲ್ಲ ವಿಚಾರ ಮಾಡ ಬೇಕಾಗುತ್ತದೆ. ಮಾನ್ಯ ಸದಸ್ಯರು ಕೊಟ್ಟಿರುವ ಸಲಹೆಗಳು ಸ್ವಾಗತಾರ್ಹ ವಾದವು. ಇವುಗಳ ಮೆರಿಟ್ಸ್‌ಗಳನ್ನು ಸರಿಯಾಗಿ ನೋಡಿ ವಿಚಾರ ಮಾಡಿ ಯಾವ ರೀತಿಯಾಗಿ ಸಾಲ ಕೊಟ್ಟು ಸಹಾಯ ಮಾಡಬಹುದು ಮತ್ತು ಯಾರು ಇದರಲ್ಲಿ ಸರಿಯಾದ ಜವಾಬುದಾರಿ ವಹಿಸಿಕೊಳ್ಳುತ್ತಾರೆ ಮತ್ತು ಸರಕಾರ ಕೊಡುವ ಹಣಕ್ಕೆ ಯಾವ ರೀತಿ ಗ್ಯಾರಂಟಿ ಬರುತ್ತದೆ ಇವನ್ನೆಲ್ಲ ಪರಿಶೀಲನೆ ಮಾಡಿ ಮಾಡಬೇಕಾಗುತ್ತದೆ. ಇದರ ಬಗ್ಗೆ ಇಲಾಖೆಯವರು ತೀವ್ರವಾಗಿ ಪರಿಶೀಲನೆ ಮಾಡಿ ಸರಕಾರ ಸೂಕ್ತವಾದ ತೀರ್ಮಾನ ತೆಗೆದುಕೊಳ್ಳುತ್ತದೆ ಎಂದು ಇಷ್ಟು ಮಾತ್ರ ಹೇಳುತ್ತೇನೆ. ಇನ್ನು ಕೆಲವು ಅಧಿಕಾರಿಗಳನ್ನು ಬೇರೆ ಇಲಾಖೆಗಳಿಂದ ಕಾಂಟ್ರಾಕ್ಟು ಬೇಸಿಸ್‌ನಲ್ಲಿ ಏಕೆ ತೆಗೆದುಕೊಳ್ಳುತ್ತಾರೆ ಎಂದು ಕೆಲವು ಸದಸ್ಯರು ಸೂಚಿಸಿದರು. ಇದರಲ್ಲಿ ತಜ್ಞರಾದವರು ಹಾಗೂ ಪರಿಣತರಾದವರು ಇದ್ದರೆ ಅಂತಹವರ ಸೇವೆಯನ್ನು ಸರಕಾರ ಉಪಯೋಗಿಸಿಕೊಳ್ಳಲು ಈ ರೀತಿ ಮಾಡ ಲಾಗಿದೆ. ನನ್ನ ಇಲಾಖೆಯ ಮುಖ್ಯಸ್ಥರಾಗಿರುವವರು ಐ. ಪಿ. ಎಸ್. ಅಧಿಕಾರಿ ಗಳಾಗಿದ್ದವರು ಬಹು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ, ಇಂತಹವರು ಬೇರೆ ಕಡೆ ಇದ್ದರೆ ಸರಕಾರ ಏಕೆ ಅಂತಹವರ ಸೇವೆಯನ್ನು ಪಡೆಯಬಾರದು. ಇದರಿಂದ

(ಶ್ರೀ ಆರ್. ಗುಂಡೂರಾವ್)

ನಮ್ಮ ಇಲಾಖೆಯು ಕೆಲಸಗಳು ಸಮರ್ಪಕವಾಗಿ ನಡೆಯಲು ಸಹಾಯವಾಗುತ್ತದೆ. ಉತ್ತಮವಾದ ಸೇವೆ ಮಾಡಿರುವವರು ಹಾಗೂ ಯುವಕರು ಎಲ್ಲಿಯೇ ಇರಲಿ ಅವರು ಪ್ರಾಮಾಣಿಕವಾಗಿ ಉತ್ತಮವಾದ ಸೇವೆ ಮಾಡುವವರಾಗಿದ್ದರೆ ನಾವು ಅವರಿಗೆ ಎಲ್ಲ ಸಹಾಯಗಳನ್ನು ಒದಗಿಸಿಕೊಡಬೇಕು. ಇಷ್ಟು ವಿಚಾರಗಳನ್ನು ತಿಳಿಸಿದ್ದೇನೆ ಮತ್ತು ಮಾನ್ಯ ಸದಸ್ಯರ ಸಲಹೆಗಳಿಗೆ ನಾನು ಸ್ವಾಗತ ಮಾಡುತ್ತಿದ್ದೇನೆ ಮತ್ತು ಎಲ್ಲ ಸದಸ್ಯರೂ ನಾನು ಇಲ್ಲಿ ಮಂಡಿಸಿರುವ ಬೇಡಿಕೆಗಳಿಗೆ ಸಂಪೂರ್ಣವಾದ ಬೆಂಬಲವನ್ನು ಕೊಡುತ್ತಾರೆಂದು ಭಾವಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಆರ್. ಡಿ. ಕಿತ್ತೂರು ರೆಗ್ಯುಲೇಟೆಡ್ ಮಾರ್ಕೆಟ್ ಶಾಖೆಯ ರಾಜ್ಯ ಸಚಿವರು) —ಮಾನ್ಯ ಅಧ್ಯಕ್ಷರೇ, ಮಾರ್ಕೆಟಿಂಗ್ ಕಮಿಟಿಗಳ ಬಗ್ಗೆ ನಾಲ್ಕು ಮಾತುಗಳನ್ನು ಆಡಬೇಕೆಂದು ಇದ್ದೇನೆ ನಮ್ಮ ಮೈಸೂರು ರಾಜ್ಯದಲ್ಲಿ 1971-72ನೇ ಸಾಲಿನಲ್ಲಿ 97 ಮಾರ್ಕೆಟ್ಟುಗಳು ಇದ್ದವು. ಈಗ ಇದು 107 ವರೆಗೆ ಏರಿದೆ ಇಂತಹ ಒಂದು ಸಂದರ್ಭದಲ್ಲಿ ವಿಚಾರ ಮಾಡಿದರೆ ನಮ್ಮ ಮಾರ್ಕೆಟ್ಟುಗಳಿಂದ ಒಂದು ವರ್ಷದಲ್ಲಿ ಸುಮಾರು 228 ಕೋಟಿ ರೂಪಾಯಿಯಷ್ಟು ವ್ಯಾಪಾರವಾಗಿದೆ. ಇದರ ಡೆವಲಪ್‌ಮೆಂಟು ಯಾವ ರೀತಿ ಇದೆ ಎಂದರೆ ನಮ್ಮ ಕರ್ಣಾಟಕ ರಾಜ್ಯದಲ್ಲಿ 74-75ನೇ ಸಾಲಿನಲ್ಲಿ 103 ಇದ್ದವು. ಈಗ 112ರ ವರೆಗೆ ಹೊಸವಾಗಿವೆ. ಒಂದು ವರ್ಷದಲ್ಲಿ ಇವೆಲ್ಲ ಮಾರ್ಕೆಟ್ಟುಗಳಿಂದ ಸುಮಾರು ನಾನೂರು ಕೋಟಿಗಿಂತ ಜಾಸ್ತಿ ವ್ಯಾಪಾರ ಮಾಡಿದ್ದಾರೆ. ಈ ಮಾರ್ಕೆಟ್ಟುಗಳಲ್ಲಿ ಮೊಟ್ಟಮೊದಲನೆಯದಾಗಿ ನಾವು ಮಾಡುವ ಸಹಾಯ ರೈತರಿಗೆ. ರೈತರಿಗೆ ಸಾಕಷ್ಟು ಪ್ರಮಾಣದಲ್ಲಿ ಅವರು ಇಳಿದು ಕೊಳ್ಳಲು ತಕ್ಕ ವಸತಿ ಮಾಡಿಕೊಡಬೇಕು ಮತ್ತು ಸರಿಯಾದ ತೂಕದಲ್ಲಿ ಪದಾರ್ಥಗಳನ್ನು ಜನರಿಗೆ ಹಂಚುವ ವ್ಯವಸ್ಥೆ ಮಾಡಬೇಕು ಇದಕ್ಕೆ ತಕ್ಕ ಸೌಕರ್ಯಗಳನ್ನು ಮಾರ್ಕೆಟಿಂಗು ಕಮಿಟಿಗಳವರು ಮಾಡಿಕೊಡಬೇಕು ಮತ್ತು ಸರಕಾರದವರು ಕೂಡ ಮಾರ್ಕೆಟಿಂಗು ಕಮಿಟಿಗಳಿಗೆ ತಕ್ಕ ಸೌಕರ್ಯಗಳನ್ನು ಮಾಡಿಕೊಡಬೇಕು. ಮುಖ್ಯವಾಗಿ ಆಕ್ಷನ್ ಪ್ಲಾಟುಫಾರಂಗಳು, ಪವದು, ಸ್ಯಾನಿಟರಿ ಹಾಗೂ ವಾಟರು ಸಪ್ಲೈ ಇವುಗಳನ್ನು ಮಾಡಿಕೊಡುವುದು, ಸ್ಟೋರೇಜು ಫೆಸಿಲಿಟೀಸ್‌ಗಳು ಇವು ಹಿಂದೆ ಸಾಕಾದಷ್ಟು ಇರಲಿಲ್ಲ. ಈಗ ಮಾರ್ಕೆಟಿಂಗು ಕಮಿಟಿಗಳನ್ನು ಮಾಡಿ ಇದರ ಮೂಲಕ ಸುವ್ಯವಸ್ಥೆ ಮಾಡಿ ಕೊಡುತ್ತಲಿದ್ದಾರೆ. ಆದರೆ ಇಂತಹ ಮಾರ್ಕೆಟಿಂಗ್ ಕಮಿಟಿಗಳ ವ್ಯವಹಾರವನ್ನು ಸರಿಯಾಗಿ ತನಿಖೆ ಮಾಡಲು ಒಂದು ಅಡಿಟ್ ಸೆಲ್ ಮಾಡಿ ಕರ್ಣಾಟಕದ ಎಲ್ಲ ಭಾಗಗಳಲ್ಲಿರುವ ಕಮಿಟಿಗಳಲ್ಲಿ ಆಡಿಟ್ ಕೆಲಸಗಳನ್ನು ಮಾಡುವುದು ಬಹು ಮುಖ್ಯ.

ಮಾನ್ಯ ಅಧ್ಯಕ್ಷರೇ, ಇಂತಹ ಒಂದು ಪ್ರಗತಿಶೀಲ ರಾಜ್ಯದಲ್ಲಿ ನಮ್ಮ ರೈತರು ಉತ್ಪನ್ನ ಮಾಡುವ ವಸ್ತುಗಳು ಏನಿವೆ, ಅವುಗಳಿಗೆ ಒಳ್ಳೆಯ ಬೆಲೆ ಸಿಗಬೇಕು ಮತ್ತು ಮಾರುಕಟ್ಟೆಯ ಸೌಕರ್ಯ ಸಿಗಬೇಕೆಂಬ ದೃಷ್ಟಿಯಿಂದ ಇಂಜಿನಿಯರಿಂಗ್ ಸೆಲ್‌ನ್ನು ಸ್ಥಾಪನೆ ಮಾಡಿದ್ದೇವೆ. ಇದನ್ನು ನಮ್ಮ ಕರ್ನಾಟಕ ರಾಜ್ಯದ ಮೂರು ಭಾಗದಲ್ಲಿ ಮಾಡಿದ್ದೇವೆ ಬೆಳಗಾಂ ಡಿವಿಜನ್‌ನಲ್ಲಿ ಒಂದು, ಗುಲ್ಬರ್ಗ ಡಿವಿಜನ್ ನಲ್ಲಿ ಒಂದು, ಅದೇ ತರಹ ಮೈಸೂರು ಮತ್ತು ಬೆಂಗಳೂರು ಡಿವಿಜನ್‌ಗಳಲ್ಲಿ ಒಂದು, ಈ ತರಹ 3 ಇಂಜಿನಿಯರಿಂಗ್ ಸೆಲ್‌ಗಳನ್ನು ಮಾಡಿದ್ದೇವೆ. ಪ್ರತಿಯೊಂದು ಕಡೆಯೂ ಸಿವಿಲ್ ವರ್ಕ್ಸ್ ಜೇಗಬೇಗ ಆಗಬೇಕೆಂಬುದೇ ಸರ್ಕಾರದ ಮುಖ್ಯವಾದ ಉದ್ದೇಶವಾಗಿದೆ. 1973ರಲ್ಲಿ ನಮ್ಮ ಕರ್ನಾಟಕ ಸರ್ಕಾರ ವಿಶ್ವ ಬ್ಯಾಂಕ್‌ನಿಂದ ಸಾಲ ಪಡೆಯುವ ಬಗ್ಗೆ ಒಂದು ಅಗ್ರಿಮೆಂಟ್ ಮಾಡಿಕೊಂಡಿದೆ. ಅದರಂತೆ ನಮ್ಮ ಸರ್ಕಾರಕ್ಕೆ ಒಂಭತ್ತೂವರೆ ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಈಗಾಗಲೇ ನಮ್ಮ ಸ್ಟೇಟ್‌ನಲ್ಲಿ 59 ಮಾರ್ಕೆಟ್‌ಗಳನ್ನು ಡೆವಲಪ್ ಮೆಂಟ್ ಸ್ಕೀಮ್‌ನಿಂದ ತೆಗೆದುಕೊಳ್ಳುತ್ತಿದ್ದೇವೆ. ಮಾರ್ಕೆಟ್ ಯಾರ್ಡ್‌ನಲ್ಲಿ ಮಾರ್ಕೆಟ್ ಡೆವಲಪ್‌ಮೆಂಟಿಗೋಸ್ಕರ ಈಗಾಗಲೇ 12 ಮಾರ್ಕೆಟಿಂಗ್ ಕೆಲಸ ಪ್ರಾರಂಭವಾಗಿದೆ. ಮತ್ತು 12 ಮಾರ್ಕೆಟಿಂಗ್ ಕಮಿಟಿಗಳಲ್ಲಿ ಅಪ್ರೈಸಲ್ ವರ್ಕ್ಸ್ ಮುಗಿದಿದೆ. ಮಾರ್ಕೆಟ್ ಫಂಕ್ಷನರೀಸ್‌ಗೋಸ್ಕರ ಸಹ ಸಾಕಷ್ಟು ಕಡೆಗಳಲ್ಲಿ ಗೋಡೌನ್‌ಗಳನ್ನು ಕಟ್ಟುತ್ತಿದ್ದೇವೆ. ಸನ್ಮಾನ್ಯ ಮಂಜುನಾಥ್ ಅವರು ಬೆಂಗಳೂರು ಮಾರ್ಕೆಟ್ ವಿಷಯದ ಬಗ್ಗೆ ಮಾತನಾಡಿದರು. ಬೆಂಗಳೂರು ಮಾರ್ಕೆಟ್‌ನ್ನು ಯಶವಂತಪುರಕ್ಕೆ ಷಿಫ್ಟ್ ಮಾಡಬೇಕೆಂದು ಅಲ್ಲಿ ಈಗಾಗಲೇ ಆಫೀಸ್ ಬಿಲ್ಡಿಂಗ್ ಮತ್ತು ಅಂಗಡಿಗಳನ್ನು ಕಟ್ಟಲಾಗುತ್ತಿದೆ ಆ ಜಾಗದಲ್ಲಿ ಒಳ್ಳೆಯ ತರಹದಿಂದ ಮಾರ್ಕೆಟ್ ನಡೆಸಬೇಕೆಂಬುದೇ ಸರ್ಕಾರದ ಉದ್ದೇಶವಾಗಿದೆ. ಮತ್ತು ಬೆಂಗಳೂರಿನಲ್ಲಿ ಅದು ಅತ್ಯಂತ ಪ್ರಗತಿಶೀಲವಾದ ಒಂದು ಮಾರ್ಕೆಟ್ ಆಗಬೇಕೆಂಬ ಉದ್ದೇಶ ಇಟ್ಟುಕೊಂಡು ಕೆಲಸವನ್ನು ಮಾಡಲಾಗುತ್ತಿದೆ. ಮಾನ್ಯ ಕಕ್ಕಿಲ್ಲಾಯ ಅವರು ಮಂಗಳೂರು ಬಗ್ಗೆ ಒಂದು ವಿಷಯ ಪ್ರಸ್ತಾಪ ಮಾಡಿದರು. ಅಲ್ಲಿ ಈಗಾಗಲೇ ಭೂಮಿಯನ್ನು ಅಕ್ವೈರ್ ಮಾಡಿದ್ದೇವೆ. ಮಾರ್ಕೆಟ್ ಯಾರ್ಡ್ ಸ್ಥಾಪನೆ ಮಾಡುವುದಕ್ಕೆ ಮತ್ತು ಆ ಭೂಮಿಗೆ ಸೂಕ್ತ ಪರಿಹಾರವನ್ನು ಸಂಬಂಧಪಟ್ಟ ರೈತರಿಗೆ ಕೊಡಬೇಕೆಂದು ಅಲ್ಲಿಯ ಜಿಲ್ಲಾಧಿಕಾರಿಯವರಿಗೆ ಹೇಳಿದ್ದೇವೆ. ಮಾನ್ಯ ಕೆ. ಆರ್. ಎಸ್. ನಾಯ್ಡು ಅವರು ಮಾತನಾಡುವಾಗ ಮಾರ್ಕೆಟ್ ಯಾರ್ಡ್‌ನಲ್ಲಿ ರೈತ ಭವನವನ್ನು ಕಟ್ಟಿಸಬೇಕೆಂದು ತಿಳಿಸಿದರು. ಈ ವಿಷಯದಲ್ಲಿ ಸಹ ಸರ್ಕಾರ ತುಂಬು ಮನಸ್ಸಿನಿಂದ ಕೆಲಸ ಮಾಡುತ್ತಿದೆ. ಪ್ರತಿಯೊಂದು ಮಾರ್ಕೆಟ್‌ನಲ್ಲಿಯೂ ರೈತ ಭವನ ಆಗಬೇಕು. ಅದು ರೈತರಿಗೆ ವಿಶ್ರಾಂತಿಸ್ಥಾನವಾಗಬೇಕು ಎಂಬುದೇ ಸರ್ಕಾರದ ಭಾವನೆಯಾಗಿದೆ. ಇದರ ಜೊತೆಗೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಒಂದು ಮಾರ್ಕೆಟಿಂಗ್ ಬೋರ್ಡ್ ಎಂದು ಸ್ಥಾಪನೆಯಾಗಿದೆ. ಆ ಬೋರ್ಡಿ ನಿಂದ ಕೆಲವು ಸಣ್ಣ ಮಾರ್ಕೆಟ್‌ಗಳಿಗೆ ಧನಸಹಾಯ ಮಾಡಿ ಪ್ರತಿಯೊಂದು

(ಶ್ರೀ ಆರ್. ಡಿ. ಕಿತ್ತೂರು)

ಮಾರ್ಕೆಟ್‌ನಲ್ಲಿಯೂ ಒಳ್ಳೆಯ ಸೌಕರ್ಯವನ್ನು ಕಲ್ಪಿಸಿಕೊಟ್ಟು, ಆ ಮೂಲಕ ರೈತರಿಗೆ ಅನುಕೂಲ ಮಾಡಿಕೊಡಬೇಕೆಂಬುದೇ ಸರ್ಕಾರದ ಉದ್ದೇಶವಾಗಿದೆ. ಅದಕ್ಕಾಗಿ ಸಾಲ ಸಹ ಈ ಬೋರ್ಡ್ ಮೂಲಕ ಕೊಡುತ್ತಿದ್ದೇವೆ.

ಇನ್ನು ಕೊನೆಯದಾಗಿ ನಮ್ಮಲ್ಲಿ ಈಗ 103 ಮಾರ್ಕೆಟ್ ಕಮಿಟಿಗಳು ಇವೆ, ಆ ಕಮಿಟಿಗಳಲ್ಲಿ ಕೆಲಸ ಮಾಡಲು ನೌಕರರನ್ನು ಆ ಕಮಿಟಿಯವರೇ ನೇಮಕ ಮಾಡಿಕೊಳ್ಳುತ್ತಿದ್ದಾರೆ. ಆದರೆ ಈ ನೌಕರರಿಗೆ ಪ್ರಮೋಷನ್‌ಗೆ ಅವಕಾಶವಿಲ್ಲ ವಾಗಿದೆ. ಅದಕ್ಕೋಸ್ಕರ ಈಗಿನ ಮಾರ್ಕೆಟ್ ಕಮಿಟಿಯ ಕೇಡರ್ ಆಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಇವೆ. ಅದನ್ನು ಸೂಕ್ತ ಬದಲಾವಣೆ ಮಾಡುವುದರ ಮೂಲಕ, ಈ ನೌಕರರನ್ನು ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ವರ್ಗ ಮಾಡಲು ಅವಕಾಶ ಮಾಡಿಕೊಡಬೇಕೆಂದಿದ್ದೇವೆ. ಇದರಿಂದ ಅವರ ಒಂದು ಪ್ರೊಫೆಷನಲ್ ಸ್ಕೀಂ ಸಹ ಉತ್ತಮವಾಗುತ್ತದೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

7-00 P. M.

BUSINESS OF THE HOUSE

MADAM SPEAKER :—We will not have Question Hour on Saturday.

The Business Advisory Committee at a sitting held to-day have decided that the present sittings of the Assembly may be adjourned on 10th April as scheduled and the House may sit again from 15th to 19th.

The following will be the programme of business between 31st March and 19th April, 1975.

31st March, 1975	Legislative Business : consideration and passing of the University of Health Sciences Bill.
1st to 8th April	Non official Business as already scheduled.